3. ಅಧ್ಯಕ್ಷರ ಅಪ್ಪಣೆಯ ಮೇರೆಗೆ :
ವಿಷಯ: ಕಾವೇರಿ ನ್ಯಾಯ ಮಂಡಳಿಯ ತೀರ್ಪಿನ ಬಗ್ಗೆ.
(ಮುಂದುವರಿದ ಚರ್ಚೆ)

ಶ್ರೀ ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ): ಮಾನ್ಯ ಅಧ್ಯಕ್ಷರೆ, ನನಗೆ ಕಾವೇರಿ ವಿಚಾರದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಲು ಬಯಸುತ್ತೇನೆ. ನಮ್ಮ ದೇಶ ಪರಕೀಯರ ಆಡಳಿತದಲ್ಲಿ ಇದ್ದಾಗ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮೂಲಕ ತ್ಯಾಗ ಬಲಿದಾನಗಳನ್ನು ಮಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಸ್ವಾತಂತ್ರ್ಯದ ಮೂಲ ಉದ್ದೇಶ ದೇಶದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡಬೇಕು. ಅಸ್ಪೃಶ್ಯತೆಯನ್ನು ನಿವಾರಿಸಬೇಕು ಮತ್ತು ದೇಶೀಯ ಪದ್ಧತಿಯ ಆಡಳಿತದ ಮೂಲಕ ದೇಶದ ಜನರು ಸಮೃದ್ಧತೆಯಿಂದ ಬದುಕುವುದಕ್ಕೆ ನಾವೆಲ್ಲರೂ ಕೂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಸ್ವಾತಂತ್ರ್ಯದ ಉದ್ದೇಶಗಳನ್ನು ಗಾಂಧೀಜಿಯವರು ನಮಗೆ ಹೇಳಿ ಹೋಗಿದ್ದಾರೆ. ನೀರು ಒಂದು ರಾಷ್ಟ್ರೀಯ ಸ್ವತ್ತು. ವ್ಯವಸಾಯ ಅಥವಾ ಕೃಷಿ, ಅದು ರಾಷ್ಟ್ರೀಯ ಕಸುಬು. ರಾಷ್ಟ್ರೀಯ ಸ್ವತ್ತು ಮತ್ತು ರಾಷ್ಟ್ರೀಯ ಕಸುಬನ್ನು ಇಡೀ ದೇಶದ ಉದ್ದಗಲಕ್ಕೂ ಸಮಾನವಾಗಿ, ನ್ಯಾಯಸಮ್ಮತವಾಗಿ, ಹಂಚುವುದರ ಮುಖಾಂತರ ನಮ್ಮ ದೇಶೀಯ ಕಸುಬಾದ ವ್ಯವಸಾಯವನ್ನು ಎದುರಿಸುತ್ತಿರತಕ್ಕಂಥ ಕೃಷಿ ಕಾರ್ಮಿಕರ ಬದುಕನ್ನು ಹಸನುಗೊಳಿಸುವಂಥಾದ್ದು ದೇಶದ ಗಣತಂತ್ರದ ವ್ಯವಸ್ಥೆಯ ಮೂಲ ಉದ್ದೇಶ ಮತ್ತು ಕರ್ತವ್ಯವಾಗಿರಬೇಕು. ಆ ಒಂದು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡುವುದರ ಮುಖಾಂತರ ನಾವು ಒಂದು ಬಲಿಷ್ಠ ರಾಷ್ಟ್ರದ ನಿರ್ಮಾಣಕ್ಕೆ ಕಾರಣೀಭೂತರಾಗಬೇಕು. ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ದೂರದೃಷ್ಟಿ ಇಟ್ಟುಕೊಂಡು ನಾವು ಇಡೀ ದೇಶದ ಕಸುಬನ್ನು ಮತ್ತು ರಾಷ್ಟ್ರೀಯ ಸ್ವತ್ತನ್ನು ಬಳಕೆ ಮಾಡುವಾಗ ಅದರ ಉಪಯೋಗ ಮಾಡುವಾಗ, ಬೆಳವಣಿಗೆ ಮಾಡುವಾಗ ಸಮತೋಲನದ ದೃಷ್ಟಿಕೋನ ಹೊಂದಿರಲೇಬೇಕಾಗುತ್ತದೆ. ನಮ್ಮ ಸಂವಿಧಾನದ ಮೊದಲನೇ ಪುಟ ತೆಗೆದಾಗ ಅದರಲ್ಲಿ ಕಂಡಂಥ ಮೊದಲನೇ ವಾಕ್ಯ Justice. ಅಂದರೆ, ನ್ಯಾಯ. ಎಂತಹ ನ್ಯಾಯವೆಂದರೆ, ಸಾಮಾಜಿಕ ನ್ಯಾಯ. ಇವತ್ತು ನಮ್ಮ ದೇಶದ ನ್ಯಾಯ ವ್ಯವಸ್ಥೆ ಬಗ್ಗೆ ನಾವೆಲ್ಲರೂ ನಂಬಿಕೆ, ಭರವಸೆ ಇಟ್ಟುಕೊಳ್ಳಬೇಕಾಗುತ್ತದೆ. ಅದರ ಪ್ರಕಾರ ನಾವು

ನಡೆದುಕೊಳ್ಳಬೇಕಾಗುತ್ತದೆ. ಸಂವಿಧಾನದ ಮೊದಲನೇ ಪುಟದ ಮೊದಲನೇ ವಾಕ್ಯ Justice ಎಂದು ಬರೆದ ನಂತರ, ಇವತ್ತಿನ ದಿವಸ ಕಾವೇರಿ ನ್ಯಾಯ ಮಂಡಳಿಯ ತೀರ್ಪು ನಮಗೆ ನ್ಯಾಯಸಮ್ಮತವಾಗದಿರುವುದರಿಂದ ಆ ನ್ಯಾಯವನ್ನು ನಾವು ಒಪ್ಪಿ ಗೌರವಿಸತಕ್ಕಂಥ ಪ್ರಜಾಪ್ರಭುತ್ವದ ಒಂದು ಪರಿಪಾಠ ಹೊಂದಿದ್ದರೂ, ನಮಗೆ ಅನ್ಯಾಯವಾದಾಗ ನಮ್ಮ ರಾಜ್ಯಕ್ಕೆ ಸಮತೋಲನವಾಗಿ ಹಂಚಿಕೆಯಾಗಬೇಕಾದಂಥ ರಾಷ್ಟ್ರೀಯ ಸ್ವತ್ತು ನೀರು. ರಾಷ್ಟ್ರೀಯ ಕಸುಬಾದ ಕೃಷಿ ಬೆಳವಣಿಗೆ ಕುಂಠಿತವಾದಾಗ ನಮ್ಮ ಗಣತಂತ್ರದ ವ್ಯವಸ್ಥೆಯನ್ನು ಸಮಾನವಾಗಿ ಕಟ್ಟತಕ್ಕಂಥಾದ್ದಕ್ಕೆ ಒಂದು ದೊಡ್ಡ ಪೆಟ್ಟು ಕೊಟ್ಟಿದ್ದಾರೆ. ಆ ಪೆಟ್ಟು ನಮ್ಮ ರಾಜ್ಯದ ಕಾವೇರಿ ನೀರಾವರಿ ಪ್ರದೇಶದ ಜನರಿಗೆ ನುಂಗಲಾರದ ತುತ್ತಾಗಿದೆ. ಈ ನ್ಯಾಯವನ್ನು ಅನುಷ್ಠಾನಗೊಳಿಸುವುದಕ್ಕೆ ಅಥವಾ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗದಿರುವಂಥ ಪರಿಸ್ಥಿತಿ ಮತ್ತು ಇದನ್ನು ಅನುಷ್ಠಾನಗೊಳಿಸುವುದಕ್ಕೆ ಕಷ್ಟವಾಗಿರುವ ಪರಿಸ್ಥಿತಿ ರಾಜ್ಯದ ಎಲ್ಲಾ ಜನರಿಗೂ ಕೂಡ ಮನವರಿಕೆಯಾಗಿರುವುದರಿಂದ ಇವತ್ತು ನಾವೆಲ್ಲರೂ ಸೇರಿ ಈ ತೀರ್ಪಿನ ಪ್ರಮುಖ ಅಂಶಗಳೇನಿವೆ, ಅಂದರೆ ಸುಮಾರು 740 tmcಯಷ್ಟು ನೀರು ನಮ್ಮ ರಾಜ್ಯದಿಂದ ಉತ್ಪಾದನೆಯಾಗುತ್ತದೆ. Total availability 740 tmcಯಷ್ಟು ಸಿಕ್ಕಿದರೆ, ಅದರಲ್ಲಿ ಸುಮಾರು 392 tmcಯಷ್ಟು ನೀರು ನಮ್ಮ ರಾಜ್ಯದಿಂದ ಸಿಗುತ್ತದೆ. ನಮಗೆ ಕೊಟ್ಟಿರತಕ್ಕಂಥಾದ್ದು 270 tmc. ತಮಿಳುನಾಡಿನಲ್ಲಿ ಸಿಗುತ್ತಿರತಕ್ಕಂಥಾದ್ದು 232 tmc. ಅವರಿಗೆ ಕೊಟ್ಟಿರುವುದು 419 tmc. ಅಲ್ಲಿರತಕ್ಕಂಥ ಅಂತರ್ಜಲ ನೀರು 72 tmc, environment ಮತ್ತು ಸಮುದ್ರಕ್ಕೆ 14 tmc, ಕೇರಳಕ್ಕೆ ಕೊಟ್ಟಂಥ 21 tmc, ಒಟ್ಟಾರೆ ಸುಮಾರು 526 tmc. ಈ ಅಂಶಗಳನ್ನು ನೋಡಿದಾಗ ನಮಗೆ ಸ್ಪಷ್ಟವಾಗಿ ಗೊತ್ತಾಗುವುದೇನೆಂದರೆ, ನ್ಯಾಯಮಂಡಳಿ ಈ ರಾಷ್ಟ್ರೀಯ ಸ್ವತ್ತಾದ ನೀರನ್ನು, ರಾಷ್ಟ್ರೀಯ ಕಸುಬಾದ ವ್ಯವಸಾಯವನ್ನು ಸಮಾನ ದೃಷ್ಟಿಕೋನದಿಂದ, ನ್ಯಾಯಸಮ್ಮತವಾಗಿ ವಿತರಿಸಬೇಕೆಂದು ಅವರ ಗಮನಕ್ಕೆ ಬಂದಿದ್ದೇ ಆಗಿದ್ದರೆ, ಈ ತರಹದ ತೀರ್ಮಾನಕ್ಕೆ, ನಿರ್ಧಾರಕ್ಕೆ ಅವರು ಬರುತ್ತಿದ್ದರೆಂದು ನನಗಂತೂ ಅನಿಸುವುದಿಲ್ಲ. ಅದರ ಜೊತೆಗೆ, 22 ಲಕ್ಷ ಎಕರೆಯಲ್ಲಿ ನೀವು ಭತ್ತ ಬೆಳೆಯಬೇಕೆಂದು ತಮಿಳುನಾಡಿಗೆ ಹೇಳಿದ್ದಾರೆ. ನಮಗೆ 7 ಲಕ್ಷಕ್ಕೆ ಅಲ್ಲಿಗೇ ನಿಲ್ಲಿಸಿದ್ದಾರೆ. ಅವರನ್ನು ಸುಮಾರು 7 ಲಕ್ಷ

ಎಕರೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಹೇಳಿದ್ದಾರೆ. ನಮಗೆ 40 ಸಾವಿರಕ್ಕೆ ನಿಲ್ಲಿಸಿದ್ದಾರೆ. ನಮ್ಮಲ್ಲಿ ಬೆಳೆದು ನಿಂತಿರುವ ಕಬ್ಬು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಎಕರೆಯಲ್ಲಿದೆ. ಈ ಎಲ್ಲಾ ವಿಚಾರಗಳನ್ನೂ ಒಮ್ಮೆ ನೋಡಿದಾಗ, ಎಲ್ಲಾ ಹಿರಿಯ ಮಾನ್ಯ ಹಿರಿಯ ಸದಸ್ಯರು ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನ್ಯಾಯಮಂಡಳಿಯ ಇಂತಹ ಒಂದು ತೀರ್ಪು ಸ್ವಾತಂತ್ರ್ಯದ ಉದ್ದೇಶಕ್ಕೆ ವಿರುದ್ಧವಾದುದಷ್ಟೇ. ರಾಜ್ಯಾಂಗದ ಮೂಲ ಆಶಯ, ನ್ಯಾಯಕ್ಕೇ ವಿರುದ್ಧವಾಗಿರತಕ್ಕಂಥಾದ್ದು. ಇವತ್ತು ರಷ್ಯಾ ಒಂದು mighty country. ಗಣತಂತ್ರದ 'ಪೆರಸ್ತ್ರೋಯ್ಕ' ಎಂಬ ಪದ್ಧತಿಯನ್ನು ಅಳವಡಿಸಿಕೊಂಡು ಇವತ್ತು ಒಂದು ಕಿಲೋಮೀಟರ್ ದೂರದಿಂದ ಬ್ರೆಡ್ ಕೊಂಡುಕೊಳ್ಳುವ ಪರಿಸ್ಥಿತಿ, ಬಂದು a mighty country like Russia has dis-integrated today. ಗಣತಂತ್ರದ ವ್ಯವಸ್ಥೆಯಲ್ಲಿ ಎಲ್ಲಾ ರಾಜ್ಯಗಳೂ ಸರ್ವತೋಮುಖ ಸಮೃದ್ಧಿಯ ಬೆಳವಣಿಗೆ ಮಾಡತಕ್ಕಂಥ ತೀರ್ಮಾನವನ್ನು ನಮ್ಮ ರಾಜ್ಯಾಂಗದ ಎಲ್ಲಾ ವಿಭಾಗಗಳನ್ನೂ ಸರಿಯಾಗಿ ನೋಡಿಕೊಳ್ಳದೇ ಹೋದರೆ, ಈ ದೇಶದಲ್ಲಿ ಈಗಾಗಲೇ ಅಸಮಾನತೆಯ ಸಮಾಜ ಇದೆ. ದೊಡ್ಡ ಪಜಾಪ್ರಭುತ್ವದ ದೇಶದಲ್ಲಿ ಅಸಮಾನತೆಯ ಸಮಾಜವನ್ನು ಈಗ ನೋಡುತ್ತಿದ್ದೇವೆ. ಇಂತಹ ಅಸಮಾನತೆಯ ಸಮಾಜವನ್ನು ಸಮಾನತೆಯ ಸಮಾಜದ ಕಡೆಗೆ ಕೊಂಡೊಯ್ಯಬೇಕಾದರೆ, ರಾಜಕೀಯ ಪಕ್ಷಗಳ ದೃಷ್ಟಿಕೋನ ಸ್ಪಷ್ಟವಾಗಿ ಇರಬೇಕಾಗುತ್ತದೆ. ನ್ಯಾಯಾಂಗದ ದೃಷ್ಟಿಕೋನ ಸಂವಿಧಾನದ ಮೊದಲನೇ ಪುಟದ ಕಡೆಗೆ ಹೋಗಬೇಕಾಗುತ್ತದೆ. ಈ ತೀರ್ಮಾನ ಇವತ್ತು ನಮ್ಮ ರಾಜ್ಯಕ್ಕೆ ಮಾರಕವಾಗಿರತಕ್ಕಂಥ ತೀರ್ಮಾನವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದೇ ಇರತಕ್ಕಂಥ ಪರಿಸ್ಥಿತಿಯನ್ನು ಈ ನ್ಯಾಯಮಂಡಳಿ ಇವತ್ತು ದೇಶದಲ್ಲಿ ಸೃಷ್ಟಿಸಿರುವುದರಿಂದ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಲೇಬೇಕಾಗುತ್ತದೆ. ನಾವೆಲ್ಲರೂ ಕೂಡ ಒಗ್ಗಟ್ಟಾಗಿ ನಿಂತು ನಮಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕೇಂದ್ರದ ಮೇಲೆ ಒತ್ತಾಯವನ್ನು ರಾಜಕೀಯವಾಗಿ ಮಾಡತಕ್ಕಂಥ ಪ್ರಯತ್ನ ಒಂದು ಕಡೆಯಾದರೆ, ನ್ಯಾಯದ ಸಮರವನ್ನು ಮತ್ತೊಂದು ಕಡೆ ಮಾಡಲೇಬೇಕಾಗುತ್ತದೆ. ಇವತ್ತು ಕಬಿನಿಯಲ್ಲಿ backward classess, SC ಜನರೆಲ್ಲರೂ ಹೆಚ್ಚು ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ನಾವು ಕೇಳಿದ್ದು ಸುಮಾರು 59 tmc, ಕೊಟ್ಟಿರುವುದು 12 tmc. ವರುಣಾ ನಾಲೆಗೆ 10 tmc

ಕೇಳಿದ್ದರೆ, 5.9 tmc ಕೊಟ್ಟಿದ್ದಾರೆ. ಬೆಂಗಳೂರಿಗೆ ಕುಡಿಯುವ ನೀರಿಗೆಂದು 30 tmc ಯಷ್ಟು ಅತ್ಯಂತ ಕಡಿಮೆ ಪ್ರಮಾಣದ ನೀರು ಕೊಟ್ಟಿದ್ದಾರೆ. ಇಂತಹ ಅವೈಜ್ಞಾನಿಕ ತೀರ್ಮಾನಗಳು ಗಣತಂತ್ರದ ವ್ಯವಸ್ಥೆಗೆ ಮಾರಕವಾಗಿವೆ. ಇವತ್ತು ದೇಶ ಕಂಡಂಥ ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ 6 ಜನರನ್ನು ಜೀವಂತವಾಗಿ ಸುಟ್ಟಿರತಕ್ಕಂಥ ಘಟನೆ ಬಗ್ಗೆ ನ್ಯಾಯಾಲಯ ಖುಲ್ಲಾ ಮಾಡಿದೆಯೆಂದರೆ, ಈ ಸಂವಿಧಾನದ ಮೊದಲನೇ ಪುಟ ಯಾವ ರೀತಿ ಇದೆ ಎಂಬುದು ಗೊತ್ತಾಗುತ್ತದೆ. ಈ ಸದನ ಕೂಡ ಅಂತಹ ವಿಚಾರಗಳನ್ನು ಎತ್ತಿಕೊಳ್ಳಬೇಕಾಗುತ್ತದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇವತ್ತು ನ್ಯಾಯಾಲಯದ ತೀರ್ಪಿನಿಂದ ರಾಜ್ಯದ ಅಭಿವೃದ್ಧಿಗೆ ಮಾರಕವಾಗಿದೆ, ಸ್ವಾತಂತ್ರ್ಯದ ಉದ್ದೇಶಕ್ಕೆ ವಿರುದ್ಧವಾಗಿದೆ. ಇವತ್ತು ದೇಶದ ಮೂಲ ಕಸುಬಾದ ಕೃಷಿಯ ಸರ್ವತೋಮುಖ ಬೆಳವಣಿಗೆಗೆ ಮಾರಕವಾದ, ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಉದ್ಯೋಗ ನಶಿಸಿ ಹೋಗತಕ್ಕಂಥ ಪರಿಸ್ಥಿತಿಯಿಂದಾಗಿ ಇವತ್ತು ದೇಶದಲ್ಲಿರುವ ನಕ್ಸಲೀಯ ಚಳವಳಿ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯ ಹಿನ್ನೆಲೆ ಹೊಂದಿವೆ. ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಬೆಳವಣಿಗೆಯಾಗಬೇಕಾದರೆ, ದೇಶೀಯ ಪದ್ಧತಿಗಳು ಬೆಳವಣಿಗೆ ಆಗಲೇಬೇಕಾಗುತ್ತದೆ. ಅದಕ್ಕೋಸ್ಕರ, ಇವತ್ತು ನ್ಯಾಯಾಲಯ ಕೊಟ್ಟಿರುವ ತೀರ್ಪು ರಾಜ್ಯಕ್ಕೆ ಮಾರಕವಾಗಿದೆ. ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಿಲ್ಲ. ನ್ಯಾಯಮಂಡಳಿಯು ಇದನ್ನು ಪುನರ್ ಪರಿಶೀಲಿಸುವುದಕ್ಕೆ ರಾಜ್ಯ ಸರ್ಕಾರ ಒತ್ತಾಯವನ್ನು ತಂದು ಈಗಾಗಲೇ ಕೇಂದ್ರದ ಮುಂದೆ ನಮ್ಮ ರಾಜ್ಯದ ಎಲ್ಲಾ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರುಗಳು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದಾರೆ, ವಿಷಯ ಮನವರಿಕೆ ಮಾಡಿದ್ದಾರೆ. ಕೇಂದ್ರದ ಜಲ ಸಂಪನ್ಮೂಲ ಖಾತೆ ಸಚಿವರು ಒಂದು ವರ್ಷ Notification ಮಾಡುವುದಿಲ್ಲವೆಂದು ಪತ್ರಿಕೆಗಳ ಮೂಲಕ ತಿಳಿಸಿದ್ದಾರೆ. ಅನೇಕ ರಾಜ್ಯಗಳಲ್ಲಿ ಇಂತಹುದೇ ತೀರ್ಮಾನಗಳು ಬಂದು ಹತ್ತು ವರ್ಷಗಳಾದರೂ ಅನುಷ್ಠಾನಗೊಳಿಸುವುದಕ್ಕಾಗಿಲ್ಲ. ಪಂಜಾಬ್ ಮತ್ತು ಹರಿಯಾಣದಲ್ಲಿ ಇಂತಹ ದೊಡ್ಡ ಹೋರಾಟಗಳು ನಡೆದವು. 10 ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆ ಏನು ಆಗಬೇಕಾಗಿತ್ತೋ, ಅದು ಕುಂಠಿತವಾಯಿತು, ಉದ್ಯೋಗ ನಷ್ಟವಾಯಿತು ಮತ್ತು ಜನಜೀವನ ಹಾಳಾಯಿತು. ಇಂತಹ ಪರಿಸ್ಥಿತಿಗೆ ಅವಕಾಶ ಕೊಡದೇ, ಸಾಮಾಜಿಕ

ಬದಲಾವಣೆ ಮತ್ತು ಭಾರತದ ಪುನರ್ ನಿರ್ಮಾಣ ಅತ್ಯಂತ ಪ್ರಾಮುಖ್ಯವಾದ ಸಂಗತಿಯಾಗಿರುವುದರಿಂದ ದೇಶದ ಅಭಿವೃದ್ಧಿ ಬಹಳ ಮುಖ್ಯವಾಗಿ ರಾಷ್ಟ್ರೀಯ ಸಂಪತ್ತಾದ ಕೃಷಿಯ ಉತ್ಪಾದನೆಯು ರಾಷ್ಟ್ರೀಯ ಸಂಪನ್ಮೂಲವಾಗಿರುವುದರಿಂದ ದೇಶದ ಸ್ವಾವಲಂಬನೆ ಕೂಡ ಇಲ್ಲಿ ಅಡಕವಾಗಿರುವುದರಿಂದ ಇವತ್ತು ಕಾವೇರಿ ತೀರ್ಪಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಿರುವುದರಿಂದ, ತೀರ್ಪನ್ನು ಪುನರ್ ಪರಿಶೀಲನೆ ಮಾಡಿ, ಕೇಂದ್ರ ಸರ್ಕಾರ 4 ರಾಜ್ಯಗಳ ಸಭೆ ಕರೆದು ಮಧ್ಯಸ್ಥಿಕೆ ವಹಿಸಿ, ಇದನ್ನು ಮಾತುಕತೆಗಳ ಮೂಲಕ ಇತ್ಯರ್ಥಗೊಳಿಸಬೇಕು. 16 ವರ್ಷಗಳಲ್ಲಿ ನಡೆದ ವಿದ್ಯಮಾನಗಳನ್ನು ನೋಡಿದಾಗ, Tribunalನವರು ಹೇಳಿದ್ದಾರೆ, 12 ವರ್ಷಗಳಲ್ಲಿ ಯಾವುದೇ ವಿವಾದ ಇಲ್ಲದೇ ಅವರಿಗೆ ಬೇಕಾದಷ್ಟು ನೀರು ಹರಿದು ಹೋಗಿದೆ. 4 ವರ್ಷಗಳಲ್ಲಿ ಮಳೆ ಇಲ್ಲದಿದ್ದಾಗ ಮಾತ್ರ ಅವರಿಗೆ ಬೇಕಾದಷ್ಟು ನೀರು ಕೊಡುವುದಕ್ಕಾಗಲಿಲ್ಲ. ನಮಗೆ ಮಳೆ ಇಲ್ಲದಿದ್ದರೆ, ಅವರಿಗೆ ನೀರು ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. 16 ವರ್ಷಗಳಲ್ಲಿ 12 ವರ್ಷಗಳು ಸಮರ್ಪಕವಾಗಿ ನೀರು ಹರಿದು ಹೋದನಂತರ, ಇಂತಹ ತೀರ್ಪು ರಾಜ್ಯದ ಮತ್ತು ದೇಶದ ಅಭಿವೃದ್ಧಿಗೆ ಮಾರಕವಾಗಿದೆ. ಇದನ್ನು ನಾವು ವಿರೋಧಿಸುತ್ತೇವೆ. ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ರಾಜ್ಯ ಸರ್ಕಾರ ಉಗ್ರವಾಗಿ ಹೋರಾಟ ಮಾಡಿ ನಮ್ಮ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ನಾವೆಲ್ಲರೂ ಕೂಡ ಪ್ರಯತ್ನ ಮಾಡಲೇಬೇಕಾಗಿದೆಯೆಂದು ನಾನು ಈ ಸಭೆಯ ಮೂಲಕ ಒತ್ತಾಯ ಮಾಡುತ್ತೇನೆ. ಕಂಬಾಲಪಲ್ಲಿಗೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪನ್ನು ಕೂಡ ಇವತ್ತು ಈ ಸಭೆ ಖಂಡಿಸಬೇಕಾಗುತ್ತದೆ ಅಥವಾ ಅದನ್ನು ವಿರೋಧಿಸಿ, ಸರ್ಕಾರ ಮತ್ತೆ ಅದನ್ನು ಪುನರ್ ಪರಿಶೀಲಿಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ (ಸಂತೇಮರಳ್ಳಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾವೇರಿ ನ್ಯಾಯಾಧಿಕರಣದ ತೀರ್ಪಿನ ಬಗ್ಗೆ ಹಿರಿಯ ಸದಸ್ಯರೆಲ್ಲರೂ ಸಲಹೆ, ಬೆಳಕನ್ನು ಚೆಲ್ಲಿದ್ದಾರೆ. ನಿಜವಾಗಿಯೂ ಕಾವೇರಿ ನ್ಯಾಯಾಧಿಕರಣದ ತೀರ್ಪಿನ ಬಲಿಪಶುಗಳೆಂದರೆ ನಾವೇ. ನಮ್ಮ ರೈತರೇ. ಚಾಮರಾಜನಗರ, ಮೈಸೂರು, ಮಂಡ್ಯ ಜಿಲ್ಲೆಯ ಭಾಗದ ರೈತರು. ಅದರಲ್ಲೂ ವಿಶೇಷವಾಗಿ ಚಾಮರಾಜನಗರ ಜಿಲ್ಲೆಯ ರೈತರು ನಿಜವಾದ

ಪಲಿಪಶುಗಳು. ಏಕೆಂದರೆ, ನಾವು ಬಹಳ ಆಸೆಯನ್ನಿಟ್ಟುಕೊಂಡಿದ್ದೆವು. ನಮಗಂತೂ ಇದುವರೆಗೆ ನೀರು ಸಿಕ್ಕಿಲ್ಲ. ಈ ತೀರ್ಪಿನಿಂದ ಕಬಿನಿ 2ನೇ ಹಂತ ಜಾರಿಗೆ ಬರುತ್ತದೆ, ನಮ್ಮ ಪಾಲಿಗೆ ಇದು ವರದಾನವಾಗುತ್ತದೆ, ನಾವೆಲ್ಲರೂ ಕುಡಿಯುವ ನೀರಿನ ಸಮಸ್ಯೆಯಿಂದ ಇನ್ನಿತರೆ ಸಮಸ್ಯೆಗಳು ಬಗೆಹರಿಯುತ್ತದೆಂದು ಆಸೆಯನ್ನಿಟ್ಟುಕೊಂಡಿದ್ದೆವು. ಆದರೆ, ಈ ಕಾವೇರಿ ನ್ಯಾಯಾಧಿಕರಣದ ತೀರ್ಪಿನಿಂದ ನಮಗೆ ನಿಜವಾಗಿಯೂ ಬಹಳ ಅನ್ಯಾಯವಾಗಿದೆ. ನಮ್ಮೆಲ್ಲರ ಬದುಕು ಕಂಗಾಲಾಗತಕ್ಕ ಒಂದು ತೀರ್ಪಾಗಿದೆ. ಆ ನಿಟ್ಟಿನಲ್ಲಿ ಸರ್ಕಾರ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ತೀರ್ಪು ಹೊರಗಡೆ ಬಂದು ಈಗಾಗಲೇ 38 ದಿವಸಗಳು ಕಳೆದಿದೆ. ಎರಡು ಸಲ ಬಂದ್ ಆಗಿದೆ. ಎರಡು ಸಲ ಸರ್ವಪಕ್ಷದ ಸಭೆಯಾಗಿದೆ. ಪಕ್ಷಾತೀತವಾಗಿ ಎಲ್ಲರೂ ಕೂಡ ಈ ತೀರ್ಪಿನ ಬಗ್ಗೆ ಖಂಡಿಸಿದ್ದಾರೆ. ಇದರ ಬಗ್ಗೆ ಕಳೆದ ಸದನದಲ್ಲೇ ನಾವೆಲ್ಲರೂ, ವಾಟಾಳ್‌ನಾಗರಾಜ್‌ರವರು ಮಾತನಾಡುತ್ತಾ ಸದನದಲ್ಲಿ ಒಂದು ನಿರ್ಣಯವಾಗಬೇಕು, ಖಂಡನೆಯಾಗಬೇಕು, ಈ ತೀರ್ಪು ಅವೈಜ್ಞಾನಿಕವಾಗಿದೆ ಎಂದು ತಿಳಿಸಿದ್ದೇವೆ. ಆದ್ದರಿಂದ ಇದರ ಬಗ್ಗೆ ಈ ಸದನದಲ್ಲಿ ಒಂದು ನಿರ್ಣಯವಾಗಬೇಕು. ಖಂಡನೆಯಾಗಬೇಕು. ಇದು ಅವೈಜ್ಞಾನಿಕವಾಗಿದೆಯೆಂದು ನಾವೆಲ್ಲರೂ ಖಂಡನಾ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರದ ಗಮನಸೆಳೆಯಲು ಇಚ್ಛೆಪಡುತ್ತೇನೆ. ಈ ತೀರ್ಪು ಬರುವುದಕ್ಕೂ 15 ದಿವಸ ಮೊದಲು ಮಾನ್ಯ ಈಶ್ವರಪ್ಪನವರು ನಮ್ಮ ಭಾಗಕ್ಕೆ ಬಂದಿದ್ದರು. ಕಬಿನಿ 2ನೇ ಹಂತವನ್ನು ನಾವು ಜಾರಿಗೆ ತಂದೇ ತರುತ್ತೇವೆ ಎಂಬ ಮಾತನ್ನು ಹೇಳಿದ್ದರು. ಈಗಲೂ ಅವರು ಇದರ ಬಗ್ಗೆ ಮುಂದೆ ಹೇಗೆ ಹೇಳುತ್ತಾರೋ ಎಂಬ ಬಗ್ಗೆ ಕಾದು ನೋಡಬೇಕಾಗಿದೆ. ಏಕೆಂದರೆ, ನನ್ನ ತಿಳುವಳಿಕೆಯ ಪ್ರಕಾರ ನಾವು ಮೊದಲಿನಿಂದಲೂ expand ಮಾಡಲಿಲ್ಲ. 16 ವರ್ಷಗಳ ಕಾಲ ಈ ತೀರ್ಪೇನು ಹೊರಗಡೆ ಬರುವುದಕ್ಕೆ ಮೊದಲು ಮಾನ್ಯ ದಿವಂಗತ ದೇವರಾಜ ಅರಸುರವರು ವರುಣಾ ನಾಲೆಗೆ ಬಹಳ ವಿರೋಧವಿದ್ದರೂ expand ಮಾಡಿದರು. ಮಾನ್ಯ ಸಿದ್ದರಾಮಯ್ಯನವರೂ ಅದಕ್ಕೆ ಹಣವನ್ನು ಒದಗಿಸಿ ಅದನ್ನು ಕಾರ್ಯಗತ ಮಾಡಿದರು. ಅದೇ ರೀತಿ ನಮ್ಮಲ್ಲಿ expansion ಮಾಡಿದ್ದರೆ, ಕಬಿನಿ 2ನೇ ಹಂತವನ್ನು ಆಗಲೇ ಪೂರ್ಣಮಾಡಿಕೊಂಡು ಹೋಗಬಹುದಾಗಿತ್ತು. ಆದರೆ, ನಾವು ಆ ತೀರ್ಪಿಗೆ

ಹೆದರಿಕೊಂಡು ನಮ್ಮ area ವನ್ನು expand ಮಾಡಲಿಲ್ಲ. ಆದರೆ, ತಮಿಳುನಾಡಿನವರು ಯಾವುದೇ ಅಡೆತಡೆ ಇಲ್ಲದೇ area ವನ್ನು expand ಮಾಡಿಕೊಂಡು ಹೋದರು. ಈಗ ಬಂದಂತಹ ಸಲಹೆಗಾರರಿಗೆ ಆ expand ಮಾಡಿದಂತಹ areaವನ್ನೇ ತೋರಿಸಿ ನಮಗೆ ಇಷ್ಟು ನೀರು ಬೇಕು ಎಂದು ತೋರ್ಪಡಿಸಿದರು. ನಾವು 16 ವರ್ಷಗಳಿಂದ ಒಂದು ಎಕರೆ ಸಹ expand ಮಾಡಲಿಲ್ಲ. ಜೊತೆಗೆ ನಮ್ಮ ಕೆರೆಕಟ್ಟೆಗಳಿಗೆ ನೀರನ್ನು ತುಂಬಿಸತಕ್ಕ ಕೆಲಸವನ್ನೂ ನಾವು ಮಾಡಲಿಲ್ಲ. World bank ನಿಂದ ಹಣವನ್ನು ಕೊಡಲು ಸಹ ಈ ತೀರ್ಪು ಅಡ್ಡಗಾಲಾಗಿತ್ತು. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಕಾಳಜಿ ವಹಿಸಬೇಕಾಗಿದೆ. ಕರ್ನಾಟಕದಲ್ಲಿ ಶಾಂತಿಯುತವಾಗಿ ಚಳುವಳಿಗಳು ನಡೆಯುತ್ತಿದೆ. ಎಲ್ಲಾ ಪಕ್ಷದವರೂ ಸಹಕಾರವನ್ನು ನೀಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಸರ್ಕಾರ ಗಂಭೀರವಾದ ಚಿಂತನೆ ಮಾಡಿ, ಈ ಸದನದಲ್ಲಿ ಖಂಡನಾ ನಿರ್ಣಯವನ್ನು ಮಾಡಿ, ಕಾನೂನಿನ ಚೌಕಟ್ಟಿನಲ್ಲಿ ತೀರ್ಪುಗಾರರ ಸಲಹೆ ಪಡೆದು ನ್ಯಾಯವನ್ನೊದಗಿಸುವ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯವನ್ನು ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್ (ವೀರಾಜಪೇಟೆ): ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದಲೂ ಕಾವೇರಿ ನೀರಿನ ವಿವಾದವನ್ನು ಪರಿಹರಿಸುವಂತಹ ನಿಟ್ಟಿನಲ್ಲಿ ಯಾವ ರೀತಿ ಯೋಚನೆ ಮಾಡಬೇಕು ಎಂಬ ವಿಚಾರದಲ್ಲಿ ನಮ್ಮ ಎಲ್ಲಾ ನಾಯಕರು ಸಮಗ್ರವಾಗಿ, ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಬಹಶ: ಈ ಒಂದು ವಿಚಾರದಲ್ಲಿ ಬಹಳ ಸಂತೋಷಪಡಬೇಕಾಗಿದೆ. ಕೆಲವು ನಾಯಕರು ಈ ಸದನದ ಮುಂದೆ ಅಂಕಿ ಅಂಶದ ಸಹಿತ ಬಿಡಿಬಿಡಿಯಾಗಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಕಾವೇರಿ ವಿವಾದದಲ್ಲಿ ಬಂದಿರುವ ತೀರ್ಪು ನಮ್ಮ ಕರ್ನಾಟಕಕ್ಕೇನು ಅನ್ಯಾಯ ಮಾಡಿದೆ, ಅದನ್ನು ಯಾವ ರೀತಿಯಾಗಿ ಸರಿಪಡಿಸಲು ನಾವೆಲ್ಲರು ಒಗ್ಗೂಡಬೇಕು ಎಂಬ ವಿಚಾರದಲ್ಲಿ ನಿನ್ನೆಯಿಂದ ಚರ್ಚೆಯಾಗುತ್ತಿದೆ. ಬಹಳಷ್ಟು ಒಳ್ಳೆಯ ವಿಚಾರಗಳನ್ನು ತಮಗೆ ತಿಳಿಸುವಂಥದ್ದು ಮತ್ತು ಸರ್ಕಾರದ ಗಮನಕ್ಕೆ ತರತಕ್ಕದನ್ನು ನಾವು ಮಾಡಿದ್ದೇವೆ. ಇದರಲ್ಲಿ ನನ್ನ ಒಂದೇ ಒಂದು ಅನಿಸಿಕೆ ಏನೆಂದರೆ, ಇವತ್ತೇನು ಅವೈಜ್ಞಾನಿಕವಾಗಿ ತೀರ್ಮಾನವಾಗಿದೆಯೋ ಆ ತೀರ್ಮಾನಕ್ಕೆ ಯಾರು

ಬದ್ಧರು? ಯಾರು ಕಾರಣಕರ್ತರು ಎಂಬುದು ನನಗೆ ಅರ್ಥವಾಗುತ್ತಿಲ್ಲ. ವಾದಮಂಡನೆಯಲ್ಲಿ ನಮ್ಮ ಪರವಾಗಿ ವಾದಮಂಡನೆ ಮಾಡಿದಂತಹ ಎಲ್ಲಾ ವಕೀಲರು ಒಳ್ಳೆಯ ಕೆಲಸ ಮಾಡಿದ್ದಾರೆ ಎಂಬ ಪ್ರಶಂಸೆಯ ಮಾತುಗಳನ್ನು ನಾನು ಕೇಳಿದ್ದೇನೆ. ಆದರೂ ಕೂಡ ನಮಗೇನು ತೀರ್ಪಿನ ಫಲಿತಾಂಶ ಬಂದಿದೆ, ಅದು ನಮಗೆ ಪೂರಕವಿಲ್ಲದಿರುವುದು ಬಹಳ ನೋವಿನ ಸಂಗತಿಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲೇನು ಒಪ್ಪಂದವಿತ್ತೋ ಅದು ಈಗಲೂ ಮುಂದುವರೆಯುವಂತಹ ಕೆಟ್ಟ ಪರಿಸ್ಥಿತಿಗೆ ಈ ತೀರ್ಪು ಒಳಪಡುತ್ತದೆ ಎಂದರೆ ನಾವು ನಿಜವಾಗಿಯೂ ಯೋಚನೆ ಮಾಡಬೇಕಾಗಿದೆ. ಹಿಂದೆ ಬ್ರಿಟೀಷರ ಕಾಲದಲ್ಲಿ ಯಾವುದೋ ಒತ್ತಡಕ್ಕೆ, ಆಮಿಷಕ್ಕೆ ಒಳಗಾಗಿ ನಾವು ಆ ಒಪ್ಪಂದದ ಕರಾರಿಗೆ ಸಹಿ ಮಾಡಿದ್ದೇವೆ. ಆದರೆ, ಈಗಲೂ ಅದೇ ರೀತಿಯಲ್ಲಿ ಮುಂದುವರೆಯಬೇಕೆಂದರೆ ಕರ್ನಾಟಕಕ್ಕೆ ಇನ್ನ್ಯಾವಾಗ ನ್ಯಾಯ ಸಿಗುತ್ತದೆ? ಆ ನ್ಯಾಯದ ಬಗ್ಗೆ ನಾವು ಇವತ್ತು ಬಹಳಷ್ಟು ಚರ್ಚೆ ಮಾಡಿದ್ದೇವೆ. ಇವತ್ತು ಸೂತ್ರಗಳನ್ನು ಬಹಳ ಆಳವಾಗಿ ಚಿಂತನೆ ಮಾಡಬೇಕು, ಅಧ್ಯಯನವನ್ನು ಮಾಡಬೇಕು, ಆ ಮೂಲಕ ಕೇಂದ್ರ ಸರ್ಕಾರ ಮಧ್ಯಸ್ತಿಕೆ ವಹಿಸಿಕೊಂಡು, ಈಗ ಬಂದಿರುವ ತೀರ್ಪಿಗೆ ಸರಿಯಾದ ಪರಿಹಾರ ಕೊಡಬೇಕು ಎನ್ನುವ ವಿಚಾರವನ್ನು ಹಿರಿಯರು ಇಲ್ಲಿ ತಿಳಿಸಿದ್ದಾರೆ. ನಾನು ಇವತ್ತು ತಮ್ಮಲ್ಲೊಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಈ ಅವೈಜ್ಞಾನಿಕ ತೀರ್ಪು ಯಾವ ರೀತಿ ಇದೆ ಎಂದರೆ, ಇವತ್ತು ನಾವು ಕೇರಳ ರಾಜ್ಯಕ್ಕೆ ನೀರನ್ನು ಬಿಡಬೇಕು ಎಂಬ ತೀರ್ಮಾನವನ್ನು ತಮ್ಮ ತೀರ್ಪಿನಲ್ಲಿ ತಿಳಿಸಿದ್ದಾರೆ. ಎಷ್ಟು ಬಿಡಬೇಕು ಎಂಬುದನ್ನೂ ತಿಳಿಸಿದ್ದಾರೆ. ಅದರ ಬಗ್ಗೆ ಅಂಕಿ ಅಂಶವನ್ನು ಈಗಾಗಲೇ ಇಲ್ಲಿ ತಿಳಿಸಿರುವುದರಿಂದ ಅದರ ಬಗ್ಗೆ ಮತ್ತೆ ಮತ್ತೆ ಹೇಳಲು ನಾನು ಇಚ್ಛೆಪಡುತ್ತಿಲ್ಲ. ಆದರೆ, ಈ ಅನ್ಯಾಯ ಎಷ್ಟರಮಟ್ಟಿಗೆ ಇದೆಯೆಂದರೆ ಕೇರಳದವರಿಗೆ ಬಿಡಬೇಕಾದ ನೀರನ್ನು ಅವರು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ ಅದನ್ನು ಅಲ್ಲಿಯವರೆಗೆ, ತಮಿಳುನಾಡಿನವರಿಗೆ ಬಿಡಬೇಕು ಎಂಬ ತೀರ್ಪನ್ನು ಇವರು ಕೊಟ್ಟಿದ್ದಾರೆಂದರೆ, ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಏಕೆ ಈ ರೀತಿ ತೀರ್ಪು ಕೊಟ್ಟರು? ಕೇರಳದವರಿಗೆ ನಾವು ಬಿಡಬೇಕಾದ ನೀರನ್ನು ಬಿಡಬೇಕು ಮತ್ತು ಅವರು ಸಮಯೋಚಿತವಾದ ಅಣೆಕಟ್ಟೆಗಳನ್ನು ಮತ್ತು ಅದಕ್ಕೆ ವ್ಯವಸ್ಥೆಯನ್ನು ಮಾಡಿಕೊಳ್ಳುವವರೆಗೆ ಕರ್ನಾಟಕ ಅದನ್ನು ಉಪಯೋಗ ಮಾಡಿಕೊಳ್ಳಬಾರದು ಎನ್ನುವಂತಹ ಭಾವನೆ ಆ ತೀರ್ಪಿನ ಅಂಶದಲ್ಲಿ ಹೇಗೆ

ಬಂತು ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಅವರೂ ಕೂಡ ಸ್ವಲ್ಪ ಯೋಚನೆ ಮಾಡಬಹುದಾಗಿತ್ತು. ಕೇರಳಕ್ಕೆ ನೀರನ್ನು ಬಿಡಬೇಕು, ಅವರು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ ಅದನ್ನು ತಮಿಳುನಾಡಿಗೆ ಬಿಡಿ ಎಂದರೆ, ಇವತ್ತು ಕರ್ನಾಟಕದಲ್ಲಿ ಅಂಥ ಹೆಚ್ಚುವರಿ excess ನೀರು ಇದೆಯೇ? ಅದರ ಬಗ್ಗೆ ಅವರೇಕೆ ಯೋಚನೆ ಮಾಡಲಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪರಿಸರ ಸಮತೋಲನ ಮತ್ತು ಸಂರಕ್ಷಣೆಗೆ ಪ್ರತ್ಯೇಕವಾಗಿ ಕರ್ನಾಟಕದವರು ತಮಿಳುನಾಡಿಗೆ ನೀರನ್ನು ಒದಗಿಸಬೇಕೆಂಬ ಸಲಹೆಯನ್ನು, ತೀರ್ಪನ್ನು ಅವರು ಕೊಟ್ಟಿದ್ದಾರೆಂದರೆ ಇದು ಯಾವ ರೀತಿಯಾಗಿ ವೈಜ್ಞಾನಿಕ? ಯಾವ ರೀತಿಯಾಗಿ ತೀರ್ಪು ಬಂದಿದೆ ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಈ ರೀತಿ ಅವೈಜ್ಞಾನಿಕವಾದ ವಿಧಾನದಲ್ಲಿ ಹೇಗೆ ತೀರ್ಪನ್ನು ಅವರು ಪ್ರಕಟ ಮಾಡಿದರೆಂಬುದು ನನಗೆ ಅರ್ಥವಾಗುತ್ತಿಲ್ಲ. ಅದರ ಜೊತೆಗೆ ಬರಗಾಲ ಏನಾದರೂ ಬಂದರೆ, ಆ ವರ್ಷವೇನಾದರು ಮಳೆ ಬರಲಿಲ್ಲವೆಂದರೆ ಆ ವರ್ಷದಲ್ಲಿ ಹರಿಸಬೇಕಾಗಿದ್ದ, ಕೊಡಬೇಕಾಗಿದ್ದ ನೀರನ್ನು ಮರುವರ್ಷ ಸೇರಿಸಿ ಹರಿಸಬೇಕೆಂಬುದು ಎಂತಹ ನ್ಯಾಯ? ಇದರ ಬಗ್ಗೆ ನಾವು ಯೋಚನೆ ಮಾಡಿದರೆ ಕರ್ನಾಟಕದ ಬಗ್ಗೆ ಏಕೆ ಈ ರೀತಿಯ ಧೋರಣೆ ತಾಳಿದರು ಅನ್ಯಾಯವನ್ನು ಹೊರಿಸುವಂತಹ, ಪ್ರಕ್ರಿಯೆಯನ್ನು ಮಾಡಿದ್ದಾರೆಂದು ನೋವಿನಿಂದ ಹೇಳಬೇಕಾಗುತ್ತದೆ. ಇವತ್ತು ಈ ಒಂದು ವಿಚಾರದಲ್ಲಿ ಕರ್ನಾಟಕದ ಜನತೆ, ಬಹುಶ: ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಶಾಂತಿಯುತವಾಗಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಇದಕ್ಕೆ ನಾವು ನಿಜವಾಗಿಯೂ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ. ಆದರೆ, ಆ ಪ್ರತಿಭಟನೆ ಒಂದು ಹಂತ ಮೀರಿ ಇನ್ನೊಂದು ಕೆಟ್ಟ ಹಂತ ಬರುವುದಕ್ಕು ಮೊದಲೇ ಇದಕ್ಕೆ ಪರಹಾರ ಸೂತ್ರವನ್ನು ನಮ್ಮ ಸರ್ಕಾರ ಕಂಡುಹಿಡಿಯಬೇಕೆಂದು ನನ್ನ ಸಲಹೆ. ಇವತ್ತು ನಮ್ಮ ಸರ್ಕಾರ ಈ ಬಗ್ಗೆ ಹೆಚ್ಚಿನ ರೀತಿಯಲ್ಲಿ ಮುತುವರ್ಜಿ ವಹಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ಇವತ್ತು ಕೇಂದ್ರ ಸರ್ಕಾರ ಇದರಲ್ಲಿ ಮಧ್ಯಪ್ರವೇಶ ಮಾಡಬೇಕಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳು ನೇರವಾಗಿ ಈ ಒಂದು ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಬೇಕು. ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳೊಂದಿಗೆ ಸಮಾಲೋಚನೆ ಮಾಡಬೇಕು. ಆಗಲಾದರೂ ನಮಗೆ ನ್ಯಾಯ ದೊರಕಬಹುದು ಎಂಬ ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಬೇರೆ ಯಾವ ರೀತಿಯಿಂದಲೂ ಈ

ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ನಾವೇನು ಮುಷ್ಕರಗಳನ್ನು ಮಾಡುತ್ತಿದ್ದೇವೆ, ಧರಣಿಗಳನ್ನು ಮಾಡುತ್ತಿದ್ದೇವೆ, ಏನೊಂದು ಪ್ರತಿಭಟನೆಗಳನ್ನು ಮಾಡುತ್ತಿದ್ದೇವೆ ಅವುಗಳನ್ನು ಶಾಂತಿಯುತವಾಗಿ ಮುಂದುವರೆಸಬೇಕಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಿಕೊಂಡು ಈ ಒಂದು ವಿಚಾರದಲ್ಲಿ ಮೂರೂ ರಾಜ್ಯಗಳಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದಂತಹ ರೀತಿಯಲ್ಲಿ ತೀರ್ಮಾನವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಒಂದು ನಿಟ್ಟಿನಲ್ಲಿ ಇವತ್ತು ನಮ್ಮ ಪ್ರತಿಪಕ್ಷದಲ್ಲಿ ಇರತಕ್ಕಂಥ ಎಲ್ಲಾ ನಾಯಕರು ಮಾನ್ಯ ಪ್ರಧಾನ ಮಂತ್ರಿಗಳ ಮನವೊಲಿಸಬೇಕಾಗುತ್ತದೆ. ಏಕೆಂದರೆ, ಯಾವ ಸಂದರ್ಭದಲ್ಲಿ, ಯಾವ ಸನ್ನಿವೇಶದಲ್ಲಿ ಈ ತೀರ್ಪು ಬಂದಿದೆ ಎಂಬುದು ನನಗೆ ಗೊತ್ತಿಲ್ಲ. ಪ್ರತಿಪಕ್ಷದ ಎಲ್ಲಾ ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ನಾವೆಲ್ಲರೂ ಒಗ್ಗಟ್ಟಾಗಿ ನಮ್ಮ ರಾಜ್ಯದ ರೈತರ ಹಿತರಕ್ಷಣೆಗೆ ಮಧ್ಯಸ್ಥಿಕೆ ವಹಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಿಲ್ಲವೆಂದರೆ ನಾವು ಬಹಳಷ್ಟು ಕಷ್ಟವನ್ನು ಎದುರಿಸಬೇಕಾಗುತ್ತದೆ. ಕಠಿಣ ರೀತಿಯಾದ ಪ್ರತಿಭಟನೆಗಳು ನಡೆಯುವಂತಹ ಸಂಭವಗಳು ಕೂಡ ಇದೆ. ಈ ಒಂದು ವಿಚಾರದಲ್ಲಿ ಸಮಗ್ರವಾಗಿ ನಾವೆಲ್ಲರೂ ಹೋರಾಟದಲ್ಲಿ ಭಾಗಿಗಳಾಗಬೇಕು. ಹೋರಾಟ ನಿರಂತರವಾಗಿ ಇರಬೇಕು ಎಂದು ಬಯಸುವ ವ್ಯಕ್ತಿ ನಾನಲ್ಲ. ಹೋರಾಟಗಳು ಶಾಂತಿಯುತವಾಗಿ ನಡೆಯಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಪರಿಹಾರವನ್ನು ಒದಗಿಸುವುದಕ್ಕೆ ಕೇಂದ್ರ ಸರ್ಕಾರ ಅದರಲ್ಲೂ ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಬೇಕು. ಇದರಿಂದ ಉತ್ತಮ ಫಲಿತಾಂಶ ಬರುತ್ತದೆ ಎಂದು ಈ ಸಂದರ್ಭದಲ್ಲಿ ನನಗನಿಸುತ್ತಿದೆ. ಈ ದಿಸೆಯಲ್ಲಿ ಕೇಂದ್ರದ ಮೇಲೆ ಒತ್ತಡ ಹೇರಬೇಕೆಂದು ನಾನು ತಮ್ಮ ಮೂಲಕ ನಮ್ಮ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ [ಬ್ರಹ್ಮಾವರ] :- ಮಾನ್ಯ ಅಧ್ಯಕ್ಷರೆ, ಇದರಲ್ಲಿ ಹೆಚ್ಚೇನು ನಾನು ಮಾತನಾಡಲಿಕ್ಕೆ ಉಳಿದಿಲ್ಲ. Award ಬಂದ ತಕ್ಷಣದಲ್ಲಿ ತೀರ್ಪಿನ ಬಗ್ಗೆ ಚರ್ಚೆ ಮಾಡಿದ್ದರೆ, ಅನೇಕ ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಆದರೆ ಈಗಾಗಲೇ ತೀರ್ಮಾನ ತೆಗೆದುಕೊಂಡಾಗಿದೆ. ಟ್ರಿಬ್ಯೂನಲ್ ಮುಂದೆ Review Petition ಹಾಕಲು

ಮತ್ತು ಸುಪ್ರೀಂ ಕೋರ್ಟ್‌ನಲ್ಲಿ SLP ಅಥವಾ Original suit ಹಾಕಲು ಈಗಾಗಲೇ ಸರ್ಕಾರ ತೀರ್ಮಾನ ತೆಗೆದುಕೊಂಡಾಗಿದೆ. ಈಗ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಈಗ ಸರ್ಕಾರದಿಂದ ಕೆಲವೊಂದು ಸಂಶಯಗಳಿಗೆ clarification ಅನ್ನು ಮಾತ್ರ ನಾವು ಕೇಳಬಹುದಾಗಿದೆ. ನಿನ್ನೆ ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಅನೇಕ ವಿಷಯಗಳನ್ನು ಸದನದ ಮುಂದಿಟ್ಟಿರು. ಮಾನ್ಯ ಸದಸ್ಯರಿಗೆ ಮತ್ತು ರಾಜ್ಯದ ಜನತೆಗೆ ಈ ಸದನದ ಮುಖಾಂತರ ಎಲ್ಲಾ ಮಾಹಿತಿಗಳೂ ಗೊತ್ತಾಗುವಂತೆ ಆಗಬೇಕೆಂಬುದು ನಮ್ಮ ಅಭಿಲಾಷೆಯಾಗಿತ್ತು. ಆದರೆ ಸದನದಲ್ಲಿ ಇಂದು ಸದಸ್ಯರೇ ಇಲ್ಲ. ಇನ್ನು ರಾಜ್ಯದ ಜನತೆಗೆ ಮಾತ್ರ ತಿಳಿಸುವಂತಹ ಪರಿಸ್ಥಿತಿ ಉಂಟಾಗಿದೆ. ಒಟ್ಟಾರೆಯಾಗಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ, ಈ ನಾಲ್ಕೂ ರಾಜ್ಯಗಳು ತಮಗೆ 1314 ಟಿಎಂಸಿ ವಾಟರ್ ಬೇಕೆಂದು ಕೋರಿದ್ದವು. ಆದರೆ ಒಟ್ಟಾರೆಯಾಗಿ ಲಭ್ಯವಿದ್ದ ನೀರು 740 ಟಿಎಂಸಿ ಮಾತ್ರ. ಅದನ್ನು ವಿತರಣೆ ಮಾಡುವುದು ಹೇಗೆ ಎಂಬ ಬಗ್ಗೆ ಟ್ರಿಬ್ಯೂನಲ್ ಮುಂದೆ ವಕೀಲರುಗಳು ವಾದಗಳನ್ನು ಮಂಡಿಸಿದರು. ಅವರ ವಾದವನ್ನು ಕೇಳಿ ನ್ಯಾಯ ಮಂಡಳಿ ತನ್ನ ತೀರ್ಮಾನವನ್ನು ನೀಡಿದೆ. ಟಿಬ್ಯೂನಲ್ ತೀರ್ಪಿನ ಬಗ್ಗೆ ಚರ್ಚೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ, ಅದು ಸರಿಯೂ ಅಲ್ಲ. ಈಗಾಗಲೇ ಟ್ರಿಬ್ಯೂನಲ್ ಮುಂದೆ ಸ್ಪಷ್ಟೀಕರಣ ಕೋರಿ ಅರ್ಜಿ ಹಾಕಲು ತೀರ್ಮಾನಿಸಲಾಗಿದೆ. ಆದ್ದರಿಂದ ಅದರ ಬಗ್ಗೆ ಪುನ: ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲ. ತೀರ್ಪು ನೀಡಿದ ರೀತಿ ಸರಿಯಿಲ್ಲ ಎಂಬ ಬಗ್ಗೆ ಅನೇಕ ಸಾರಿ ಇಲ್ಲಿ ಹೇಳಲಾಗಿದೆ. ಪುನ: ಟಿಬ್ಯೂನಲ್ ಮುಂದೆ ಹೋದರೆ ನಮಗೆ ಲಾಭವಾಗುತ್ತದೆಯೇ ಎಂಬ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಕೃಷ್ಣಾ ಟ್ರಿಬ್ಯೂನಲ್ ಮುಂದೆ ಹೋದಾಗ ನಮಗೆ ಲಾಭ ಸಿಕ್ಕಿದೆ. ಆದ್ದರಿಂದ ಪುನ: ನಾವು ಕಾವೇರಿ ನ್ಯಾಯ ಮಂಡಳಿ ಮುಂದೆ ಹೋದಾಗ ನಮಗೆ ಲಾಭ ಸಿಗುವುದಿಲ್ಲ ಎನ್ನುವಂತಿಲ್ಲ. ನಮ್ಮ ವಕೀಲರು ಸಮರ್ಥರಿದ್ದರೂ ನಮಗೆ ತೀರ್ಪು ಸಿಗುವಲ್ಲಿ ಅನ್ಯಾಯವಾಗಿದೆ ಎಂದು ಆಗಲೇ ಮಾನ್ಯ ಬಸವರಾಜ್‌ರವರು ಮಾತನಾಡುತ್ತಾ ಹೇಳಿದರು. ಸಮರ್ಥವಾಗಿ ವಾದವನ್ನು ಮಂಡಿಸುವುದು ಮಾತ್ರ ವಕೀಲರುಗಳ ಕರ್ತವ್ಯವಾಗಿರುತ್ತದೆ. ತೀರ್ಮಾನವನ್ನು ಕೊಡುವುದು ಟ್ರಿಬ್ಯೂನಲ್‌ಗೆ ಬಿಟ್ಟಿದ್ದು. ಇಂತಹದ್ದೇ ತೀರ್ಮಾನವನ್ನು ಕೊಡಿ ಎಂದು ವಕೀಲರು ಹೇಳಲಿಕ್ಕೆ ಸಾಧ್ಯವಿಲ್ಲ. ಎಲ್ಲರ

ವಾದವನ್ನು ಆಲಿಸಿ ತೀರ್ಮಾನವನ್ನು ಕೊಟ್ಟಿರುತ್ತಾರೆ. ಟ್ರಿಬ್ಯೂನಲ್ 1924ರ ಅಗ್ರಿಮೆಂಟ್ ಅನ್ನು ಬೇಸ್ ಆಗಿಟ್ಟುಕೊಂಡು ತೀರ್ಮಾನ ಮಾಡಿದೆ. ಅದು ಸರಿಯಲ್ಲ. ಆ ಅಗ್ರಿಮೆಂಟ್ ಆದ ನಂತರ ಕರ್ನಾಟಕದವರಿಗೆ ಏನೂ ಪ್ರಾಜೆಕ್ಟ್‌ಗಳನ್ನು ಮಾಡಲಿಕ್ಕೆ ಅವರು ಬಿಟ್ಟಿಲ್ಲ. ಕಬಿನಿ ವ್ಯಾಪ್ತಿಯಲ್ಲಿ lift irrigation schemes ಮಾಡಿದರೆ ಮಾತ್ರ ನೀರಿನ ಉಪಯೋಗವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದರ ಉಪಯೋಗ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ಟ್ರಿಬ್ಯೂನಲ್ ಮುಂದೆ ಹೇಳಬೇಕಾದ ಪರಿಸ್ಥಿತಿ ನಮ್ಮ ವಕೀಲರಿಗೆ ಇದೆ ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರದ ಮೇಲೆ ಅಪವಾದ ಹೊರಿಸಲು ನಾವು ಹೋಗಬಾರದು. ಏಕೆಂದರೆ, ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿಗಳಾಗಿರುವವರು ಯಾವುದೇ ಒಂದು ರಾಜ್ಯಕ್ಕೆ ಮಾತ್ರ ಸಹಾಯವನ್ನು ಮಾಡಲಿಕ್ಕೆ ಆಗುವುದಿಲ್ಲ. ಮಾನ್ಯ ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಈ ಒಂದು ಟ್ರಿಬ್ಯೂನಲ್ constitute ಮಾಡಿದರು. ಸುಪ್ರೀಂ ಕೋರ್ಟ್ ಆದೇಶವಿದ್ದಾಗ, ಎಲ್ಲಾ ರಾಜ್ಯಗಳವರನ್ನು ಕರೆದು ಮಾತನಾಡಿದಾಗ ಯಾರೂ ಮಾತುಕತೆ ಮೂಲಕ ನೀರಿನ ಹಂಚಿಕೆಗೆ ಒಪ್ಪದಿದ್ದಾಗ, ಕೇಂದ್ರ ಸರ್ಕಾರದ ಮುಂದೆ ಯಾವುದೂ ಆಯ್ಕೆ ಇರದಿದ್ದಾಗ, ಈ ಟ್ರಿಬ್ಯೂನಲ್ constitute ಆಯಿತು. ನೀರಿನ ಹಂಚಿಕೆ ಬಗ್ಗೆ ಅನೇಕ ಅಂಶಗಳ ಬಗ್ಗೆ ಟ್ರಿಬ್ಯೂನಲ್ ಮುಂದೆ ವಾದವಿವಾದಗಳನ್ನು ಮಂಡಿಸಲಾಯಿತು. ಟ್ರಿಬ್ಯೂನಲ್ ಪ್ರತಿಯೊಂದು ಅಂಶವನ್ನು ಗಮನಿಸಿ ತನ್ನ ಆದೇಶವನ್ನು ನೀಡಿದೆ. ಇನ್ನೂ ಕೆಲವೊಂದು ಅಂಶಗಳ ಬಗ್ಗೆ ಟ್ರಿಬ್ಯೂನಲ್ ಮುಂದೆ ಹೇಳಬೇಕಾದ ಅವಶ್ಯಕತೆ ಇದೆ. ಪರಿಸರದ ಬಗ್ಗೆ 10 ಟಿಎಂಸಿ ನೀರನ್ನು ಟ್ರಿಬ್ಯೂನಲ್ ಹಂಚಿಕೆ ಮಾಡಿದೆ. ಒಟ್ಟು ನೀರಿನಲ್ಲಿ ಅಷ್ಟು ನೀರನ್ನು ಕರ್ನಾಟಕ ತಮಿಳುನಾಡಿಗೆ ಬಿಡುಗಡೆ ಮಾಡಬೇಕಾಗಿದೆ. ಆದರೆ ಕರ್ನಾಟಕದಲ್ಲೂ ಪರಿಸರ ಸಮಸ್ಯೆ ಇದೆ. ಇದಲ್ಲದೇ 192 ಟಿಎಂಸಿ ನೀರನ್ನು ಕರ್ನಾಟಕ ತಮಿಳುನಾಡಿಗೆ ಬಿಡಬೇಕಾಗಿದೆ. ಅಲ್ಲದೇ ಸಮುದ್ರಕ್ಕೆ ಹರಿದು ಹೋಗಲು 4 ಟಿಎಂಸಿ ನೀರನ್ನು ಲೆಕ್ಕ ಹಾಕಲಾಗಿದೆ. ಅದಕ್ಕಾಗಿ ಪ್ರತ್ಯೇಕವಾಗಿ ಕೊಡಬೇಕಾದ ಅವಶ್ಯಕತೆ ಇರಲಿಲ್ಲ. ಕೇರಳದ ಪಾಲಾದ 21 ಟಿಎಂಸಿ ನೀರನ್ನೂ ಸಹ ನಾವು ಸಂಗ್ರಹಿಸಿ ತಮಿಳುನಾಡಿಗೆ ಬಿಡಬೇಕಾಗಿದೆ. Clause 18 of the reference ನಲ್ಲಿ States are free to use allotted water ಎಂದು ಹೇಳಲಾಗಿದೆ. ರಾಜ್ಯಗಳಿಗೆ ಅಲಾಟ್ ಮಾಡಿರುವ ನೀರನ್ನು

ನಿರ್ದಿಷ್ಟವಾಗಿ ಈ ಉದ್ದೇಶಕ್ಕಾಗಿಯೇ ಉಪಯೋಗ ಮಾಡಿ ಎಂದು ಟ್ರಿಬ್ಯೂನಲ್ ಹೇಳಲಿಕ್ಕೆ ಅವಕಾಶವಿಲ್ಲ. ಟ್ರಿಬ್ಯೂನಲ್‌ಗೆ ರೆಫರ್ ಮಾಡಿದಾಗ ಈ ಅಂಶವನ್ನು ಸೇರಿಸಿಲ್ಲ. ಇಂತಹ ಉದ್ದೇಶಕ್ಕೆ ಇಷ್ಟು ಟಿಎಂಸಿ ನೀರನ್ನು ಬಳಸಿ ಎಂದು ಹೇಳುವಂತಹ ಅಧಿಕಾರ ಟ್ರಿಬ್ಯೂನಲ್‌ಗೆ ಇದೆಯೇ ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ. ಅದನ್ನು ಸರಿಪಡಿಸುವ ಬಗ್ಗೆ ನಾವು ಟ್ರಿಬ್ಯೂನಲ್ ಮುಂದೆ ವಾದವನ್ನು ಮಂಡಿಸಬೇಕಾಗುತ್ತದೆ. ನೀರು ಇರುವ ಸಂದರ್ಭದಲ್ಲಿ ಅದನ್ನು ಬಿಡಬಹುದು. ಆದರೆ ನಮಗೆ ಸಮಸ್ಯೆ ಇದ್ದಾಗ ನೀರನ್ನು ಯಾವ ರೀತಿ ಬಿಡಲಿಕ್ಕಾಗುತ್ತದೆ? ಆ ಸಂದರ್ಭದಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕು. ಈ ಸರ್ಕಾರ ಪುಣ್ಯ ಮಾಡಿದೆ. ಏಕೆಂದರೆ, ಎಲ್ಲಾ ಪಕ್ಷಗಳೂ ಸರ್ಕಾರಕ್ಕೆ ಈ ವಿಚಾರದಲ್ಲಿ ಬೆಂಬಲವನ್ನು ಕೊಟ್ಟಿವೆ, ಸರ್ಕಾರದ ಬೆನ್ನ ಹಿಂದೆ ಇವೆ. ಇದರ ಬಗ್ಗೆ ಎರಡು ಮಾತಿಲ್ಲ. ವಿರೋಧ ಪಕ್ಷದವರು ಸಂಪೂರ್ಣವಾದ ಬೆಂಬಲವನ್ನು ಕೊಟ್ಟಿದ್ದಾರೆ. ಸರ್ಕಾರ ಇದರಲ್ಲಿ ತಪ್ಪು ಮಾಡಿದೆ ಎಂಬ ಮಾತನ್ನೂ ಯಾರೂ ಕೂಡ ಆಡಿಲ್ಲ. ಆದರೆ ತಮಿಳುನಾಡಿನಲ್ಲಿ ಈ ಪರಿಸ್ಥಿತಿ ಇಲ್ಲ. ಅಲ್ಲಿ ಕರುಣಾನಿಧಿಯವರು ಹೇಳಿದ್ದಕ್ಕೆ ಜಯಲಲಿತಾ ಪಕ್ಷದವರು ಸಹಮತ ವ್ಯಕ್ತಪಡಿಸಿಲ್ಲ. ನಮ್ಮಲ್ಲಿ ನಡೆಯುತ್ತಿರುವಂತೆ ಒಮ್ಮತದ ಹೋರಾಟ ಅಲ್ಲಿ ನಡೆಯುತ್ತಿಲ್ಲ. ಅಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಆದರೆ ನಮ್ಮ ಬೇಡಿಕೆ ಇಷ್ಟೇ. ಈ ಬಗ್ಗೆ ನಿನ್ನೆ ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಹೇಳಿದ್ದಾರೆ. ಕೇಂದ್ರ ಸರ್ಕಾರದವರು ರಾಷ್ಟ್ರೀಯ ಜಲನೀತಿಯನ್ನು ರೂಪಿಸುವವರೆಗೆ ಟ್ರಿಬ್ಯೂನಲ್ ಅವಾರ್ಡ್ ಅನ್ನು ನೋಟಿಫಿಕೇಷನ್ ಮೂಲಕ ಪ್ರಕಟಿಸಬಾರದು ಎಂಬುದೇ ನಮ್ಮ ಬೇಡಿಕೆಯಾಗಬೇಕು. ಸದನ ಈಗ ಅಂಗೀಕರಿಸಲಿರುವ ನಿರ್ಣಯದಲ್ಲಿ ಈ ಅಂಶವನ್ನೂ ಸಹ ಸೇರಿಸಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಕಾವೇರಿ ಬೇಸಿನ್‌ನಲ್ಲಿ ಹೆಚ್ಚಾಗಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಅವಕಾಶವಿದೆ. ಆದರೆ ಕೈಗಾರಿಕೆಗಳಿಗೆಂದು ಟ್ರಿಬ್ಯೂನಲ್ ಕಡಿಮೆ ನೀರನ್ನು ಹಂಚಿಕೆ ಮಾಡಿದೆ. ಅದು ಮುಂದಿನ ದಿನಗಳಲ್ಲಿ ಕೈಗಾರಿಕಾಭಿವೃದ್ಧಿ ಮಾಡಲು ಸಾಕಾಗುವುದಿಲ್ಲ. ಸರ್ಕಾರ ಅದರ ಬಗ್ಗೆ ಆಲೋಚನೆಯನ್ನು ಮಾಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸಿರತಕ್ಕ ನಿರ್ಣಯಕ್ಕೆ ಈ ಅಂಶವನ್ನು ತಿದ್ದುಪಡಿ ಮೂಲಕ ಸೇರಿಸಿ ಅಂಗೀಕರಿಸಬೇಕೆಂದು ಕೋರುತ್ತೇನೆ. ಇದಕ್ಕೆ ಎಲ್ಲರೂ ಒಮ್ಮತದಿಂದ ತಮ್ಮ ಒಪ್ಪಿಗೆ ಕೊಡಬೇಕೆಂದು

ಕೇಳಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಆಂಜನೇಯರವರೆ, ಈಗ ತಾವು ಮಾತನಾಡಿ. ಕೇವಲ ಐದು ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಹೆಚ್.ಆಂಜನೇಯ [ಭರಮಸಾಗರ]:- ಆಯಿತು. ಮಾನ್ಯ ಅಧ್ಯಕ್ಷರೇ, ಕಾವೇರಿ ವಿಷಯವಾಗಿ ಬಹಳಷ್ಟು ತಿಳಿದುಕೊಂಡಿರತಕ್ಕಂಥ ನಮ್ಮ ನಾಯಕರುಗಳು ಅಂಕಿ ಅಂಶಗಳ ಸಮೇತ ನ್ಯಾಯ ಮಂಡಳಿ ತೀರ್ಪಿನಿಂದ ನಮಗೆ ಆಗಿರತಕ್ಕ ಅನ್ಯಾಯವನ್ನು ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ನಮಗೆಲ್ಲರಿಗೂ ಕೂಡ ಬಹಳ ಆಶ್ಚರ್ಯ, ಗಾಬರಿಗೊಳ್ಳುವ ಮತ್ತು ರಾಜಕೀಯ ಪ್ರೇರಿತವಾದ ತೀರ್ಪು ಬಂದಿದೆ ಎಂದು ಅನಿಸುತ್ತದೆ. ಇದು ತುಂಬಾ ದುರಾದೃಷ್ಟಕರ. ಯಾವ ಸಂದರ್ಭದಲ್ಲಿ ನೋಡಿದರೂ ಕೂಡ ಎಲ್ಲಾ ಸಂದರ್ಭದಲ್ಲೂ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಕೇಂದ್ರದಲ್ಲಿ ಯಾವುದೇ ಸರ್ಕಾರಗಳಿರಲಿ, ನಮ್ಮ ರಾಜ್ಯದ ಅಭಿವೃದ್ಧಿಯನ್ನು ಕಡೆಗಣಿಸುತ್ತಾ ಬಂದಿವೆ. ಬೆಂಗಳೂರು ಎಲ್ಲರಿಗೂ ಇಷ್ಟವಾಗುತ್ತದೆ. ಲ್ಯಾಂಡ್ ಖರೀದಿ ಮಾಡುತ್ತಾರೆ, ಇಲ್ಲಿಯ ಜನರು ಒಳ್ಳೆಯವರೆಂದು ಹೇಳುತ್ತಾರೆ, ಇಲ್ಲೇ ವಾಸ ಮಾಡಲು ಇಷ್ಟಪಡುತ್ತಾರೆ. ಆದರೆ ಇಲ್ಲಿಯ ಅಭಿವೃದ್ಧಿ ವಿಷಯ ನೋಡಿದಾಗ ಕಡೆಗಣ್ಣಿನಿಂದ ನೋಡುತ್ತಿದ್ದಾರೆ. ಕಾವೇರಿ ಹುಟ್ಟು, ಕಾವೇರಿಯ ಹರಿವು ಎಲ್ಲಾ ಕರ್ನಾಟಕದಲ್ಲಾದರೂ, ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಬಳಸಿಕೊಳ್ಳುತ್ತಿರುವವರು ಬೇರೆ ರಾಜ್ಯದವರು ಕಷ್ಟಪಟ್ಟು ಕನ್ನಂಬಾಡಿ ಕಟ್ಟೆಯನ್ನು ಕಟ್ಟಿ, ಅಲ್ಲಿ ನೀರನ್ನು ನಿಲ್ಲಿಸಿ, ನಮ್ಮಲ್ಲಿ ಬರಗಾಲ ಬಂದರೂ, ಭತ್ತ ಒಣಗಿ ಹೋದರೂ ತಮಿಳುನಾಡಿಗೆ ನೀರು ಬಿಡಬೇಕೆಂದು ತೀರ್ಪು ನೀಡಿರುವುದು, ಜನವಿರೋಧಿ ತೀರ್ಪಾಗಿದೆ. ಈ ತೀರ್ಪಿನಿಂದ ನಮಗೆ ಅನ್ಯಾಯವಾಗುತ್ತದೆ. ಈ ಕಾರಣದಿಂದ ಈ ನ್ಯಾಯಾಧೀಕರಣದ ತೀರ್ಪನ್ನು ಎಲ್ಲಾ ಪಕ್ಷದವರು ಒಕ್ಕೊರಲಿನಿಂದ ಪ್ರತಿಭಟಿಸಿ ಒಗ್ಗಟ್ಟಿನಿಂದ ಇರುವ ಅಗತ್ಯವಿದೆ. ಮಾನ್ಯ ಸದಸ್ಯರಾದ ಜಯಪ್ರಕಾಶ ಹೆಗ್ಡೆಯವರು ಆಗಲೇ ಹೇಳಿದರು, ಕಳೆದ ಸಾರಿ ಅಧಿವೇಶನ ಸೇರಿದಾಗ ಕಾವೇರಿ ವಿಷಯವನ್ನು ಚರ್ಚೆ ಮಾಡಬೇಕಾಗಿತ್ತು. ಆಗ ವಿರೋಧಪಕ್ಷದ ನಾಯಕರು ಆ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಚರ್ಚೆ ಮಾಡಬೇಕಾಗಿತ್ತು. ಕಾವೇರಿ ವಿಷಯವನ್ನು ರಾಜಕಾರಣಿಗಳು ಬಹಳ ಸಿರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ, ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂಬ ಜನರ

ಆಪಾದನೆಯನ್ನು ನಿಜ ಮಾಡಲು ಆ ರೀತಿ ವಿಳಂಬ ಮಾಡಿದ್ದು ನಿಜವೆನಿಸುತ್ತದೆ.

[ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದಲ್ಲಿ, ಎಲ್ಲಾ ವಿಧಾನ ಸಭೆಯ ಸದಸ್ಯರು ಹಾಗು ವಿಧಾನ ಪರಿಷತ್ತಿನ ಸದಸ್ಯರುಗಳು ದೆಹಲಿಯ ಪಾರ್ಲಿಮೆಂಟ್ ಭವನದ ಮುಂದಿರುವ ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರ ಪ್ರತಿಮೆ ಮುಂದೆ ಸತ್ಯಾಗ್ರಹ ಮಾಡುವುದರ ಮುಖಾಂತರ ನಮ್ಮ ನೋವನ್ನು, ನಮಗಾಗಿರುವ ಅನ್ಯಾಯವನ್ನು ಪ್ರತಿಭಟಿಸಿ ಗಮನ ಸೆಳೆಯುವಂತೆ ಮಾಡಬೇಕು. ಈ ರೀತಿ ಮಾಡುವುದರಿಂದ ನೀರನ್ನು ಬಳಸಿಕೊಳ್ಳತಕ್ಕಂತಹ ರೈತರಲ್ಲಿ ಒಂದು ರೀತಿಯ ಆತ್ಮವಿಶ್ವಾಸ ಮೂಡಿಸತಕ್ಕಂತಹ ಅಗತ್ಯವಿದೆ. ರಾಜ್ಯದಲ್ಲಿನ ನಮ್ಮ ಜನರನ್ನು ನೋಡಿದರೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಅಹಿಂಸ ಮಾರ್ಗವನ್ನು ಅನುಸರಿಸಿ ಚಳುವಳಿಗೆ ಇಳಿದಿದ್ದಾರೆ. ಇದರಲ್ಲಿ ಕಲಾವಿದರು, ಚಲನ ಚಿತ್ರನಟರು ಸೇರಿದ್ದಾರೆ. ದುರಾದೃಷ್ಟವಶಾತ್ ಡಾ: ರಾಜ್‌ಕುಮಾರ್‌ರವರು ಇಂದು ಇಲ್ಲ, ಅವರು ಇದ್ದಿದ್ದರೆ, ಚಳುವಳಿಯಲ್ಲಿ ಧುಮುಕಿದ್ದರೆ 1980–81ರಲ್ಲಿ ನಡೆದ ಗೋಕಾಕ್ ಚಳುವಳಿಯ ಮಾದರಿಯಲ್ಲಿ ಚಳುವಳಿ ನಡೆಯುತ್ತಿತ್ತು. ದುರ್ದೈವ ಅವರು ಈಗ ಇಲ್ಲ. ಅವರ ಕುಟುಂಬದ ಎಲ್ಲಾ ಸದಸ್ಯರು ಇದಕ್ಕೆ ಬೆಂಬಲವನ್ನು ಸೂಚಿಸಿ ಚಳುವಳಿಯಲ್ಲಿ ಪಾಲ್ಗೊಂಡು ರಾಜ್ಯಕ್ಕಾಗಿರುವ ಅನ್ಯಾಯವನ್ನು ಪ್ರಟಿಭಟಿಸುತ್ತಿದ್ದಾರೆ. ಕಾವೇರಿಗೆ ಸಂಬಂಧಿಸಿದ ತೀರ್ಪಿನ ವಿರೋಧವಾಗಿ ರಾಜ್ಯದ ರೈತರು, ಜನರು ಅಲ್ಲಲ್ಲಿ ಜಿಲ್ಲಾ ಕಚೇರಿ, ತಾಲ್ಲೂಕು ಕಚೇರಿಗಳಲ್ಲಿ ತಮ್ಮ ಪ್ರತಿಭಟನೆ ಮಾಡಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ನನ್ನ ಅಭಿಪ್ರಾಯವೇನೆಂದರೆ, ಒಂದು ದಿನಾಂಕವನ್ನು ನಿಗದಿ ಮಾಡಿ, ಅಂದು ನಾವೆಲ್ಲರೂ, ಅಂದರೆ ವಿಧಾನ ಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಹಾಗೂ ಸಂಸತ್ ಸದಸ್ಯರೆಲ್ಲರೂ ದೆಹಲಿಯ ಪಾರ್ಲಿಮೆಂಟ್ ಭವನದ ಮುಂದಿರುವ ಮಹಾತ್ಮ ಗಾಂಧೀಜಿಯವರ ಪ್ರತಿಮೆ ಮುಂದೆ ಸತ್ಯಾಗ್ರಹ ಮಾಡತಕ್ಕಂತಹ ನಿರ್ಣಯ ಮಾಡಿದರೆ ಸೂಕ್ತವಾಗಿರುತ್ತದೆ. ಅದರ ಜೋತೆಗೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ರಾಷ್ಟ್ರಪತಿ ಸೇರಿದಂತೆ ಪ್ರಧಾನ ಮಂತ್ರಿಗಳಿಗೆ, ಈ ತೀರ್ಪಿನಿಂದ ರಾಜ್ಯಕ್ಕಾಗಿರುವ ಅನ್ಯಾಯ ಕುರಿತು ಅಲ್ಲಿರುವ ರಾಷ್ಟ್ರೀಯ ನಾಯಕರಿಗೆ ಮನವರಿಕೆ ಮಾಡುವ ಕೆಲಸವನ್ನು ಆ ದಿವಸ ಮಾಡಬೇಕು.

ನಮ್ಮ ನೀರಾವರಿ ಮಂತ್ರಿಗಳಾದ ಮಾನ್ಯ ಈಶ್ವರಪ್ಪನವರನ್ನು ಅಭಿನಂದಿಸಬೇಕು. ಎಲ್ಲೆಲ್ಲಿ ನೀರನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಅಲ್ಲಿಗೆ ಆದ್ಯತೆಯನ್ನು ಕೊಟ್ಟು ನೀರಾವರಿ ಕೆಲಸವಾಗುವಂತೆ ನೋಡಿಕೊಂಡಿದ್ದಾರೆ. ಹಿಂದಿನ ನೀರಾವರಿ ಮಂತ್ರಿಗಳಿಗಿಂತ ಹೆಚ್ಚು ಒತ್ತು ಕೊಟ್ಟು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಹುಬ್ಬಳ್ಳಿ ನಗರಕ್ಕೆ ನೀರು ಒದಗಿಸುವ ಯೋಜನೆಯಾದ ಕಾರಂಜ ಯೋಜನೆಗೆ ಗುದ್ದಲಿ ಪೂಜೆ ಮಾಡಿದ್ದು. ಈ ವಿಷಯ ಸುಪ್ರೀಂ ಕೋರ್ಟ್ ಮುಂದಿದೆ ಎಂದು ಹಲವರು ಹೇಳಿದರೂ ಕೂಡ, ನಾವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಕುಡಿಯುವ ನೀರಿನ ಈ ಯೋಜನೆ ಆರಂಭವಾಗಬೇಕೆಂಬ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಬರದಿದ್ದರೂ ಅನೇಕ ಮಂತ್ರಿಗಳು ಬರದಿದ್ದರೂ ಅವರೊಬ್ಬರೇ ಆ ಯೋಜನೆಗೆ ಗುದ್ದಲಿ ಪೂಜೆ ಮೂಲಕ ಚಾಲನೆ ನೀಡಿದರು. ಇನ್ನು ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿಗೆ ಅಪಾರ ಅಭಾವವಿದೆ. ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯ ಅಪ್ಪರ್ ಭದ್ರ ಯೋಜನೆ ಮುಗಿಯಬೇಕು, ಈ ಬಗ್ಗೆ ಒತ್ತು ನೀಡಬೇಕು. ನನ್ನ ಕ್ಷೇತ್ರದಲ್ಲಿ 19 ಕೆರೆಗಳನ್ನು ತೆಗೆದುಕೊಂಡು ಆ ಕೆರೆಗಳಿಗೆ ಕಾಯಕಲ್ಪವನ್ನು ಮಾನ್ಯ ಈಶ್ವರಪ್ಪನವರು ಮಾಡಿದ್ದಾರೆ. ಇನ್ನು ಹೆಚ್ಚಾಗಿ ನಮಗೆ ಲಭ್ಯವಿರುವ ನೀರನ್ನು ಬಳಸಿಕೊಳ್ಳುವಲ್ಲಿ ಕೆಲಸ ಮಾಡಲಿದ್ದಾರೆಂದು ಭಾವಿಸುತ್ತೇನೆ. ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ವಾಜಪೇಯಿಯವರ ಕನಸಿನ ಕೂಸಾದ ಗಂಗಾ-ಕಾವೇರಿ ನದಿಗಳ ಜೋಡಣೆ ಯೋಜನೆಯ ಸರ್ವೆ ಮಾಡುವ ಕೆಲಸ ನಡೆದಿತ್ತು, ಅದು ಎಲ್ಲಿಯವರೆಗೆ ಬಂದಿದೆಯೋ ಗೊತ್ತಿಲ್ಲ. ಕಳೆದ 6 ತಿಂಗಳ ಹಿಂದೆ ನಾನು ಉತ್ತರ ಭಾರತದಲ್ಲಿ ಪ್ರವಾಸ ಮಾಡಿದಾಗ, ಗಂಗಾ ನದಿ ಹರಿಯುವ ವೇಗವನ್ನು ನೋಡಿದೆ, 100 ಕಿ.ಮೀ ವೇಗದಲ್ಲಿ ನೀರು ಹರಿಯುತ್ತದೆ. ಈ ನದಿ ಜೋಡಣೆ ಮಾಡಿದಲ್ಲಿ ನಮ್ಮಲ್ಲಿರುವ ಈ ಬಂಜರು ಭೂಮಿಗೆಲ್ಲಾ ಆ ನೀರಿನ ಉಪಯೋಗವಾಗುತ್ತದೆ. ಇದರಿಂದಾಗಿ ಭಯೋತ್ಪಾದನೆ, ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿರುವ ಯುವಕರಿಗೆ, ಉದ್ಯೋಗವಿಲ್ಲದ ಯುವಕರ ಕೈಗಳಿಗೆ ಕೆಲಸ ಸಿಗುತ್ತದೆ. ದೇಶದಲ್ಲಿರುವ ಇಂತಹ ಸಮಸ್ಯೆಗಳಿಗೆ ಪರೋಕ್ಷವಾಗಿ ಪರಿಹಾರ ದೊರಕಿದಂತಾಗುತ್ತದೆ. ಇದು ಅನುಷ್ಠಾನಗೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಿ ಸಕ್ರಿಯವಾಗಿ ಆಲೋಚನೆ ಮಾಡಿ ಆದಷ್ಟು ಬೇಗ ಕಾರ್ಯಪ್ರವೃತ್ತರಾಗಬೇಕು

ಎಂದು ಹೇಳುವುದರ ಜೊತೆಗೆ ಈಗೇನು ಕಾವೇರಿ ಸಂಬಂಧವಾಗಿ ತೀರ್ಪು ಬಂದಿದೆ ಅದು ರಾಜ್ಯ ವಿರೋಧಿ ತೀರ್ಪು, ಅದನ್ನು ವಿರೋಧಿಸುತ್ತೇನೆ. ಇದರ ವಿರುದ್ಧ ಒಗ್ಗಟ್ಟಾಗಿ ಚಳುವಳಿಯನ್ನು ಮಾಡೋಣವೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ): ಮಾನ್ಯ ಉಪಾಧ್ಯಕ್ಷರೆ, ಕಾವೇರಿ ಮಂಡಳಿಯ ವಿಚಾರದಲ್ಲಿ ಇವತ್ತು ಬಹಳಷ್ಟು ಚರ್ಚೆಗಳು ಆಗಿವೆ. ಎಲ್ಲಾ ವಿಷಯಗಳು ಇವತ್ತು ಪ್ರಸ್ತಾಪ ಆಗಿವೆ. ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ, ಬೆಂಗಳೂರು ನಗರದ ವಿಚಾರದಲ್ಲಿ ಕಾವೇರಿ ನ್ಯಾಯ ಮಂಡಳಿ ತೀರ್ಪು ಏನು ಬಂದಿದೆ ಅದರಿಂದ ನಮಗೂ ಕೂಡ ಬಹಳ ಆಶ್ಚರ್ಯ ಆಗುವಂತಹ ಪರಿಸ್ಥಿತಿ ಉದ್ಭವವಾಗಿದೆ. ಇಷ್ಟೊಂದು ಅವೈಜ್ಞಾನಿಕವಾಗಿ ಚಿಂತನೆ ಆಗುತ್ತದೆ ಎಂದು ಯಾರೂ ಕೂಡ ಅಂದುಕೊಂಡಿರಲಿಲ್ಲ. ಉನ್ನತ ಮಟ್ಟದಲ್ಲಿ ಎಲ್ಲ ವಿಷಯಗಳನ್ನು ಅರ್ಥ ಮಾಡಿಕೊಳ್ಳತಕ್ಕಂತಹ ವಿಚಾರ ಇರತಕ್ಕಂತಹ ಸಂದರ್ಭದಲ್ಲಿ ಈ ರೀತಿಯ ತೀರ್ಪು ಬರುತ್ತದೆ ಎಂದು ನಾವು ಯಾರೂ ಕೂಡ ಅಂದುಕೊಂಡಿರಲಿಲ್ಲ. ಇದನ್ನು "ಮರಣ ಶಾಸನ" ಎಂದು ಕರೆದಿರುವುದು ನಿಜ. ನಮ್ಮ Inter State Water Dispute Act ಏನಿದೆ ಅದರ ಪ್ರಕಾರ ನಾವೇ ಕೊಟ್ಟಿರತಕ್ಕಂತಹ ಕಾನೂನು ರಚನೆ ಮುಖಾಂತರ ಈ ನ್ಯಾಯ ಮಂಡಳಿಯ ನಿರ್ಣಯಕ್ಕೆ ಯಾವುದೇ ರೀತಿಯ ಮೇಲ್ಮನವಿ ಸಲ್ಲಿಸುವುದಕ್ಕಾಗುವುದಿಲ್ಲವೆಂದು ನಾವೇ ಕಾನೂನು ಮಾಡಿಕೊಂಡಿದ್ದೇವೆ. ಇದು ಕೂಡ ಸರಿಯೋ ತಪ್ಪೋ ಎಂದು ನಾವು ಚಿಂತನೆ ಮಾಡಬೇಕಾಗಿದೆ. ಈ ರೀತಿಯ ನಿರ್ಣಯಗಳು ಆಚೆ ಬಂದಾಗ ನಾವು ಏನು ಮಾಡಬೇಕು, ಒಂದು ಕಡೆ ಸಂವಿಧಾನ ರಚನೆ ಮಾಡತಕ್ಕಂತಹ ಕಾರ್ಯ ಕೂಡ ನಮ್ಮದೇ ಆಗುತ್ತದೆ. ಅದರ ಜೊತೆಯಲ್ಲಿ ನ್ಯಾಯ ಕೊಡತಕ್ಕಂಥದ್ದು ಮತ್ತು ಜನ ಸಾಮಾನ್ಯರ ಜೀವನ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲೆ ಬರುತ್ತದೆ. ಇದರಲ್ಲಿ ವ್ಯತ್ಯಾಸ ಕಂಡುಬಂದಾಗ ನಮ್ಮ ಕರ್ತವ್ಯ ಏನು, ನಾವು ಹೇಗೆ ಹೋರಾಟ ಮಾಡಬಹುದು ಎಂದು ದೊಡ್ಡ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ನ್ಯಾಯ ಮಂಡಳಿ ಮುಂದೆ ಪುನ: ಪರಿಶೀಲನಾ ಅರ್ಜಿ ಹಾಕುತ್ತೇವೆಂದು ಇಟ್ಟುಕೊಳ್ಳಿ ನಮ್ಮಲ್ಲಿ 70–90 % ಜನರಿಗೂ ಅದರ ಬಗ್ಗೆ ಭರವಸೆ ಇಲ್ಲ. ನ್ಯಾಯ ಮಂಡಳಿ ಮುಂದೆ ಹೋಗಿ

ನ್ಯಾಯ ಸಿಗುತ್ತದೆ ಎಂದು ನಾವು ಯಾರೇ ಆಗಲಿ, ಆತ್ಮಾವಲೋಕನ ಮಾಡಿಕೊಂಡರೆ ಯಾರಿಗೂ ಆ ವಿಚಾರದಲ್ಲಿ ವಿಶ್ವಾಸ ಇಲ್ಲ. ಇಷ್ಟೆಲ್ಲಾ ಹೋರಾಟ ಮಾಡಿ ವಾದ ವಿವಾದ ಆಗಿ ಗಂಭೀರವಾದ ಚರ್ಚೆ ಮಾಡಿ ಆದ ಮೇಲೆ, ಕೂಡ ಈ ರೀತಿಯಾದ ತೀರ್ಪು ಬಂದಾಗ ಅದೇ ಜಡ್ಜಸ್ ಮುಂದೆ ನಾವು ಹೋದಾಗ ಎಷ್ಟರ ಮಟ್ಟಿಗೆ ನ್ಯಾಯ ಸಿಗಬಹುದು? ಇನ್ನೊಂಡು ಕಡೆ, ಆ ತೀರ್ಪು Supreme Court ಗೆ ಹೋಗುವುದಿಲ್ಲ. ಇದರಿಂದ ನಮ್ಮ ಹಕ್ಕಿನ ಉಲ್ಲಂಘನೆ ಆಗುತ್ತದೆ. ಇದು ಕೂಡ ನಾವು ಚರ್ಚೆ ಮಾಡಬೇಕು. ಒಬ್ಬ ವ್ಯಕ್ತಿಗೆ ಮರಣ ದಂಡನೆ ಶಿಕ್ಷೆ ಆಗುತ್ತದೆ, ಗಲ್ಲಿಗೆ ಏರಿಸತಕ್ಕಂತಹ ಶಿಕ್ಷೆ ಆಗುತ್ತದೆ. Supreme Court ನಿಂದ ಆದೇಶ ಬಂದರೂ ಕೂಡ ಅವನಿಗೆ ಒಂದು ಅವಕಾಶ ಸಿಗುತ್ತದೆ. ರಾಷ್ಟ್ರಪತಿಗಳ ಮುಂದೆ ಅವನು ಮನವಿ ಮಾಡಬಹುದು. ನ್ಯಾಯ ಮಂಡಳಿಯ ತೀರ್ಪಿನಿಂದ ಒಬ್ಬರಿಗೆ ಅಲ್ಲ ಲಕ್ಷಾಂತರ ಜನರಿಗೆ ಅನ್ಯಾಯ ಆಗಿದೆ. ಎಲ್ಲೋ ಒಂದು ಕಡೆ Supreme Court ಗೆ ಮೇಲ್ಮನವಿ ಸಲ್ಲಿಸುವ ಪ್ರಯತ್ನ ನಾವು ಮಾಡಬೇಕಾಗಿದೆ. ಈ ವಿಚಾರದಲ್ಲಿ ಅಂತಿಮವಾಗಿ Supreme Court ಮುಂದೆ ಹೋಗತಕ್ಕಂತಹ ಹಕ್ಕು ನಮಗೆ ಸಿಗಬೇಕು. Inter State Water Dispute Act ನಲ್ಲಿ ನಾವು ಬದಲಾವಣೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಈ Act ಪ್ರಕಾರ ನೋಡಿದರೆ ಅದಕ್ಕೆ ಬೇಕಾದ ಪ್ರತ್ಯೇಕವಾದ ಪ್ರಾಧಿಕಾರ ರಚನೆ ಮಾಡಿ, ಅವರು ನಿಭಾಯಿಸುತ್ತಾರೆಯೇ ಹೊರತು ನಮ್ಮ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಪಾತ್ರ ಇರುವುದಿಲ್ಲ. ಕಷ್ಟ ಕಾಲ ಬಂದಾಗ ಏನು ಮಾಡುವುದು, ಬೆಂಗಳೂರು ನಗರದಲ್ಲಿ ಇವತ್ತು ಕೂಡ ನೀರಿನ ಸಮಸ್ಯೆ ಎಷ್ಟಾಗಿದೆ ಎಂದರೆ ಬೆಳಿಗ್ಗೆ ನನ್ನ ಕ್ಷೇತ್ರದಲ್ಲಿ ಜನರು ನೀರಿನ ಹಾಹಾಕಾರದಿಂದ ಪ್ರತಿಭಟನೆ ಹಾಗೂ ಧರಣಿಗಳನ್ನು ಮಾಡಿಕೊಂಡು ಕುಳಿತಿದ್ದಾರೆ. ನಾಳೆ ಈ ತೀರ್ಪು ಅನುಷ್ಠಾನ ಆದರೆ, ನಾವು ಬೃಹತ್ ಬೆಂಗಳೂರು ಎಂದು ಮಾತನಾಡುತ್ತೇವೆ, ಬಿಡದಿಯನ್ನು ಉಪನಗರ ಮಾಡಬಹುದು ಇನ್ನೊಂಡು ಕಡೆ ಉಪನಗರ ಮಾಡಬಹುದು, ಬೃಹತ್ BDA layout ಮಾಡಬೇಕೆಂದು ಹೊರಟಿದ್ದೇವೆ, ಬೆಂಗಳೂರು ನಗರವನ್ನು ಇನ್ನು ಬಹಳ ದೊಡ್ಡದಾಗಿ ವಿಸ್ತರಣೆ ಮಾಡಬೇಕೆಂದು ಹೊರಟಿದ್ದೇವೆ, ನಮಗೆ ಮೂಲಭೂತವಾಗಿ ಅವಶ್ಯವಿರುವ ನೀರು ಸಿಗದೇ ಹೋದರೆ ಹೇಗೆ? ನಗರ ಬೆಳೆಯಬೇಕು. ಬೆಂಗಳೂರು ನಗರದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ

ಬೆಂಗಳೂರು, ಬೆಂಗಳೂರು ಎಂದು ಮಾತನಾಡುತ್ತೇವೆ. ಇದರ ಭವಿಷ್ಯ ಏನಾಗಬಹುದು? ಇದು ಬಹಳ ಸಾಮಾನ್ಯ ಜ್ಞಾನ ಇರತಕ್ಕಂತಹ ವಿಚಾರ. ನಾವು ಇವತ್ತು ಕಾನೂನಿನ ಪ್ರಕಾರ ಹೋರಾಟ ಮಾಡಬೇಕಾದರೂ ಕೂಡ ನ್ಯಾಯ ಮಂಡಳಿ ಮುಂದೆ ಎಷ್ಟರ ಮಟ್ಟಿಗೆ ನ್ಯಾಯ ಸಿಗುತ್ತದೆ ನಮಗೆ ಗೊತ್ತಿಲ್ಲ. Inter State Water Dispute Act ನಲ್ಲಿ ಇರತಕ್ಕಂತಹ ಕಾನೂನುಗಳು ಮಾರ್ಪಾಟಾಗಬೇಕು. ರಾಷ್ಟ್ರೀಯ ಜಲ ನೀತಿ ಬಗ್ಗೆ ಏನು ಮಾತನಾಡುತ್ತಿದ್ದೀರಿ, Tribunal ತೀರ್ಪಿನಲ್ಲಿ ಕೂಡ ಆ ಬಗ್ಗೆ ಯಾವುದೇ ರೀತಿಯ ಮಾರ್ಗದರ್ಶನ ಇಲ್ಲ. ಯಾವ ಮಾರ್ಗಸೂಚಿ ಅನುಸರಿಸಬೇಕೆಂದು ನಿಯಮ ಮಾಡಿಲ್ಲ. ಯಾವ ಮಾರ್ಗಸೂಚಿ ಮೇಲೆ ಕೆಲಸ ಮಾಡಬೇಕೆಂದು ರಾಷ್ಟ್ರೀಯ ಜಲ ನೀತಿಯಲ್ಲಿ ನಿಯಮ ರೂಪಿಸಬೇಕಾಗಿದೆ. ಇಂತಹ ಗಂಭೀರವಾದ ವಿಚಾರಗಳು ನಮ್ಮ ಮುಂದಿವೆ. ಮಂಡ್ಯ ಮತ್ತು ಮೈಸೂರಿನ ರೈತರ ಸಮಸ್ಯೆ ಇದೆ. ಕರ್ನಾಟಕ ರಾಜ್ಯವನ್ನು ತಮಿಳುನಾಡಿಗೆ ಹೋಲಿಸಿದಾಗ ನಮ್ಮಲ್ಲಿ ಹೆಚ್ಚಿನ ಪ್ರದೇಶಗಳು ಬರಪೀಡಿತವಾಗಿವೆ. ಕಾವೇರಿ ಬೇಸಿನ್‌ನಲ್ಲಿ ಅವರ ಕ್ಷೇತ್ರ ಬಹಳ ಕಡಿಮೆ ಪ್ರಮಾಣದಲ್ಲಿದೆ. ನಾವು ಮೈಸೂರಿನವರು ಮಳೆ ಮೇಲೆ ಹೆಚ್ಚು ಅವಲಂಬಿತರಾಗಿದ್ದೇವೆ. ಅವರಿಗೆ North East monsoon ಕೂಡ ಹೆಚ್ಚಿಗೆ ಬರುತ್ತದೆ. ಅವರ ಬರ ಪ್ರದೇಶ ನನಗೆ ಇರತಕ್ಕಂತಹ ಮಾಹಿತಿ ಪ್ರಕಾರ 8,000 ಚದುರ ಮೀಟರ್‌ಗಿಂತ ಕಡಿಮೆ. ನಾವು ಹೆಚ್ಚಿನ ಪ್ರಮಾಣದ ನೀರನ್ನು ಶೇಖರಣೆ ಮಾಡುತ್ತೇವೆ. ನಮ್ಮ contribution ಜಾಸ್ತಿ ಇದೆ. ಅವರ contribution ಕಡಿಮೆ ಇದೆ. ಅವರ ಬರ ಪೀಡಿತ ಪ್ರದೇಶ ಕೂಡ ಕಡಿಮೆ ಇದೆ. ನಮ್ಮ ರಾಜ್ಯಕ್ಕೆ ಇಷ್ಟೊಂದು ಅಸಮತೋಲನವಾದರೆ ನಾವು ಹೇಗೆ ನ್ಯಾಯ ಕೇಳುವುದು, ಎಲ್ಲಿ ನ್ಯಾಯ ಕೇಳುವುದು? ಕರ್ನಾಟಕದ ಜನತೆಗೆ ಏನಾಗಿದೆ ಎಂದರೆ ಇಷ್ಟೊಂದು ಅನ್ಯಾಯವಾಗುತ್ತಿದೆ ಎಂದರೆ ಯಾವ ಕಾರಣಕ್ಕಾಗಿ ಆಗುತ್ತಿದೆ, ಇದರ ಹಿನ್ನೆಲೆ ಏನೆಂದು ಜನ ಪ್ರಶ್ನೆ ಮಾಡುತ್ತಾರೆ. ತಮಿಳುನಾಡಿನವರಿಗೆ ಅಂತರ್ಜಲ ಕೂಡ ಜಾಸ್ತಿ ಇದೆ. ಬರ ಪ್ರದೇಶ ಕೂಡ ಕಡಿಮೆ ಇದೆ. ಅವರು ನೀರು ಶೇಖರಣೆ ಮಾಡುವುದು ಕೂಡ ಕಡಿಮೆ. ಅವರಲ್ಲಿ ಅಂತರ್ಜಲ ಜಾಸ್ತಿ ಇದೆ, ಮಳೆ ಜಾಸ್ತಿ ಇದೆ, ಈ ಎಲ್ಲ ವಿಚಾರಗಳು ನೋಡಿದಾಗ ಇವತ್ತು ನಮ್ಮ ರಾಜ್ಯದಲ್ಲಿ ಬಹಳ ಶಾಂತಿಯುತವಾಗಿ ಹೋರಾಟ ನಡೆಯುತ್ತಿದೆ. ನಾಳೆ ಬಹುಶ: ನಮಗೆ ಅನ್ಯಾಯ ಆದರೆ ಪರಿಸ್ಥಿತಿ

ಯಾವ ಮಟ್ಟಕ್ಕೆ ಹೋಗಬಹುದು ಎಂದು ನಾವು ಊಹೆ ಮಾಡುವುದು ಕಷ್ಟವಾಗುತ್ತದೆ. ನೀರು ಸಿಗದೇ ಹೋದರೆ ಜನ ಧರಣಿಗಳನ್ನು ಪ್ರಾರಂಭಿಸುತ್ತಾರೆ. ನಾನು ಮೊನ್ನೆ ರಾತ್ರಿ 12.00 ಗಂಟೆಗೆ ನನ್ನ ಕ್ಷೇತ್ರಕ್ಕೆ ಹೋಗಿದ್ದೇನೆ. ಇಂದು ಬೆಳಿಗ್ಗೆ ಕೂಡ ಆಶ್ವಾಸನೆ ಕೊಟ್ಟು ಬಂದಿದ್ದೇನೆ. ನಾಳೆ ನಮ್ಮ ರೈತರಿಗೆ ಮತ್ತು ನಮ್ಮ ಜನರಿಗೆ ಕುಡಿಯುವ ನೀರು ಸಿಗದೇ ಹೋದರೆ ಸರ್ಕಾರ ಮತ್ತು ಅಧಿಕಾರಿಗಳು ಬಿಡಿ, ನಾವೂ ಕೂಡ ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಒಂದು ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗುತ್ತದೆ. ಯಾರೂ ಕೂಡ ರಾಜಕಾರಣಿಗಳಾಗಿ ಮತ್ತು ಮಂತ್ರಿಗಳಾಗಿ ಇಲ್ಲಿ ಬಂದು ಕುಳಿತು ಚರ್ಚೆ ಮಾಡುವುದಕ್ಕಾಗುವುದಿಲ್ಲ, ಕೆಲಸ ಮಾಡುವುದಕ್ಕಾಗುವುದಿಲ್ಲ. ಇಷ್ಟೊಂದು ಗಂಭೀರ ಪರಿಸ್ಥಿತಿಗೆ ಹೋದರೂ ಹೋಗಬಹುದು. ನಾವು ಈ ಎಲ್ಲ ವಿಷಯಗಳ ಬಗ್ಗೆ ಚಿಂತನೆಗಳನ್ನು ಮಾಡಿ ನ್ಯಾಯಬದ್ಧವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿದೆ. ರಾಜ್ಯ ಸರ್ಕಾರ ಕೂಡ Supreme Court ಮುಂದೆ ಹೋಗುತ್ತಿದೆ. ನಮ್ಮ ಸಂವಿಧಾನದಲ್ಲಿ ಇರತಕ್ಕಂತಹ ಕಾನೂನಿನ ಅಡಿಯಲ್ಲಿ ನಾವು ಎಲ್ಲ ಪ್ರಯತ್ನಗಳನ್ನು ಇವತ್ತಿನ ದಿವಸ ಮಾಡಬೇಕಾಗುತ್ತದೆ. ಅದರ ಜೊತೆಯಲ್ಲಿ ನಾವು ಚಿಂತನೆ ಮಾಡಬೇಕಾಗಿರುವ ವಿಚಾರ ನಮ್ಮ ರಾಜ್ಯದಲ್ಲಿ ರಾಜಸ್ಥಾನ ಬಿಟ್ಟರೆ ಹೆಚ್ಚಿನ ಒಣ ಭೂಮಿ ಇರಕ್ಕಂತಹ ರಾಜ್ಯ ಕರ್ನಾಟಕ ರಾಜ್ಯ. ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಹೋರಾಟ ಮಾಡೋಣ. ಇದರ ಜೊತೆಯಲ್ಲಿ ನಾವು ನಮ್ಮ ನೀರನ್ನು ಉಳಿತಾಯ ಮಾಡುವುದು ಮತ್ತು ಮಳೆ ನೀರಿನ ಉಳಿತಾಯ ಮಾಡುವುದು, ಕೆರೆಕಟ್ಟೆಗಳು ಹಾಗೂ ಬೇರೆ ಬೇರೆ ರೀತಿಯ ಅಂತರ್ಜಲ ಮಟ್ಟ ಏರಿಸುವುದು ಕೂಡ ನಾವು ಮಾಡಬೇಕಾಗಿದೆ. ಅದರ ಜೊತೆಯಲ್ಲಿ ಕೃಷಿ ಕ್ಷೇತ್ರದಲ್ಲಿ ಹೇಗೆ ಮಾರ್ಪಾಟು ಮಾಡಿಕೊಳ್ಳಬೇಕು, ಬೆಳೆಯುವಂತಹ ಬೆಳೆಗಳಲ್ಲಿ ನಾವು ಹೇಗೆ ಮಾರ್ಪಾಟು ಮಾಡಿಕೊಳ್ಳಬೇಕೆಂಬ ಬಗ್ಗೆ ಚಿಂತನೆ ಮಾಡಬೇಕಾಗಿದೆ. ನೀರನ್ನು ಎಲ್ಲೆಲ್ಲಿ ಉಳಿತಾಯ ಮಾಡುವುದಕ್ಕಾಗುತ್ತದೆ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಇಲ್ಲಿ ನೀರು ಸಿಕ್ಕ ತಕ್ಷಣ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ, ನೀರಿನ ಸಮಸ್ಯೆ ಇನ್ನು ಉಲ್ಬಣ ಆಗುತ್ತಾ ಹೋಗುತ್ತದೆ. ಅದು ಕಡಿಮೆ ಆಗುವುದಿಲ್ಲ. ಈ ಎಲ್ಲ ವಿಷಯಗಳನ್ನು ನಾವು ಕಾವೇರಿ ವಿವಾದದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಚಿಂತನೆ ಮಾಡಬೇಕು. ಯಾವ ಯಾವ ಕ್ಷೇತ್ರದಲ್ಲಿ ಹೆಚ್ಚು ನೀರು ಇವತ್ತಿನ ದಿವಸ

ಪೋಲಾಗಿ ಹೋಗುತ್ತಿದೆ, ಅದನ್ನು ಎಲ್ಲಿ ಉಳಿಸಬಹುದು ಎಂಬ ಬಗ್ಗೆ ಕೂಡ ನಾವು ಸಮಗ್ರವಾಗಿ ಚಿಂತನೆ ಮಾಡಬೇಕು. ದೂರದೃಷ್ಟಿ ಇಟ್ಟುಕೊಂಡು ನಾವು ವಿಚಾರ ಮಾಡಬೇಕಾಗಿದೆ. ಕೃಷ್ಣರಾಜಸಾಗರ ಅಣೆಕಟ್ಟು ಅಂದು ಕಟ್ಟಿದ್ದರಿಂದ ಇವತ್ತು ಅನುಕೂಲವಾಗುತ್ತಿದೆ. ಹಿಂದಿನ ಯೋಜನೆಗಳಿಂದ ಇವತ್ತು ಅನುಕೂಲವಾಗುತ್ತಿದೆ. ಕೇವಲ ಮುಂದಿನ 10–15 ವರ್ಷಗಳಲ್ಲಿ ಏನಾಗಬಹುದು ಎಂದು ನಾವು ಯೋಚನೆ ಮಾಡುವುದಲ್ಲ. ಮುಂದಿನ ಪೀಳಿಗೆಗೆ ಅನುಕೂಲವಾಗಬೇಕಾಗಿದೆ. ಬೆಂಗಳೂರಿನಲ್ಲಿ ನಾವು ಕೊಳವೆಬಾವಿ ಹಾಕಿದರೆ ನೀರು ಸಿಗುತ್ತಿಲ್ಲ. ಒಂದು ನಗರದಲ್ಲಿ ಈ ಪರಿಸ್ಥಿತಿ ಬಂದರೆ ಅದೇ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲೂ ಕೂಡ ಇದೇ ಪರಿಸ್ಥಿತಿ ಬಂದರೆ ಏನಾಗಬಹುದು ಎಂಬ ಬಗ್ಗೆ ನಾವು ಸ್ವಲ್ಪ ಆಲೋಚನೆಯನ್ನು, ಚಿಂತನೆಯನ್ನು ಮಾಡೋಣ. ಈಗಿನ ಪರಿಸ್ಥಿತಿಯಲ್ಲಿ ನಮ್ಮ ನಮ್ಮ ಮನೆಗಳಲ್ಲಿಯೇ ನಾವು ಬೋರ್‌ವೆಲ್‌ಗಳನ್ನು ಹಾಕಿಕೊಂಡಿದ್ದೇವೆ. ಈ ಬೋರ್‌ವೆಲ್‌ಗಳಲ್ಲೂ ನೀರು ನಿಂತುಹೋಗಿ, ಕಾವೇರಿ ನೀರು ಬರುವುದೂ ಕೂಡ ನಿಂತು ಹೋದರೆ ಜನ ಏನು ಮಾಡುತ್ತಾರೆ? ಇದರ ಬಗ್ಗೆ ದೀರ್ಘವಾಗಿ ಮುಂದಾಲೋಚನೆ ಮಾಡಬೇಕಾದಂಥ ವಿಚಾರವಾಗಿದೆ. ಖಂಡಿತವಾಗಿ ಸರ್ಕಾರ ಇದರ ಬಗ್ಗೆ ಆಲೋಚನೆಯನ್ನು ಮಾಡಿ ಕ್ರಿಯಾತ್ಮಕವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಜೊತೆಯಲ್ಲಿ ಸರ್ಕಾರ ಕಾವೇರಿ ನೀರಿನ ತೀರ್ಪಿನ ಬಗ್ಗೆ ಕಾನೂನು ಮೂಲಕ ಹೋರಾಟವನ್ನು ಮಾಡಬೇಕಾಗುತ್ತದೆ. ಈಗಾಗಲೇ ನಾವೂ ಕೂಡ ಬೆಂಗಳೂರು ನಗರದಲ್ಲಿ ಒಂದು ಬಳಕೆದಾರರ ಸಂಘ ಎಂದು ಮಾಡಿ ಸುಪ್ರೀಂ ಕೋರ್ಟ್‌ಗೆ ಒಂದು ಮೇಲ್ಮನವಿಯನ್ನು ಸಲ್ಲಿಸಿದ್ದೇವೆ. ಅದರಲ್ಲಿ ನಾವು ಇದು ನಮ್ಮ ಮೂಲಭೂತ ಹಕ್ಕಿನ ಉಲ್ಲಂಘನೆ, constitution ನಲ್ಲಿ right to livelihood ಎಂದು ಏನು ಬರುತ್ತದೆ right to life ಎಂದು ಏನು ಬರುತ್ತದೆ, ಅದರ ಉಲ್ಲಂಘನೆ ಆಗುತ್ತದೆ ಎಂದು ಹೇಳಿ ಮತ್ತು ಇದರ ಪೂರಕವಾಗಿಯೇ ಬೇರೆ ಬೇರೆ ವಿಚಾರಗಳನ್ನೂ ಸೇರಿಸಿದ್ದೇವೆ. ಇದರಲ್ಲಿ Inter– State Water Disputes Actನ ವಿಚಾರವಿರಬಹುದು, ನಮ್ಮ ಸಂವಿಧಾನದಲ್ಲಿರತಕ್ಕಂಥ Directive Principles of State Policy ಇರಬಹುದು, ಈ ರೀತಿಯ ವಿಚಾರಗಳನ್ನು ತೆಗೆದುಕೊಂಡು ಈಗಾಗಲೇ ನಾವು ಮೇಲ್ಮನವಿಯನ್ನು ಸಲ್ಲಿಸಿದ್ದೇವೆ.

ಮುಂದಿನ ವಾರದಲ್ಲಿ ಅದರ ಅಡ್ಮಿಶನ್‌ಗೆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇದನ್ನು ನೀರು ಬಳಕೆದಾರರ ಸಂಘದ ಮೂಲಕ ಮಾಡುತ್ತಿದ್ದೇವೆ. ಇದು ನಮ್ಮ ಕಡೆಯಿಂದ ಮಾಡುತ್ತಿರುವ ಪ್ರಯತ್ನ. ಆದರೆ ಇದರ ಬಗ್ಗೆ ಸರ್ಕಾರ ಇವತ್ತು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಬೇಕು. ಇವತ್ತು ಯಾವ ಯಾವ ರೀತಿಯಲ್ಲಿ ಎಷ್ಟು ಅವಕಾಶಗಳು ಸಿಗುತ್ತದೋ ಅವೆಲ್ಲವನ್ನೂ ಸೇರಿಸಿಕೊಂಡು ಒಗ್ಗಟ್ಟಿನಿಂದ ಹೋರಾಟವನ್ನು ನಾವೇನು ಮಾಡುತ್ತಿದ್ದೇವೆ ಅದೇ ಪ್ರಕಾರ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ):- ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಹೇಳುತ್ತಾ ಕುಡಿಯುವ ನೀರು, ಗಾಳಿ, ಬೆಳಕು, ಬಹುಶ: ಆ ಪ್ರದೇಶಗಳಲ್ಲಿ ಬರತಕ್ಕಂಥ ಗಾಳಿ, ನೀರು, ಬೆಳಕು ಇವುಗಳನ್ನು ಬಳಸತಕ್ಕಂಥ ಸಂಪೂರ್ಣ ಹಕ್ಕು ಪ್ರತಿಯೊಬ್ಬ ಜೀವಿಗೂ ಇದೆಯೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇವತ್ತು ನ್ಯಾಯ ಮಂಡಳಿ ತೀರ್ಪಿನಿಂದ ರಾಜ್ಯದಲ್ಲಿ ಮತ್ತು ರಾಷ್ಟ್ರದ ಒಕ್ಕೂಟದ ವ್ಯವಸ್ಥೆಯಲ್ಲಿ ಕ್ಲಿಷ್ಟವಾಗುತ್ತಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿ, ಕಾವೇರಿ ನೀರಿನ ಈ ಒಂದು ತೀರ್ಪು ಮತ್ತು ಜಲವಿಭಜನೆ ಖಂಡತವಾಗಿಯೂ ಬಹುಶ: ಎಲ್ಲೋ ಒಂದು ಕಡೆ ಎಲ್ಲರೂ ಪ್ರತಿಪಾದಿಸಿದಂತೆ ಕರ್ನಾಟಕಕ್ಕೆ ಇದು ಒಂದು "ಮರಣ ಶಾಸನ". ಈ ಒಕ್ಕೂಟ ವ್ಯವಸ್ಥೆಯ ವಿಶ್ವಾಸಕ್ಕೆ ಒಂದು ರೀತಿಯಾಗಿ ಮರಣ ದಂಡನೆ ವಿಧಿಸಿದಂತೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಶತಮಾನಕ್ಕೂ ಹಳೆಯದಾಗಿರತಕ್ಕಂಥ ಕಾವೇರಿ ವಿವಾದದ ಬಗ್ಗೆ ನಿಜವಾಗಿ ನ್ಯಾಯಮಂಡಳಿ ನ್ಯಾಯಬದ್ಧವಾಗಿ ಸಮಾನವಾಗಿ ಸಮಾನತೆಯಿಂದ ಪರಸ್ಪರ ರಾಜ್ಯಗಳ ಫೀಲ್ಡ್ ರಿಯಾಲಿಟಿಯನ್ನು ಅವಲೋಕಿಸುತ್ತದೆ ಮತ್ತು ಆ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುತ್ತದೆ ಮತ್ತು ಆ ರೀತಿ ಸಂಗಹಿಸಿ ಅವಲೋಕಿಸಿ ನ್ಯಾಯಯುತವಾದ ತೀರ್ಪನ್ನು ಕೊಡುತ್ತದೆ ಎನ್ನತಕ್ಕಂಥ ನಂಬಿಕೆ ನಮಗಿತ್ತು. ಬಹುಶ: ಈ ತೀರ್ಪು ಬಂದಾದ ಮೇಲೆ ಎಲ್ಲೋ ಒಂದು ಕಡೆ ಈ ತೀರ್ಪು ಏಕಮುಖವಾಗಿದೆ ಮತ್ತು ಪೂರ್ವಾಗ್ರಹದಿಂದ ಕೂಡಿದೆಯೆಂದು ಬಹಳ ಸ್ಪಷ್ಟವಾಗಿ ನಮಗೆ ಗೋಚರವಾಗುತ್ತದೆ. ಈ ಹಿಂದೆ ಮಾತನಾಡಿದಂಥ ಎಲ್ಲ ನಾಯಕರುಗಳು

ಮತ್ತು ಹಿರಿಯ ಸದಸ್ಯರುಗಳು ಬಹಳ ಸ್ಪಷ್ಟವಾದಂಥ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇವತ್ತು ಕರ್ನಾಟಕದಿಂದ ಕಾವೇರಿ ಬೇಸಿನ್‌ಗೆ ಕೊಡುಗೆಯಾಗಿರತಕ್ಕಂಥ ನೀರಿನ ಅಂಶದಲ್ಲಿ ಬಹುಶ: ಸಂಪೂರ್ಣವಾಗಿ ಅದನ್ನು ಮರೆಮಾಚಿ ಸಿಂಹಪಾಲನ್ನು ಒಂದು ಕಡೆ ಕೊಟ್ಟು ಮೃಷ್ಟಾನ್ನ ಭೋಜನವನ್ನು ಒಂದು ಕಡೆ ಉಣಿಸಿ ಇನ್ನೊಂದು ಕಡೆ ಎಲ್ಲೋ ಒಂದು ಕಡೆ ಉಪವಾಸ ಹಾಕತಕ್ಕಂತಹ ದಿಕ್ಕಿನಲ್ಲಿ ತೀರ್ಪನ್ನು ಕೊಟ್ಟಿರತಕ್ಕಂಥದ್ದು, ನಿಜವಾಗಿಯೂ ಇದರಿಂದ ಅನ್ಯಾಯವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಮತ್ತೆ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ತೀರ್ಪು ಬಂದು 32 ದಿವಸಗಳಾಗುತ್ತಾ ಬಂತು. ಈ 32 ದಿವಸಗಳಲ್ಲಿ ಇಡೀ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೂ ತೀರ್ಪಿನ ವಿರುದ್ಧ ಪ್ರತಿಭಟನೆಯನ್ನು ಮಾಡುತ್ತಿದ್ದರೂ ಕೂಡ ಸರ್ಕಾರದಲ್ಲಿರುವವರು ತಾವು ಅಧಿಕಾರಕ್ಕೆ ಅಂಟಿಕೊಂಡಿದ್ದೇವೆ ಎನ್ನತಕ್ಕಂಥ ಭಾವನೆಯನ್ನು ತೋರಿಸದೇ ಜನಹಿತವನ್ನು ಮತ್ತು ಸ್ಪಷ್ಟವಾಗಿ ಆಗಿರತಕ್ಕಂಥ ಅನ್ಯಾಯವನ್ನು ರಾಜಕೀಯವಾಗಿ ಮತ್ತು ಕಾನೂನುಬದ್ಧವಾಗಿ ಹೇಳತಕ್ಕಂಥ ಒಂದು ಧೈರ್ಯವನ್ನು ಮತ್ತು ಎದೆಗಾರಿಕೆಯನ್ನು ತೋರಿಸಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಹುಶ: 07.02.2007 ರಂದು ನಡೆದಂಥ ಸರ್ವಪಕ್ಷಗಳ ಸಭೆಯ ತೀರ್ಮಾನದ ಒಂದು ಪ್ರತಿ ಸಹ ಇಲ್ಲಿ ಬರುತ್ತದೆ, ಆ ಮೂಲಕ ಅಲ್ಲಿ ಚರ್ಚೆಯಾದಂಥ ವಿಷಯಗಳು ಬರುತ್ತದೆ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಆ ಪ್ರತಿಯನ್ನೂ ಕೂಡ ನಮಗೆ ಒದಗಿಸಿಕೊಡಲಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸರಿಯೋ ತಪ್ಪೋ ಹೇಳ ಬಯಸುತ್ತೇನೆ. ನಮ್ಮ ಪರವಾದಂಥ ವಕೀಲರು ಈ ತೀರ್ಪು ಫೇರ್ ಎಂದು ಹೇಳಿದಂಥ ಒಂದು ಮಾತು ಬಹುಶ: ನಮ್ಮ ವಿಶ್ವಾಸವನ್ನು ಎಷ್ಟರ ಮಟ್ಟಿಗೆ ಕುಂದಿಸಿತು ಎಂದರೆ ಎಲ್ಲೋ ಒಂದು ಕಡೆ, ಏನಿದು ಈ ರೀತಿಯಾಯಿತು, ನಮ್ಮ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುತ್ತಾರೆ, ಅದರ ಪರವಾಗಿರುತ್ತಾರೆ ಎಂದುಕೊಂಡಿದ್ದರೆ, ಆ ರೀತಿಯಾಗದೇ ಬಹಳ ನೋವಾಗತಕ್ಕಂಥ ಒಂದು ಸ್ಥಿತಿ ಆಯಿತು. ಕರುಣಾನಿಧಿಯವರು ನೀಡಿದಂಥ ಹೇಳಿಕೆಯನ್ನು ನಾನು ಓದಿದೆ. ಕರುಣಾನಿಧಿಯವರು ಹೇಳಿದ್ದೇನೆಂದರೆ ಕರ್ನಾಟಕ ಮತ್ತು ತಮಿಳುನಾಡು ಎರಡೂ ರಾಜ್ಯಗಳು ಒಪ್ಪಿಕೊಂಡಾಗ ಮಾತ್ರ ನನಗೆ ಸಮಾಧಾನವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಬಹುಶ: ಇದು

ಬಹಳ ಮುಖ್ಯವಾಗಿರತಕ್ಕಂಥ ವಿಷಯ. ನಾನು ಒಂದು ಮೂಲಭೂತವಾದ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಈ ರಾಜ್ಯದಲ್ಲಿ ಇವತ್ತು ಒಂದು ಅಣೆಕಟ್ಟನ್ನು ಕಟ್ಟಬೇಕಾದರೆ ಬಹಳಷ್ಟು ಹಳ್ಳಿಗಳನ್ನು ನಾವು ತ್ಯಾಗ ಮಾಡಿದ್ದೇವೆ, ಇದಕ್ಕೆ ಬದಲಾಗಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಿದ್ದೇವೆ. ಈ ರೀತಿಯಲ್ಲಿ ಅಲ್ಲಿ ಅಣೆಕಟ್ಟನ್ನು ಕಟ್ಟಿ ಅಲ್ಲಿ ನೀರನ್ನು ಶೇಖರಣೆ ಮಾಡಿ ಮತ್ತೊಂದು ರಾಜ್ಯಕ್ಕೆ ಕೊಡುವಾಗ ಪರ್ಯಾಯವಾಗಿ ಅವರು ವಿದ್ಯುತ್ ಅಥವಾ ಬೇರೊಂದನ್ನು ಕೊಡುವ ವ್ಯವಸ್ಥೆ ಇದೆಯೆ? ಆ ರೀತಿ ಇರುವ ಬಗ್ಗೆ ಖಂಡಿತವಾಗಿಯೂ ಇದುವರೆಗೂ ನನ್ನ ಗಮನಕ್ಕಂತೂ ಬಂದಿಲ್ಲ. ಈ ಸಂದರ್ಭದಲ್ಲಿ ನಾವು ಬಹಳ ಗಂಭೀರವಾಗಿ ಯೋಚನೆಯನ್ನು ಮಾಡಬೇಕಾಗುತ್ತದೆ. ಈ ಹಿಂದೆಯೇ ಕಾವೇರಿ ನೀರಿನ ಬಗ್ಗೆ ಇಂಟಿರೀಮ್ ಆರ್ಡರ್ ಬಂದಾಗಲೇ ನಾವು ಎಚ್ಚೆತ್ತುಕೊಳ್ಳಬೇಕಾಗಿತ್ತು, ಎಲ್ಲೋ ಒಂದು ಕಡೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎನ್ನತಕ್ಕಂಥ ವಾಸನೆ ಅವೊತ್ತೇ ಬಂದಿತ್ತು. ಆದರೆ ಎಲ್ಲಿ ನಾವು ಎಡವಿದ್ದೇವೆ, ಏಕೆ ಎಡವಿದ್ದೇವೆ, ಇಷ್ಟು ದಿವಸ ಕುಂಭಕರ್ಣ ನಿದ್ದೆಯಲ್ಲಿ ಏಕಿದ್ದೆವು ಎಂಬ ಬಗ್ಗೆ ಬಹಳ ಎಚ್ಚರಿಕೆಯಿಂದ ನಮಗೆ ನಾವೇ ಪ್ರಶ್ನೆಯನ್ನು ಹಾಕಿಕೊಂಡು ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಹಲವಾರು ನೀರಾವರಿ ಯೋಜನೆಗಳನ್ನು ಜಾರಿ ಮಾಡುವುದರಲ್ಲಿಯೂ ಸಹ ನಾವು ವಿಳಂಬ ಮಾಡಿದ್ದೇವೆ. ಇವೊತ್ತಿನ ಈ ವ್ಯವಸ್ಥೆಯನ್ನು ನೋಡಿದಾಗ, ಕನ್ನಡದಲ್ಲಿ ಒಂದು ಗಾದೆ ನನ್ನ ನೆನಪಿಗೆ ಬರುತ್ತಿದೆ "ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ" ಎಂದು ಇದೆ. ಯಾರದ್ದೋ ದುಡಿಮೆ, ನಾವೇ ಶೇಖರಣೆ ಮಾಡಿರತಕ್ಕಂಥದ್ದು, ಇವೊತ್ತು ಹೊರ ರಾಜ್ಯಕ್ಕೆ ಅದನ್ನು ಕೊಡಬೇಕು ಎನ್ನುವ ರೀತಿಯಲ್ಲಿ ಹೇಳಿರುವುದು ಅನ್ಯಾಯ. ನಿಜವಾಗಿಯೂ ನ್ಯಾಯ ಮಂಡಳಿ ನ್ಯಾಯವಾಗಿ ವರ್ತಿಸಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಎತ್ತುತ್ತೇನೆ. ಈಗಾಗಲೇ ಈ ತೀರ್ಪಿನ ಬಗ್ಗೆ ಕೇಂದ್ರದಲ್ಲಿರುವ ಪ್ರಧಾನಮಂತ್ರಿಗಳು ಮಧ್ಯೆ ಪ್ರವೇಶ ಮಾಡಬೇಕೆಂದು ನಮ್ಮ ರಾಜ್ಯದ ಎಂ.ಪಿ.ಗಳು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಕೇಳಿಕೊಂಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿಗಳ ಹೊಣೆಗಾರಿಕೆಯೂ ಕೂಡ ಈ ವಿಷಯದಲ್ಲಿ ಇರುತ್ತದೆ. ಕಾವೇರಿ ನ್ಯಾಯಮಂಡಳಿ ಕೊಟ್ಟಿರತಕ್ಕಂಥ ತಳಹದಿಯನ್ನು ನೋಡಿದಾಗ ಸ್ವಾತಂತ್ರ್ಯಪೂರ್ವವಾಗಿರತಕ್ಕಂಥ ಮಾಹಿತಿಯಲ್ಲಿ, ಅಂದರೆ 1894 ಮತ್ತು 1924 ರ ತಳಹದಿಯ ಮೇಲೆ ತೀರ್ಪು ಕೊಟ್ಟಂತಿದೆ. 1892 ಮತ್ತು 1924ರ

ಒಪ್ಪಂದದ ಪ್ರತಿಯಲ್ಲೇನಿದೆ ಅದರ ಆಧಾರದ ಮೇಲೆ ಹೋಗಿ ಕರ್ನಾಟಕವನ್ನು ಬ್ಲಾಕ್‌ಮೇಲ್ ಮಾಡುತ್ತಾ ಮಾಡುತ್ತಾ ಕೊನೆಗೆ ಈ ಸ್ಥಿತಿಗೆ ತಂದಿರುವ ಬಗ್ಗೆ ನಿಜವಾಗಿ ನಾನು ಹೇಳುತ್ತೇನೆ, ಇದು ಸರಿಯಲ್ಲ, ಈ ಧಿಕ್ಕಿನಲ್ಲಿ ನಾವು ಕಾರ್ಯೋನ್ಮುಖರಾಗಬೇಕು. ಈಗಷ್ಟೇ ದಿನೇಶ್ ಗುಂಡೂರಾವ್‌ರವರು ಹೇಳಿದ ಹಾಗೆ ಖಂಡಿತವಾಗಿ ನಾನು ಹೇಳುತ್ತೇನೆ, ಬೆಂಗಳೂರು ನಗರದಲ್ಲಿ ಕಳೆದ 15 ದಿವಸಗಳಿಂದ ನೀರು ಸರಿಯಾಗಿ ಬರುತ್ತಿಲ್ಲ. ರಾಜಾಜಿನಗರದ ಶಾಸಕನಾಗಿ ಹೇಳುತ್ತಿದ್ದೇನೆ, ಅಲ್ಲಿ ಯಾವ ರೀತಿಯಾಗಿ ನೀರಿನ ಯಾತನೆಯನ್ನು ಜನರು ಅನುಭವಿಸುತ್ತಿದ್ದಾರೆಂದರೆ, ಈಗಲೇ ಹೀಗಾದರೆ ಮುಂದಿನ ದಿನಗಳಲ್ಲಿ ಯಾವ ಸ್ಥಿತಿಯಾಗಬಹುದು. ತಿಪ್ಪಗೊಂಡನಹಳ್ಳಿ ಕೆರೆಯಲ್ಲೂ ಕೂಡ ಸಂಪೂರ್ಣ ನೀರು ಇಲ್ಲದೇ ಈಗ ಒಂದು Pump ಮಾತ್ರ ವರ್ಕ್ ಆಗುತ್ತಿದೆ. ಕಳೆದ 15, 20 ದಿವಸಗಳಿಂದ ಸಂಪೂರ್ಣವಾಗಿ ನೀರು ನಮಗೆ ನಿಂತುಹೋಗಿದೆ. ಕಳೆದ ಹತ್ತು, ಹನ್ನೆರಡು ದಿವಸಗಳಿಂದ ನೀರು ಬಂದಿಲ್ಲ. ಬೆಳಗ್ಗೆ ನಾನು ಈ ಸಮಸ್ಯೆಯನ್ನು ಕೇಳುವುದಕ್ಕೆ ಹೋದಾಗ verbally, physically I was tortured; handled. ಈ ರೀತಿಯ ಒಂದು ಸ್ಥಿತಿಗೆ ನಮ್ಮ ಬೆಂಗಳೂರು ನಗರದ ಶಾಸಕರು ತಲುಪುತ್ತಿದ್ದರೆ, ಇನ್ನು ಬೃಹತ್ ಬೆಂಗಳೂರನ್ನು ಮಾಡುವುದಕ್ಕೆ ಹೊರಟಾಗ ಕಾವೇರಿ ನೀರನ್ನೇ ಅವಲಂಬಿತವಾಗಿ ನಾವು ನಗರವನ್ನು ಬೆಳೆಸುವುದಕ್ಕೆ, ಕಟ್ಟುವುದಕ್ಕೆ, ಇವೊತ್ತು ಬೆಂಗಳೂರಿನಿಂದ ಮೈಸೂರಿನವರೆಗೂ ಕಾವೇರಿ ನೀರನ್ನೇ ಅವಲಂಬಿತವಾಗಿ ನಗರವನ್ನು, ಕಾರ್ಖಾನೆ ವಲಯಗಳನ್ನು ಮತ್ತು ಸ್ಯಾಟಲೈಟ್ ಟೌನ್‌ಶಿಪ್‌ಗಳನ್ನು ನಾವು ಬೆಳೆಸುತ್ತೇವೆ ಎನ್ನುವುದಾದರೆ ಮುಂದೆ ಎಂಥ ಕ್ಲಿಷ್ಟ ಸ್ಥಿತಿ ಬರುತ್ತದೆ. ಈ ನ್ಯಾಯ ಮಂಡಳಿ ತೀರ್ಪನ್ನು ಕೊಡುವಾಗ ಬಹುಶ: ಈ ಎಲ್ಲ ಅಂಶಗಳನ್ನು ಪರಿಗಣನೆಗೆ ಏಕೆ ತೆಗೆದುಕೊಳ್ಳಲಿಲ್ಲ. ಕೇವಲ ಪೇಪರ್ ಡಾಕ್ಯುಮೆಂಟ್ಸ್‌ಗಳ ಮೇಲೆ ಹೋಗಿರತಕ್ಕಂಥದ್ದನ್ನು ನೋಡಿದಾಗ ಬಹುಶ: ಇದರಿಂದ ನಮಗೆ ಸಂಪೂರ್ಣ ನ್ಯಾಯ ಒದಗಿಸಿಕೊಟ್ಟಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಗಂಗಾ–ಕಾವೇರಿ ಎನ್ನತಕ್ಕಂಥ ಯೋಜನೆಯನ್ನು ಈ ದೇಶದಲ್ಲಿ ಮಾಡಬೇಕಾಗಿತ್ತು ಎಂದು ಹಲವಾರು ಜನರು ಹೇಳುತ್ತಿದ್ದರು. ರಾಷ್ಟ್ರೀಯ ಜಲನೀತಿಯನ್ನು ತರದೆಹೋದರು. ನಾನು ಇತ್ತೀಚೆಗೆ ಒಂದು ಸಭೆಗೆ ಹೋಗಿದ್ದಾಗ ಡಿಬೆಟ್‌ನಲ್ಲಿ ಕೆಲವು ಹೋರಾಟಗಾರರರು ಮಾತನಾಡುತ್ತಾ ಮುಂದೆ ಬ್ರಹ್ಮಪುತ್ರ ನದಿಯನ್ನು

ಚೈನಾ ಕಡೆಗೆ ತಿರುಗಿಸತಕ್ಕಂಥ ಪ್ರಯತ್ನ ಆಗುತ್ತಿದೆ ಎಂದು ಹೇಳುತ್ತಿದ್ದರು. ಬಹುಶ: ಈ ನಿಟ್ಟಿನಲ್ಲಿ ನಾವು ರಾಷ್ಟ್ರೀಯ ಜಲನೀತಿಯನ್ನು ಮಾಡದೇ ಹೋದರೆ ಯಾರೋ ಹೇಳಿದ ಹಾಗೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಯುದ್ಧಗಳು ಸಂಭವಿಸುತ್ತವೆ ಎನ್ನತಕ್ಕಂಥ ದಿನಗಳು ದೂರವಾಗುವುದಿಲ್ಲವೇನೋ ಎನ್ನತಕ್ಕಂಥ ಆತಂಕ ಬರುತ್ತದೆ. ಇವತ್ತು ಬಹಳ ಗಂಭೀರವಾಗಿ ಯೋಚನೆಯನ್ನು ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿಯೇ ನಮ್ಮ ಆಂಜನೇಯರವರು ಹೇಳಿದಂತೆ ಒಂದು ಕಡೆ ಅತೀವೃಷ್ಟಿ, ಮತ್ತೊಂದು ಕಡೆ ಅನಾವೃಷ್ಟಿ. ಅತೀವೃಷ್ಟಿಯಿಂದ ಒಂದು ಕಡೆ ಕೋಡಿ ಹೊಡೆಯುತ್ತದೆ, ಇನ್ನೊಂದು ಕಡೆ ಪ್ರವಾಹ ಹರಿಯುತ್ತದೆ. ಈ ಗಂಗಾ–ಕಾವೇರಿ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರ ಒತ್ತಾಯವನ್ನು ಮಾಡಬೇಕು. ಕೇಂದ್ರ ಸರ್ಕಾರ ಕೂಡ ದೂರದೃಷ್ಟಿಯನ್ನು ಇಟ್ಟುಕೊಂಡು ಕೆಲಸವನ್ನು ಮಾಡಬೇಕಾಗುತ್ತದೆ. ಈ ರೀತಿ ಮಾಡದಿದ್ದರೆ ದಕ್ಷಿಣ ಭಾಗದ ರಾಜ್ಯಗಳಲ್ಲಿ ಕುಡಿಯುವ ನೀರಿಗೋಸ್ಕರ, ಬೆಳೆಗಾಗಿ, ರೈತರಿಗಾಗಿ ಯುದ್ಧಗಳು, ರಾಜ್ಯ ರಾಜ್ಯಗಳ ನಡುವೆ ಅಸೂಯೆ, ದ್ವೇಷಗಳು ಬಂದು ಇರತಕ್ಕಂಥ ಪ್ರೀತಿಯನ್ನು ಕಳೆದುಕೊಳ್ಳತಕ್ಕಂಥ ಭಾವನೆಗಳು ಬರುವುದನ್ನು ತಡೆಗಟ್ಟಬೇಕು ಎಂದು ನಾನು ಈ ಸಂಧರ್ಬದಲ್ಲಿ ಹೇಳಿದರೆ ತಪ್ಪಾಗಲಾರದು. ಬೆಂಗಳೂರು ನಗರದಲ್ಲಿ underground water table ಎಷ್ಟು ಕುಸಿದಿದೆ ಎಂದರೆ ಬಹಳ ಕಷ್ಟವಾಗಿದೆ. ಮಾನ್ಯ ದಿನೇಶ್‌ರವರ ಕ್ಷೇತ್ರದಲ್ಲಿ ಇವತ್ತು ಬೆಳಿಗ್ಗೆ ಗೊತ್ತಾಯಿತು. ಬೆಂಗಳೂರು ನಗರದಲ್ಲಿ ಒಂದು ಕಡೆ apartmentಗಳನ್ನು ಕಟ್ಟುವುದಕ್ಕೆ ಅನುಮತಿಯನ್ನು ಕೊಡುತ್ತಿದ್ದೇವೆ. ಒಂದು Manthri Apartment ಎಂದು ಹೇಳಿ ಸವಿತ ಸಂಪಿಗೆ talkiesನಲ್ಲಿ 21 bore well ಗಳನ್ನು 500 ರಿಂದ 700 ಅಡಿಯವರೆಗೂ ತೋಡಿದ್ದಾರೆ. ಸುತ್ತಮುತ್ತ ಇರುವ ಎಲ್ಲಾ ಕೊಳವೆ ಬಾವಿಗಳು ಬತ್ತಿಹೋಗಿವೆ. ನಮ್ಮ ಸ್ಥಿತಿ ಏನಾಗಬೇಕು ಹೇಳಿ? ಕಾವೇರಿ ನೀರು ಬರುವುದಿಲ್ಲ. ತಿಪ್ಪಗೊಂಡನಹಳ್ಳಿ ನೀರು ಕಡಿಮೆಯಾಗಿದೆ. ನಮ್ಮ ಸ್ಥಿತಿ ಏನಾಗಬೇಕು? ಬಹುಶ: ಮುಂದಿನ ದಿನಗಳಲ್ಲಿ ಅಂತರ್ಜಲ ಸಂಪೂರ್ಣವಾಗಿ ವಿಫಲವಾದರೆ ಈ ನಗರದಲ್ಲೂ Bangalore is going to be a dying city ಎನ್ನುವಂತಹ prediction ಏನಿದೆ ಆ ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದ್ದೇವೇನೋ ಎನ್ನುವಂತಹ ಆತಂಕವನ್ನು

ಹೊಂದಿದವನಾಗಿ ನಾನು ಈ ರಾಜ್ಯದ ಹಾಗೂ ಈ ನಗರದ ಶಾಸಕನಾಗಿ ಮುನ್ನೆಚ್ಚರಿಕೆಯನ್ನು ರಾಜ್ಯ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟವರಿಗೆ ಈ ಸಂದರ್ಭದಲ್ಲಿ ಕೊಡುವುದಕ್ಕೆ ಬಯಸುತ್ತೇನೆ. ಈ ಒಂದು ಒಪ್ಪಂದದಲ್ಲಿ ನಾನು ನೋಡಿದಾಗ ಗೊತ್ತಾಗುತ್ತದೆ, 65 ಲಕ್ಷ ಜನಸಂಖ್ಯೆ ಇದ್ದಂತಹ ರಾಜಾಶ್ರಯದ ಆಶ್ರಿತ ಸಂಸ್ಥಾನದ ವ್ಯವಸ್ಥೆಯಲ್ಲಿ ಆದಂತಹ ಒಂದು ಒಪ್ಪಂದ ಏನಿದೆ, ಇವತ್ತು ಅದರ basis ಮೇಲೆ ನಾವು ಒಪ್ಪಿಗೆಯನ್ನು ಕೊಡಬೇಕು ಎನ್ನುವುದಾದರೆ ಇದು ಖಂಡಿತವಾಗಿ ಸರಿಯಲ್ಲ. ಇದರಿಂದ ಒಗ್ಗಟ್ಟಿಗೆ ಧಕ್ಕೆ ಬರುತ್ತದೆ. ರಾಜ್ಯದ ಜನರು ಪರಸ್ಪರ ನಂಬಿಕೆ ಕಳೆದುಕೊಂಡು ಇನ್ನು ಮುಂದಿನ ದಿನಗಳಲ್ಲಿ ಇದರಿಂದ ಬಹಳ ಕಷ್ಟವಾಗುತ್ತದೆ. ಒಬ್ಬರು ಬರ್ಬರ್ ಎನ್ನುವ ಪ್ರೊಫೆಸರ್ ಅವರು ಬಹಳ ಚೆನ್ನಾಗಿ ಹೇಳುತ್ತಾರೆ. “A Judgment which cannot be implemented, cannot be a Judgment" ಎನ್ನುವಂತಹ ಮಾತನ್ನು ಹೇಳುತ್ತಾರೆ. ಖಂಡಿತವಾಗಿ ಕೂಡ ಇದು ಅನುಷ್ಠಾನಕ್ಕೆ ತರಲಿಕ್ಕೆ ಆಗದೇ ಇರುವಂತಹ ಒಂದು ವ್ಯವಸ್ಥೆ. ಪಂಜಾಬ್‌ನಲ್ಲಿ ಇವತ್ತು ತೀರ್ಪು ಬಂದಿದ್ದರೂ ಕೂಡ ಇನ್ನೂ Gazette Notification ಆಗಿಲ್ಲ. Gazette Notification ಅನ್ನು ರಾಜಕೀಯವಾಗಿ ತಡೆಯ ಬೇಕಾಗುತ್ತದೆ. ಬಹುಶ: ಇದನ್ನೆಲ್ಲಾ Court ಗಳಲ್ಲೇ ಬಗೆಹರಿಸತಕ್ಕಂಥಾದ್ದಲ್ಲ. ಅದಕ್ಕೆ ರಾಜಕೀಯವಾಗಿ ನಾವು ಒತ್ತಡ ತರಬೇಕಾಗುತ್ತದೆ. ನಾನು ಹೇಳುತ್ತೇನೆ, ಮಾನ್ಯ ರಾಷ್ಟ್ರಪತಿಗಳಿಗೆ ಹಾಗೂ ಮಾನ್ಯ ಪ್ರಧಾನ ಮಂತ್ರಿಗಳಿಗೆ, ಮನವಿಯನ್ನು ಸಲ್ಲಿಸಿ ಈ ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ನಾವು ಇಡೀ ನಮ್ಮ ಶಾಸನಸಭೆ ಸದಸ್ಯರ ನಿಯೋಗ ದೆಹಲಿಗೆ ಹೋಗಿ ಸಂಪೂರ್ಣವಾಗಿ ಒತ್ತಾಯವನ್ನು ತರಬೇಕಾಗುತ್ತದೆ. ಆ ದಿಕ್ಕಿನಲ್ಲೂ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಜನಸಾಮಾನ್ಯರು ಮಾತನಾಡಿಕೊಳ್ಳುವುದೇನೆಂದರೆ ನೀವು ಗಂಭೀರವಾದಂತಹ ವಿಚಾರವನ್ನು ವಿಧಾನಸಭೆಯಲ್ಲಿ ಚರ್ಚೆ ಮಾಡಲಿಲ್ಲ. ಏಕೆ ನೀವು ಹಗುರವಾಗಿ ತೆಗೆದುಕೊಳ್ಳುತ್ತಿದ್ದೀರಾ? ನಿಮಗೆ ಅಧಿಕಾರವೇ ಮುಖ್ಯ ಎನ್ನುವಂತಹ ಭಾವನೆಯಲ್ಲಿ ರಸ್ತೆ ರಸ್ತೆಗಳಲ್ಲಿ ಮಾತನಾಡುತ್ತಿರುವುದರ ಬಗ್ಗೆ ನೋಡಿದಾಗ ಎಲ್ಲೋ ಒಂದು ಕಡೆ ನಾವು ಸ್ಪಷ್ಟ ನಿಲುವನ್ನು ತಳೆದು ದಿಟ್ಟ ಹೆಜ್ಜೆಯನ್ನು ಇಡುವಂಥದ್ದು ತೀರಾ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ನಾವು ಕೇಂದ್ರಕ್ಕೆ ಮತ್ತು ರಾಷ್ಟ್ರಪತಿಯವರಿಗೆ ಮನವರಿಕೆ ಮಾಡಬೇಕು. ನಾವು ಸಹ ನಾಗರೀಕರು,

ನೀರು ಬಳಕೆದಾರರ ಸಂಘ, ಎಲ್ಲಾ ಸೇರಿ ಕಾವೇರಿ ಪ್ರತಿಪಾದನಾ ಸಮಿತಿ ಎಂದು ಹೇಳಿ ಒಂದು ಕೋಟಿ ಸಹಿ ಸಂಗ್ರಹ ಚಳುವಳಿಯನ್ನು ಮಾಡುತ್ತಾ ರಾಷ್ಟ್ರಪತಿಯವರಿಗೆ ರವಾನಿಸುವಂತಹ ಕಾರ್ಯದಲ್ಲೂ ಕೂಡ ಮಗ್ನರಾಗಿದ್ದೇವೆ. ಇಂತಹ ರಾಷ್ಟ್ರಗಳಲ್ಲಿ ಇವತ್ತು ರಾಷ್ಟ್ರೀಯ ಜಲನೀತಿ ತರಲೇಬೇಕಾಗುತ್ತದೆ, ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಅಲ್ಲಿಯವರೆಗೂ ಕಾವೇರಿ ನ್ಯಾಯ ಮಂಡಳಿಯ ತೀರ್ಪನ್ನು ಅನುಷ್ಠಾನ ಮಾಡಬಾರದು ಎಂದು ರಾಜಕೀಯ ಒತ್ತಡವನ್ನು ತಂದು ಇದನ್ನು ನಿಲ್ಲಿಸಬೇಕಾಗುತ್ತದೆ. ಈ ನಿರ್ಣಯದಲ್ಲಿ ಸಂಪೂರ್ಣವಾಗಿ ಈಗಾಗಲೇ ಕೊಟ್ಟಿರುವಂತಹ ತೀರ್ಪನ್ನು ತಿರಸ್ಕಾರ ಮಾಡುವುದರ ಮುಖೇನ ಇವತ್ತು ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಂಬಂಧಪಟ್ಟವರು ಮಧ್ಯಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು, ರಾಜ್ಯಕ್ಕೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ನಾವು ಸ್ಪಷ್ಟ ನಿಲುವನ್ನು ತಾಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು resolution ಅನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ಇದರಲ್ಲಿ ಏನಾದರೂ ಕೆಲವು ಬದಲಾವಣೆಗಳು ಇದ್ದರೆ ಅಥವಾ ಹೊಸ ವಿಷಯ ಗಳನ್ನು ಪ್ರಸ್ತಾಪ ಮಾಡಬೇಕಾಗಿದ್ದರೆ ಸರ್ಕಾರ ಮತ್ತು ವಿರೋಧ ಪಕ್ಷದ ನಾಯಕರುಗಳು ಸಲಹೆ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಇನ್ನು ಹೊಸ resolution ಅನ್ನು ಯಾವರೀತಿಯಾಗಿ ತರಬೇಕು ಎನ್ನುವುದರ ಬಗ್ಗೆ ಇನ್ನು ಒಪ್ಪಂದಕ್ಕೆ ಬಂದಿಲ್ಲ ಎನ್ನುವುದು ಕಾಣುತ್ತದೆ ಅಥವಾ ಈಗ ತಯಾರು ಮಾಡುತ್ತಿರಬೇಕು ಎಂದು ನನಗೆ ಅನಿಸುತ್ತಿದೆ. ಏಕೆಂದರೆ ಇಲ್ಲಿ ನಾವು ಈ ಸದನದಲ್ಲಿ ಏನು ಒಪ್ಪುತ್ತೇವೆ, ಅದೇ resolution ಅನ್ನು ಮೇಲ್ಮನೆಯಲ್ಲಿ ಕೂಡ ಒಪ್ಪಬೇಕು. ಎರಡು ಮನೆಯಲ್ಲಿ ಒಂದೇ resolution ಇದ್ದರೆ ಒಳ್ಳೆಯದಾಗುತ್ತದೆ. ಅದಕ್ಕೆ ಇಲ್ಲಿ ತಯಾರು ಮಾಡಿದಂತಹ resolution copy ಯನ್ನು ಮೇಲ್ಮನೆಯಲ್ಲಿ ಕಳುಹಿಸಿಕೊಡುವಂಥದ್ದು ಹಾಗೂ ಅಲ್ಲೂ ಕೂಡ ಒಪ್ಪಿಗೆ ಪಡೆಯುವಂಥದ್ದು ಆದಾಗ ಎರಡೂ ಸದನದಲ್ಲಿ ಒಮ್ಮತದ ಅಭಿಪ್ರಾಯ ಮತ್ತು resolution ಅನ್ನು ನಾವು ಸ್ವೀಕಾರ ಮಾಡಿದ ಹಾಗೆ ಆಗುತ್ತದೆ. ಅದಕ್ಕೆ ಇದು ಬಹಳ

ಮಹತ್ವವಾದುದು. ಇದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ ನಾವು ಹೆಜ್ಜೆಯನ್ನು ಇಡಬೇಕಾದಂತಹ ವಿಚಾರ ಇದೆ. ಇದರಲ್ಲಿ ಒಬ್ಬರ ಮೇಲೆ ಒಬ್ಬರು ಹೇಳಿಕೊಂಡು, ಯಾರದು ತಪ್ಪಾಯಿತು, ಏನು ತಪ್ಪಾಯಿತು, ಎಲ್ಲಿ ಆಯಿತು, ಎಂದು ಹಿಯಾಳಿಸುವುದರಲ್ಲಿ ಏನೂ ಪ್ರಯೋಜನವಿಲ್ಲ. ಈಗಾಗಲೇ ಅಂತಿಮ ತೀರ್ಪು ಬಂದಿದೆ. ಈ ತೀರ್ಪನ್ನು implement ಮಾಡಬೇಕು ಎಂದು ತಮಿಳುನಾಡಿನವರು ಸಹಜವಾಗಿ ಹಠ ಹಿಡಿಯಬಹುದು. ನಾವು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ, ಕರುಣಾನಿಧಿ ಮತ್ತು ಮಿಸ್ ಜಯಲಲಿತಾರವರು ಜಗಳವಾಡುತ್ತಿದ್ದಾರೆ. ಅದು ಮೇಲ್ನೋಟಕ್ಕೆ ಜಗಳವೆಂದು ನನಗೆ ಅನಿಸುತ್ತದೆ. ಏಕೆಂದರೆ ನಮ್ಮಲ್ಲಿ ಒಂದು ಗಾದೆ ಇದೆ. ಉಪ್ಪಿನವ ಅತ್ತನು ಎಂದು ತೆಂಗಿನವ ಅತ್ತನಂತೆ. ಹಾಗೆ ನಮಗೆ ಅನ್ಯಾಯವಾಗಿದೆ ಎಂದು ನಾವು ಅಳುತ್ತಿದ್ದೇವೆ. ಆದರೆ ಅಲ್ಲಿ ಅವರಿಗೆ ನ್ಯಾಯ ಸಿಕ್ಕು ಅವರಿಗೆ ನೀರು ಎಷ್ಟು ಬೇಕು ಎಷ್ಟು ಕೇಳುತ್ತಿದ್ದರು ಅದೇ ರೀತಿ ಅವರಿಗೆ ಸಮಾಧಾನ ಆಗುವಂತಹ ರೀತಿಯಲ್ಲಿ ತೀರ್ಪು ಸಿಕ್ಕಿದರೂ ಕೂಡ ಇನ್ನು ಅವರು ಅಲ್ಲಿ ವ್ಯಾಜ್ಯ ಇಟ್ಟುಕೊಂಡು, ಇದು ಸರಿಯಿಲ್ಲ ನಾವು ಮುಂದೆ Courtಗೆ ಹೋಗುತ್ತೇವೆ ಎನ್ನುವ ಮಾತನ್ನು ಅವರು ಕೂಡ ಹೇಳುತ್ತಿದ್ದಾರೆ. ಅದಕ್ಕೆ ನಾವು ಬಹಳ ಹುಷಾರಾಗಿ ಈ ಕೆಲಸವನ್ನು ಕೊನೆಪಕ್ಷ ಈಗಲಾದರೂ ಮಾಡಿಕೊಳ್ಳಬೇಕು. ನಮ್ಮ ದುರ್ದೈವ ಏನೆಂದರೆ ಈಗ ಅನೇಕ ನಾಯಕರು ಮಾತನಾಡಿದರು. ಹಿಂದೆ ಕೂಡ ಎಲ್ಲರೂ Tribunal Awardನಲ್ಲಿ ಬಂದಂತಹ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಒಂದು ವಿಚಾರ ಏನು ಗಣನೆಗೆ ತೆಗೆದುಕೊಂಡಿಲ್ಲವೆಂದರೆ ಬೆಂಗಳೂರು ಕುಡಿಯುವ ನೀರಿನ ಬಗ್ಗೆ ಅವರು ಲೆಕ್ಕವೇ ಮಾಡಿಲ್ಲ. ನಾವು ಕೇಳಿದ್ದು, ಸುಮಾರು 30 TMC ನೀರು Bangalore Water Supply and Sewerage Boardಗೆ ಬೇಕು. ಕನಿಷ್ಠ 1990ರ census ಪ್ರಕಾರ 30 TMC ನೀರನ್ನು ಆದರೂ ಕೊಡಿ ಎಂದರೆ, ಅವರು ಕೊಟ್ಟಿದ್ದು 2.5 TMC ಅಷ್ಟು ನೀರನ್ನು ಇದರಲ್ಲಿ allocation ಮಾಡಿದ್ದಾರೆ. ಅಂದರೆ ಇಲ್ಲಿಯೇ ನಮಗೆ ಸುಮಾರು ಹೆಚ್ಚು ಕಡಿಮೆ 27.5 TMC ನೀರಿನ ಕೊರತೆ ಆಗುತ್ತದೆ. ಅದರಲ್ಲಿ ಅವರು ಇನ್ನು ಒಂದು ಏನು ಹೇಳುತ್ತಿದ್ದಾರೆ ಎಂದರೆ, only 1/3 of this is considered on the ground that 2/3 of Bangalore is outside the Cauvery Basin. ನನಗೆ ಅನಿಸಿದಂತೆ ಈ ವಿಧಾನಸೌಧ

ಕಾವೇರಿ ಬೇಸಿನ್‌ನಲ್ಲಿ ಬರುತ್ತದೋ ಇಲ್ಲವೋ ಗೊತ್ತಿಲ್ಲ. ವಿಧಾನಸೌಧದಲ್ಲಿ ಬಿದ್ದಂತಹ ನೀರು ಅಥವಾ ಇಲ್ಲಿ ಬಿದ್ದಂತಹ ಮಳೆ ಇದು ಕಾವೇರಿ ಬೇಸಿನ್‌ಗೆ ಹೋಗುವುದಿಲ್ಲ, ಇದು ಕಾವೇರಿ ಬೇಸಿನ್ ಹೊರಗಡೆ ಎಂದು ಹೇಳುತ್ತಾರೆ. ಎಂದರೆ ವಿಧಾನಸೌಧದ ಈ ಕಡೆ ಇರುವಂತಹ ಜನ ಎಂದರೆ right from International Air Portವರೆಗೆ ಮತ್ತು ಈ ಕಡೆ ಕೋಲಾರದವರೆಗೆ ಇವರೆಲ್ಲರೂ ಕೂಡ outside the purview of Cauvery Basin ಗೆ ಬರುತ್ತಾರೆ. ಎಂದರೆ ಇವರಿಗೆ ನಾವು ಕಾವೇರಿ ನೀರು ಕೊಡುವುದಿಲ್ಲ ಅಥವಾ ಅವರಿಗೆ ನೀರು ಕುಡಿಯುವ ಹಕ್ಕಿಲ್ಲ. ಈಗಾಗಲೇ ನಮ್ಮ ಶಾಸಕರುಗಳಾದ ದಿನೇಶ್ ಗುಂಡೂರಾವ್‌ರವರು ಹಾಗೂ ರಾಜಾಜಿನಗರದ ಶಾಸಕರಾದ ನರೇಂದ್ರಬಾಬು ಅವರು ಹೇಳಿದರು. ಏನೆಂದರೆ ಮನುಷ್ಯನಿಗೆ ಮೂಲಭೂತವಾಗಿ ಬೇಕಾಗಿರುವಂತಹ ಹಾಗೂ ಜೀವಂತವಾಗಿರಬೇಕಾದರೆ, ಅವಶ್ಯಕವಾಗಿರುವಂತಾದ್ದು ಅನ್ನ, ಕುಡಿಯುವ ನೀರು, ಗಾಳಿ, ಬಟ್ಟೆ ಇಂತಹ ಕನಿಷ್ಠ ಸೌಲಭ್ಯಗಳನ್ನಾದರೂ ಕೊಡಲೇಬೇಕು. ಇದು human rights. ಅನೇಕ ಸಾರಿ ಯಾವುದೋ ಒಂದು ರಾಷ್ಟ್ರ ಅತ್ಯಂತ ಬಡತನದಲ್ಲಿದ್ದರೆ ಅದಕ್ಕೆ ಸಹಾಯ ಮಾಡುವುದಕ್ಕೆ ಮುಂದುವರೆದಂತಹ ಬೇರೆ ದೇಶಗಳು ಬರುತ್ತವೆ. Developed Countries ಅತ್ಯಂತ ಕೆಳಮಟ್ಟದಲ್ಲಿ ಇರುವಂತಹ ದೇಶಗಳಿಗೆ ಸಹಾಯ ಮಾಡುತ್ತವೆ. ಆದರೆ ಈ ದೇಶದಲ್ಲಿ ಕುಡಿಯುವ ನೀರಿಗೆ objection ಮಾಡಿದರೆ ನಾವು ಎಲ್ಲಿಗೆ ಹೋಗುವುದು? ಎಲ್ಲಿ ಕೇಳುವುದು? ಯಾವ ದೇಶದಿಂದ ನೀರು ತರಬೇಕು? ಈಗ petrol ಖರೀದಿ ಮಾಡುತ್ತಿರುವ ಹಾಗೆ ಇಲ್ಲೂ ಕೂಡ ನೀರು ಖರೀದಿ ಮಾಡುವಂತಹ ಪರಿಸ್ಥಿತಿ ಬರಬಹುದು. Diesel ಮತ್ತು Petrol ಅನ್ನು ಹೊರದೇಶದಿಂದ ಹೇಗೆ ತರುತ್ತಾರೋ ಹಾಗೆ ಕುಡಿಯುವ ನೀರನ್ನು ಬೆಂಗಳೂರಿಗೆ ಆಗಲಿ ಅಥವಾ ಸುತ್ತಮುತ್ತ ಇರುವಂತಹ ಪಟ್ಟಣಗಳು ಏನಿವೆ ಅವುಗಳಿಗೆ ನೀರನ್ನು purchase ಮಾಡಿ ತರುವಂತಹ ಪರಿಸ್ಥಿತಿ ಬರುತ್ತದೆ. ಅಷ್ಟೊಂದು capacity ಯಾವುದೇ Corporation ಗಾಗಲಿ, Municipality ಗಾಗಲಿ, ಪಂಚಾಯಿತಿಗಾಗಲಿ, ಹಳ್ಳಿಗಳಿಗಾಗಲಿ ಸಾಧ್ಯವೇ? ಇಂತಹ ಕೆಲವು major mistake, lapses ಆ Judgmentನಲ್ಲಿ ಇವೆ. ಅದನ್ನು ಮುಂದೆ appeal ಮಾಡುವಾಗ, original suit ಹಾಕುವಾಗ ಯಾವ ರೀತಿಯಾಗಿ ತೆಗೆದುಕೊಳ್ಳುತ್ತಾರೋ ಅದನ್ನು ನೋಡೋಣ. ಆದರೆ ನಾನು ಏಕೆ ಈ

ಮಾತುಗಳನ್ನು ಸದನದ ಮುಂದೆ ತರುತ್ತಿದ್ದೇನೆಂದರೆ, ಇದು ಎಲ್ಲರಿಗೂ ಗೊತ್ತಿದೆ. ಆದರೂ ಕೂಡ ಈ ಜಡ್ಜ್‌ಮೆಂಟ್ ಅನ್ನು ಕೊಡುವಾಗ, ಸದ್ಯದ ಪರಿಸ್ಥಿತಿ ಬೆಂಗಳೂರಿನಲ್ಲಿ ಏನಿದೆ. ಅದನ್ನು ತಿಳಿದುಕೊಂಡಾದರೂ, ಟ್ರಿಬ್ಯುನಲ್ ಈ ಕಡೆ ಲಕ್ಷ್ಯವನ್ನು ಕೊಡಬಹುದಾಗಿತ್ತು, ಏಕೆಂದರೆ 1991ರ ಜನಸಂಖ್ಯೆಯನ್ನು ನೀವು ಗಣನೆಗೆ ಇಟ್ಟುಕೊಂಡು ಇವತ್ತು 2007ರಲ್ಲಿ ಎಷ್ಟು ಜನಸಂಖ್ಯೆ ಇದೆ, ಅಥವಾ ಅವಶ್ಯಕತೆ ಇದೆ, ಇಂಡಸ್ಟ್ರಿಯಲ್ ಬೇಡಿಕೆ ಏನು ಇದೆ, ಅಥವಾ ಈ ಬೆಂಗಳೂರು ನಗರಕ್ಕೆ ಏನು ಅವಶ್ಯಕತೆ ಇದೆ, ಇವೆಲ್ಲವನ್ನು ಗಣನೆಗೆ ತೆಗೆದುಕೊಂಡು ಮಾಡುವಂತಹ ಅವಶ್ಯಕತೆ ಇತ್ತೆ ಹೊರತಾಗಿ, ಇದು ಹಿಂದಿನ interim award 1991ರಲ್ಲಿ ಬಂದಿದೆಯೆಂದು ತಿಳಿದುಕೊಂಡು, ಅದನ್ನೇ base ಆಗಿ ಇಟ್ಟುಕೊಂಡು ಇವತ್ತು ಜಡ್ಜ್‌ಮೆಂಟ್ ಕೊಟ್ಟರೆ, ಇವತ್ತು naturally urban population ದಿನೇ ದಿನೇ ಹೆಚ್ಚು ಆಗುತ್ತಿದೆ. ಇದು ಅಲ್ಲದೇ, ಇದು ಸಾಕಾಗುವುದಿಲ್ಲವೆಂದು ಹೇಳಿ, ಮಾನ್ಯ ಎಂ.ಪಿ.ಪ್ರಕಾಶ್‌ರವರು, ಮಾನ್ಯ ಚಲುವರಾಯಸ್ವಾಮಿಯವರು ಎಲ್ಲಾ ಸೇರಿ ಏನು ಮಾಡುತ್ತಿದ್ದಾರೆಂದರೆ, ರಾಮನಗರವನ್ನು ಒಂದು ಜಿಲ್ಲೆಯನ್ನಾಗಿ ಮಾಡಬೇಕೆಂದು ಹೊರಟಿದ್ದಾರೆ. ಅಲ್ಲಿ ಜನಸಂಖ್ಯೆ ಇನ್ನು ಬೆಳೆದು, ಸುತ್ತ ಮುತ್ತ ಇರುವ ಹಳ್ಳಿಗಳ ಜನರು ಅಲ್ಲೇ ಒಂದು ಕಡೆ ಸೇರುತ್ತಾರೆ. ಈಗ ಇದಕ್ಕೆ ಸುಮಾರು 10,12 TMC ನೀರು ಕುಡಿಯುವ ನೀರಿಗೆ ಹೋಗುತ್ತಾ ಇದೆ. ನಾವು 30 TMC ನೀರು ಕೇಳಿದ್ದು. ಈಗ ರಾಮನಗರಕ್ಕೆ ನೀರು ತರಬೇಕೆಂದರೆ ಬರುಬರುತ್ತಾ pipe line ಹಾಕಿರುವಂಥಾದ್ದನ್ನು ಹೆಚ್ಚು ಕಡಿಮೆ ಅದನ್ನೇ ಕತ್ತರಿಸಿ ತೆಗೆದುಕೊಳ್ಳಬೇಕಾಗುತ್ತದೆ. ನಮಗೆ ಬೇರೆ ನೀರಂತೂ ಬರುವುದಿಲ್ಲ. ಅದಕ್ಕೆ ಇವೆಲ್ಲವನ್ನು ನೋಡಿದಾಗ ನಾವು ಮುಂದಾಲೋಚನೆ ಇಲ್ಲದೇ ಅನೇಕ ಕೆಲಸಗಳನ್ನು ಘೋಷಣೆ ಮಾಡುತ್ತೇವೆ. ಹೊಸ ಜಿಲ್ಲೆಗಳನ್ನು ಮಾಡುವಂಥಾದ್ದನ್ನು ಮಾಡಿದ್ದೇವೆ. ಚಿಕ್ಕಬಳ್ಳಾಪುರ ಮಾಡಬೇಕೆಂದು ಮನಸ್ಸಿನಲ್ಲಿದೆ. ರಾಮನಗರ ಮಾಡಬೇಕೆಂದು ಮನಸ್ಸಿನಲ್ಲಿ ಇಟ್ಟುಕೊಂಡು Re–organization Committeeಯನ್ನು ಈಗ announce ಮಾಡಿದ್ದಾರೆ. De–Limitation Committee ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇದ್ದಾಗ, ಹೊಸ ಜಿಲ್ಲೆಗಳನ್ನು ಮಾಡಬಾರದು, ಹೊಸ ಹಳ್ಳಿಗಳನ್ನು ನಿರ್ಮಾಣ ಮಾಡಬಾರದು, ಹೊಸ ತಾಲ್ಲೂಕುಗಳನ್ನು ಮಾಡಬಾರದೆಂದು ಇದೆ. ಆದರೆ ಇವರು ಒಂದು ಸಣ್ಣ Notification ಅನ್ನು ಕೊಟ್ಟು 11ನೇ

ತಾರೀಖಿನ ಪತ್ರಿಕೆಯಲ್ಲಿ ಬರುವ ಹಾಗೆ ಮಾಡಿದ್ದಾರೆ. ಈ ರೀತಿಯಾದರೆ ಏನಾಗುತ್ತದೆಂದರೆ, ನಾವು ಈ ವಿಷಯವನ್ನು ಏನಾದರೂ ಕೇಳುವುದಕ್ಕೆ ಹೋದರೆ, ಅದು ನಮಗೆ ಗೊತ್ತಿರಲಿಲ್ಲ, ಸಂಬಂಧವಿರಲಿಲ್ಲ, ಎಂದು ಹೇಳುತ್ತಾರೆ. ಅಂದರೆ ಆಲೋಚನೆಯನ್ನು ಮಾಡದೇ, ಅದರ ಬಗ್ಗೆ ಚಿಂತನೆಯನ್ನು ಮಾಡದೇ, decision ತೆಗೆದುಕೊಳ್ಳುವುದು, announce ಮಾಡುವುದು. ಆನಂತರ practically ಅನುಷ್ಠಾನದಲ್ಲಿ ತರಬೇಕಾದಾಗ, ನಾವು ಇದು ಈ ರೀತಿಯಾಗುತ್ತದೆಂದು ಮೊದಲು ಆಲೋಚನೆ ಮಾಡಿರಲಿಲ್ಲವೆಂದು ಹೇಳುವುದು. ಇಂತಹ ಕೆಲಸಗಳನ್ನು ಮಾಡಿಕೊಂಡು ಎಷ್ಟು ತಪ್ಪುಗಳನ್ನು ಮಾಡುತ್ತಾರೋ, ಜನರು ಇವರನ್ನು ಎಷ್ಟು ಕ್ಷಮಿಸುತ್ತಾರೋ, ಅದು ನನಗೆ ಗೊತ್ತಿಲ್ಲ. ನಾಳೆ ದಿವಸ ನೀರಿನದ್ದು ಕೂಡ ಇದೇ ರೀತಿಯಾಗಿ ಆಗುತ್ತಿದೆ. ಅವರು ತಮ್ಮ ಸ್ಪಷ್ಟವಾದ ನಿಲುವನ್ನು awardನಲ್ಲೆ ಹೇಳಿದ್ದಾರೆ. ಆ awardನಲ್ಲಿ ಏನು ಹೇಳಿದ್ದಾರೆಂದರೆ, 'Only 1/3 of this is considered on the ground that 2/3 of Bangalore is outside the Cauvery basin.' ಅಂದರೆ 2/3 city ಗೆ ಕಾವೇರಿ ನೀರನ್ನು ನೀವು ಕೊಡುವ ಹಾಗೆ ಇಲ್ಲ. ನೀವು ಬೋರ್‌ವೆಲ್‌ನ ನೀರನ್ನು ಕುಡಿಯಿರಿ, ಟ್ಯಾಂಕ್‌ಗಳ ನೀರನ್ನು ಕುಡಿಯಿರಿ, ಅಥವಾ ಮಳೆನೀರನ್ನು ಸಂಗ್ರಹಿಸಿ, ನೀವು ಅದರಿಂದ ಏನಾದರೂ ಮಾಡಿಕೊಳ್ಳಿ, ಇದಕ್ಕೆ ಸಂಬಂಧವಿಲ್ಲವೆನ್ನುವ ಮಾತನ್ನು ಅವರು ಹೇಳಿರಬೇಕಾದರೆ, ಮುಂದಿನ ಪರಿಸ್ಥಿತಿಯನ್ನು ನಾವು ಊಹಿಸಬಹುದು. ನಾಳೆ ಈ ಸಿಟಿ ಬೆಳೆದಂತೆ, ನಾವು ಇದನ್ನು Special Economic Zone ಮಾಡುತ್ತೇವೆ. International Airport ಮಾಡುತ್ತೇವೆ, ಬೇರೆ ಬೇರೆ investors ಅನ್ನು ಇಲ್ಲಿಗೆ ತರುತ್ತೇವೆ, ಅವರನ್ನು attract ಮಾಡುತ್ತೇವೆ, ಮತ್ತೆ ಬೆಂಗಳೂರು ನಗರ ವಿಶೇಷವಾದಂಥ Electronic City ಆಗಿ ಪರಿವರ್ತನೆಯಾಗುವಂಥಾದ್ದು, ಇವೆಲ್ಲವೂ ಇದ್ದಾಗ, ನಿಜವಾಗಿಯೂ ಈ ತೀರ್ಪಿನಿಂದ ಒಂದು ದೊಡ್ಡ ಅನ್ಯಾಯ ನಮಗೆ ಆಗಿದೆ. ಇದರ ಜೊತೆಗೆ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ನಮಗೆ ನೀರು 30 TMC expectation ಇದ್ದರೂ ಕೂಡ, ಅವರು ಕೊಟ್ಟಿದ್ದು ಕೇವಲ 1.75 TMC ನೀರನ್ನು ಬೆಂಗಳೂರಿಗೆ ಕೊಟ್ಟಿರುವಂಥಾದ್ದು. ಅಂದರೆ 0.5 TMC ಹೆಚ್ಚು ಕಡಿಮೆ ಇದನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ. ಇದನ್ನು ಒಟ್ಟಾರೆ ಹಾಕಿದರೆ, ಎಷ್ಟು

ವಿಸ್ತೀರ್ಣದಲ್ಲಿ ಎಷ್ಟು ನೀರನ್ನು ನಾವು ಸಂಗ್ರಹಣೆ ಮಾಡಬಹುದು, ಅಥವಾ ನಮಗೆ ಬರುತ್ತದೆಂಬುದಕ್ಕೆ ಮಾನ್ಯ ದಿನೇಶ್ ಗುಂಡೂರಾವ್‌ರವರು figures ಕೊಟ್ಟರು. ಮಾನ್ಯ ಸಿದ್ದರಾಮಯ್ಯನವರು ಕೂಡ ಹೇಳಿದ್ದಾರೆ. ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಕೂಡ ಹೇಳಿದ್ದಾರೆ. ಇದರಲ್ಲಿ, 'Though the yield contribution of Karnataka to the system is 392 TMC or 53% assessed yield of 740 TMC.' ಅಂದರೆ 740 TMC ನೀರಿನಲ್ಲಿ 392 TMC ನೀರು ಕರ್ನಾಟಕ ರಾಜ್ಯದಿಂದ ಹೋಗುತ್ತದೆನ್ನುವ ಮಾತನ್ನು ಅವರೇ ಒಪ್ಪಿಕೊಂಡಿದ್ದಾರೆ. ಆದರೆ ನಮಗೆ ಸಿಕ್ಕ ನೀರು ಎಷ್ಟೆಂದರೆ, 270 TMC, ಅಂದರೆ ಕೇವಲ 36% ಆಗುತ್ತದೆ, ನಮ್ಮ contribution 53% ಇದ್ದರೂ ಕೂಡ, ನಮಗೆ ಈಗ allocation ಆಗಿದ್ದು ಕೇವಲ 36% ಮಾತ್ರ ಆಗಿದೆ. ಅಂದರೆ ಇದರಿಂದ ಮೇಲ್ನೋಟಕ್ಕೆ ಅನ್ಯಾಯವೆಂದು figuresನಲ್ಲಿ ಗೊತ್ತಿದ್ದರೂ, ಕೂಡ ಯಾವ ಕಾರಣಕ್ಕಾಗಿ ಇಂಥ judgment ಬಂದಿದೆಯೆಂಬುದು ನಮಗೆ ಅರ್ಥವಾಗುತ್ತಿಲ್ಲ. ಇನ್ನೊಂದು ವಿಚಾರವೇನೆಂದರೆ ತಮಿಳುನಾಡಿನವರ contribution '30% to the yield or 220 TMC, gets a share of 433 TMC or 58%.' ಅಂದರೆ ಅವರು contribute ಮಾಡುವಂಥಾದ್ದು 740 TMC ಗೆ ಕೇವಲ 222 TMCಗೆ ಮಾತ್ರ ಅವರು contribute ಮಾಡುತ್ತಾರೆ. ಆದರೆ ಅವರು ತೆಗೆದುಕೊಳ್ಳುವಂಥಾದ್ದು ಎಷ್ಟೆಂದರೆ, 433 TMC ನೀರನ್ನು ತೆಗೆದು ಕೊಳ್ಳುತ್ತಾರೆ. ಅಂದರೆ ಹೆಚ್ಚು ಕಡಿಮೆ 58% ಆಗುತ್ತದೆ, ನಮಗೆ 36% ಇದೆ. ಈ ರೀತಿಯಾಗಿ ಇವತ್ತು ಮೇಲ್ನೋಟಕ್ಕೆ ಇದೆಲ್ಲವನ್ನು ನೋಡಿದಾಗ ಎಲ್ಲೋ ಒಂದು ಕಡೆ ತಪ್ಪಾಗಿದೆ. ಇದನ್ನು ಸರಿಪಡಿಸುವಂಥಾದ್ದು ಹೇಗೆ? ಒಂದು suggestion ಅನ್ನು ಎಲ್ಲರೂ ಹೇಳಿದ್ದಾರೆ. ನಾನು ಕೂಡ ಒಂದು ಸಲಹೆಯನ್ನು ಕೊಡುವುದೇನೆಂದರೆ, ಎಲ್ಲಿಯವರೆಗೆ National Water Policy ಆಗುವುದಿಲ್ಲವೋ, ಅಲ್ಲಿಯವರೆಗೂ ಇಂತಹ ಸಮಸ್ಯೆಗಳು ಬಗೆ ಹರಿಯುವುದಿಲ್ಲ. ಇದು ನಮ್ಮದೊಂದೇ ಪ್ರಶ್ನೆಯಲ್ಲ. ಇವತ್ತು ಪಂಜಾಬ್ – ಹರಿಯಾಣದ ಪ್ರಶ್ನೆ ಇರಬಹುದು, ಮಧ್ಯಪ್ರದೇಶ – ಮಹಾರಾಷ್ಟ್ರದ ಪ್ರಶ್ನೆ ಇರಬಹುದು ಅಥವಾ ಬಿಹಾರ–ಉತ್ತರಪ್ರದೇಶದ ಪ್ರಶ್ನೆ ಇರಬಹುದು, ಉತ್ತರಪ್ರದೇಶ–ದೆಹಲಿಯ ಪ್ರಶ್ನೆ ಇರಬಹುದು, ಮಹಾರಾಷ್ಟ್ರ–ಕರ್ನಾಟಕದ್ದು

ಇದೆ, ಕರ್ನಾಟಕ-ಆಂಧ್ರಪ್ರದೇಶದ್ದು ಇದೆ, ತಮಿಳುನಾಡಿನದ್ದು ಇದೆ. ಈ ರೀತಿ inter–state water dispute ಎಲ್ಲಾ ಕಡೆಗಳಲ್ಲೂ ಇದೆ. ಅದಕ್ಕಾಗಿ ನಾವು ಒಂದು ಜಲ ನೀತಿಯನ್ನು ಮಾಡುವಂಥಾದ್ದು ಬಹಳ ಪ್ರಮುಖವಾಗಿದೆ. ಇದಕ್ಕೆ ಒತ್ತಡ ತರುವಂತಹ ಕೆಲಸವನ್ನು ಎಲ್ಲಾ ರಾಜ್ಯಗಳು ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಅಸೆಂಬ್ಲಿಯೊಂದೇ ಅಲ್ಲ. ನಾವು ಕೇಳಿಕೊಳ್ಳಬಹುದು, ಈ ಸಂದರ್ಭದಲ್ಲಿ ನಮಗೆ ಅನ್ಯಾಯವಾಗಿದೆಯೆಂದು ಈ ಮಾತನ್ನು ಹೇಳುತ್ತಿದ್ದೇವೆ. ಆದರೆ ನಿಜವಾಗಿಯೂ ನ್ಯಾಯ ಸಿಗಬೇಕಾದರೆ, ನಾವು ಕೂಲಂಕಷವಾಗಿ ಇದಕ್ಕೆ ಒಂದು basic structures ಏನು ಇವೆ, ಅಥವಾ ಯಾವ ನೀತಿ ಮೇಲೆ ನಾವು ನಿರ್ಣಯವನ್ನು ತೆಗೆದುಕೊಳ್ಳಬಹುದು, ಯಾವ ನೀತಿಯ ಮೇಲೆ ನಾವು ನೀರನ್ನು ಹಂಚಬಹುದು, ಎಂದು ಯೋಚನೆ ಮಾಡಿದಾಗ, ಯಾವುದಾದರೂ ಒಂದು ನೀತಿಯನ್ನು ನಾವು ಮಾಡಲೇ ಬೇಕು. ಅದಕ್ಕೆ Nation Water Policy ಇಡೀ ದೇಶಕ್ಕೆ ಒಂದೇ ಇದ್ದರೆ, ಖಂಡಿತವಾಗಿ ನ್ಯಾಯ ಸಿಗುತ್ತದೆ. ನೀರು ಹೆಚ್ಚಿಗೆ ಇದ್ದರೂ ಕೂಡ, ಇಷ್ಟು percentage ನಾವು ನೀರು ಇಲ್ಲದೇ ಇರುವವರಿಗೆ ಕೊಡುತ್ತೇವೆ, ಅಥವಾ ಯಾವ area ದಲ್ಲಿ, ಯಾವ stateನಲ್ಲಿ, ಹೆಚ್ಚಿನ ಬರಗಾಲದ ಪ್ರದೇಶವಿದೆ ಅಥವಾ ಹೆಚ್ಚಿನ ನೀರಾವರಿ ಇಲ್ಲ, ಅಂಥಾದ್ದಕ್ಕೆ ಈ percentage ಅನ್ನು fix ಮಾಡಿದ್ದೇವೆ, ಅಥವಾ ಮಳೆ ಬೀಳುವಂಥಾದ್ದು ಯಾವ ರಾಜ್ಯದಲ್ಲಿ ಹೆಚ್ಚಾಗಿದೆ, ಅದರ ಪ್ರಮಾಣವನ್ನು ನೋಡಿದ್ದೇವೆ, ಅಥವಾ catchment area ವನ್ನು ನೋಡಿ ನಾವು ಮಾಡಿದ್ದೇವೆ. ಈ ರೀತಿಯಾಗಿ ಏನಾದರೂ ಒಂದು criteria ಬೇಕಲ್ಲಾ. ಈ criteria ಇಲ್ಲದೇ, ಇವತ್ತು ಅವರು ಅನೇಕ ಸಾರಿ ಸುಮ್ಮನೆ ಬಂದರು, ಹೋದರು, ಅವರು ಒತ್ತಡಕ್ಕೆ ಮಣಿದಿದ್ದಾರೆಂಬುದನ್ನು ನಾವು ಹೇಳುವುದಿಲ್ಲ. ನಾವು ಮಾತನಾಡಿಕೊಂಡಿದ್ದೇವೆ, Tribunal Members ಮೇಲೆ, ಅಥವಾ Supreme Court Judges ಮೇಲೆ ನಾವು ಅನಾವಶ್ಯಕವಾಗಿ allegation ಮಾಡಬಾರದೆಂದು ನಾವೇ ನಿರ್ಬಂಧವನ್ನು ಹಾಕಿಕೊಂಡಿದ್ದೇವೆ. ಅದಕ್ಕೆ ನಾನು ಹಾಗೆ ಹೇಳುವುದಿಲ್ಲ, ಆದರೆ ಇಲ್ಲಿ ಮೇಲ್ನೋಟಕ್ಕೆ ಕಾಣುವಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕೇಂದ್ರ ಸರ್ಕಾರ ಕೂಡ ಒಂದು ಜಲನೀತಿಯನ್ನು ಮಾಡಲೇ ಬೇಕಾದ್ದು, ಅದು ಇವತ್ತು ಇಲ್ಲವೆಂದರೆ ನಾಳೆ ದಿವಸ ಮಾಡಬೇಕಾಗುತ್ತದೆ. ಇದು ಒಂದು compulsion. ಇಲ್ಲವೆಂದರೆ

ರಾಜ್ಯ ರಾಜ್ಯಗಳ ಮಧ್ಯೆ ಒಡಕುಗಳು, ಜಗಳಗಳು ಆಗುತ್ತವೆ. ನಾವು ಮೊನ್ನೆ ನೋಡಿದ ಹಾಗೆ, ಕೇವಲ ಒಂದು Head Office ಅನ್ನು shift ಮಾಡುವುದಕ್ಕೆ West Begal v/s Tamil Nadu ಗಳ ನಡುವೆ ಜಗಳ ಆಯಿತು. ಅಂದರೆ offices ಅನ್ನು shift ಮಾಡುವುದಕ್ಕೆ, Head Quarters ಅನ್ನು shift ಮಾಡುವುದಕ್ಕೆ ಇಂತಹ ಹೊಡೆತಗಳು ನಡೆಯುವಂಥಾದ್ದು ಆದರೆ, ಇಲ್ಲಿ ಇದು ಜೀವನ್ಮರಣದ ಪ್ರಶ್ನೆ ಇದೆ. ಮನುಷ್ಯ ಬದುಕುವ ಪ್ರಶ್ನೆ ಇದೆ. ಇಂಥ ಪ್ರಶ್ನೆಗಳು ಬಂದಾಗ naturally ಇವತ್ತಲ್ಲ ನಾಳೆ ಪ್ರತಿಯೊಂದು ರಾಜ್ಯಗಳ ಮಧ್ಯದಲ್ಲಿ ಘರ್ಷಣೆಯಾಗುವ ಸಾಧ್ಯತೆಗಳಿವೆ. ಇದನ್ನು avoid ಮಾಡಬೇಕೆಂದರೆ ಒಂದು ರಾಷ್ಟ್ರೀಯ ಜಲನೀತಿ ಬೇಕು. ಇದಕ್ಕೆ ಎಲ್ಲರೂ ಕೂಡ ಒತ್ತಾಯ ಮಾಡಬೇಕು. ನಾವೂ ಕೂಡ ಒತ್ತಾಯ ಮಾಡುತ್ತೇವೆ. ಬಹುಶ: resolution ನಲ್ಲೂ ಕೂಡ ಆ ಒತ್ತಾಯ ಬರುತ್ತದೆ ಎಂದು ನಾನು ಭಾವಿಸಿದ್ದೇನೆ. ಅದಕ್ಕೆ, ರಾಷ್ಟ್ರೀಯ ಜಲನೀತಿಯ ಜೊತೆಯಲ್ಲಿ ಏನು available facts ಇವೆ ಅದನ್ನು ನೋಡಿ ಮಾಡಿ ಮತ್ತು need based ತೀರ್ಮಾನ ಮಾಡಿ. ಬರಗಾಲ ಯಾವ ಪ್ರದೇಶದಲ್ಲಿ ಹೆಚ್ಚಿಗೆ ಇದೆ ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ತಮಿಳುನಾಡಿನಲ್ಲಿ ಹೆಚ್ಚಿನ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ಹೆಚ್ಚಿನ area ಸಹ ಅವರ ಅಚ್ಚುಕಟ್ಟಿನಲ್ಲಿದೆ, ಅದಲ್ಲದೇ, underground water ಅವರಿಗೆ ಜಾಸ್ತಿ ಇದೆ. ನನಗೆ ನಗು ಬರುತ್ತದೆ. ಮೊನ್ನೆ ನಾನು ಒಂದು ಪ್ರಶ್ನೋತ್ತರ ನೋಡಿದೆ. BPL card ಕೊಡುತ್ತಾರಲ್ಲಾ ಅದರಲ್ಲಿ ಹಾಸನ ಅತ್ಯಂತ ಹೆಚ್ಚಿನ ನೀರಾವರಿ ಪ್ರದೇಶದಲ್ಲಿದೆ ಎಂದು ಇದೆ. ಗುಲ್ಬರ್ಗಾ, ಬಿಜಾಪುರ, ಕೋಲಾರಕ್ಕೆ ಹೋಲಿಸಿದರೆ ಅಲ್ಲಿ BPL cards 80% ಇದೆ. BPL card ಗಳಲ್ಲಿ ಸ್ವಲ್ಪ expect ಮಾಡುವುದೇನೆಂದರೆ, ಯಾವ ಪ್ರದೇಶದಲ್ಲಿ ನೀರಾವರಿ ಇಲ್ಲ, income ಕಡಿಮೆ ಇದೆ, ಆದಾಯ ಇಲ್ಲ, unemployment ಇದೆ ಅದರ ಆಧಾರದ ಮೇಲೆ survey ಮಾಡಿ ಹೆಚ್ಚು ಕಡಿಮೆ BPL cards ಕೊಡುತ್ತೇವೆ. ಆದರೆ, ಹಾಸನದಲ್ಲಿ 80% ಅಂದರೆ ಮಾಧುಸ್ವಾಮಿಯವರು ಹೇಳಿದ ಹಾಗೆ 93% ಆಗಿದೆ. ಅಂದರೆ ನೀರಾವರಿ ಪ್ರದೇಶ ಹೆಚ್ಚಾಗಿರತಕ್ಕಂಥ ಜಾಗದಲ್ಲಿ ಬಡವರು ಹೆಚ್ಚಾಗಿದ್ದಾರೆ, ಗುಲ್ಬರ್ಗಾ, ತುಮಕೂರು, ಕೋಲಾರ, Bangalore(Rural)ನಂಥ district ಗಳಲ್ಲಿ ಕಡಿಮೆ ಇದ್ದಾರೆ. ಇದು ನಮ್ಮ tribunal ನವರು ತೀರ್ಪು ಕೊಟ್ಟ ಹಾಗಿದೆ. ಅಂದರೆ,

ಎಲ್ಲಿ catchment ಜಾಸ್ತಿ ಇದೆ, ಎಲ್ಲಿ ನಮ್ಮ contribution ಜಾಸ್ತಿ ಇದೆ, ನಮಗೆ consumption ಬೇಕು, ಬೆಳೆಯತಕ್ಕಂಥ city, ಇಲ್ಲಿ nearly 30–35% Tamilians ನೀರು ಕುಡಿಯುವುದು, education ತೆಗೆದುಕೊಳ್ಳುವುದು, industry ಗಳು ಇಡೀ ದೇಶದ ಜನರೇ ಇಲ್ಲಿ ಬರುತ್ತಿದ್ದಾರೆ. ನಮ್ಮವರದಂತು ಒಂದೂ industry ಇಲ್ಲ. ಜಮೀನು ನಮ್ಮದು, ನೀರು ನಮ್ಮದು, electricity ನಮ್ಮದು ಎಲ್ಲ ನಮ್ಮದು ಕೊಟ್ಟು ದೇಶ ಎಲ್ಲ ಒಂದೇ ಎಂದು ತಿಳಿದುಕೊಂಡು ನಾವು ಉದಾರ ಭಾವನೆಯಿಂದ ಎಲ್ಲರಿಗೂ ಸಹಾಯ ಮಾಡುತ್ತಿದ್ದೇವೆ. ನಮ್ಮ city ಬೆಳೆಯಬೇಕು, ನಮ್ಮದು domestic production ಹೆಚ್ಚಾಗಬೇಕು ಎಂದು ಹೇಳಿ ನಾವು ಉದಾರವಾಗಿ ಎಲ್ಲರಿಗೂ ಕೊಡುತ್ತಲೇ ಇದ್ದೇವೆ. ಅದಕ್ಕೆ ಇಲ್ಲಿ ನಾವು ಹೆಚ್ಚಿಗೆ ನೀರು contribute ಮಾಡಿದರೂ ಕೂಡ ನಮ್ಮ catchment area ಹೆಚ್ಚಿಗೆ ಇದ್ದರೂ ಕೂಡ ನಮಗೆ 36% allocation ಇದೆ. ಅವರ contribution ಕಡಿಮೆ ಇದ್ದರೂ ಕೂಡ ಅವರಿಗೆ 58% allocation ಇದೆ. ಹಾಗೆ, ನೀರಾವರಿ ಜಾಸ್ತಿ ಇದ್ದರೂ ಕೂಡ BPL card ಗಳು ಜಾಸ್ತಿ. ಇದು ಹೀಗೇ ನಡೆದಿದೆ. 'ಅಂಧೇರಿ ನಗರಿ ಚೌಪಟ್ ರಾಜ', 'ಟಕೇಶರ್ ಬಾಜೀ ಟಕೇಶರ್ ಕಾಯರ' ಎಂದ ಹಾಗೆ ಕುರುಡರ ರಾಜ್ಯದಲ್ಲಿ ಇದು ನಡೆದಿದೆ. ಅದಕ್ಕೆ ದಯವಿಟ್ಟು ಇದನ್ನು set right ಮಾಡಿ. ಇದು ಸರಿಯಾಗಿಲ್ಲ. ಇವತ್ತಲ್ಲ, ನಾಳೆ, ಪ್ರಕಾಶ್‌ರವರು Home Minister ಇದ್ದಾಗ ಏನಾಯಿತೆಂದು ಮುಂದೆ ಬರುವವರು ಕೇಳುವವರಿದ್ದಾರೆ. ಇಂಥ ಒಂದು ಪ್ರಮುಖವಾದಂಥ resolution ನಾವು ತರುವಾಗ ನಾವೆಲ್ಲರೂ ಇಲ್ಲಿದ್ದೇವೆ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳೂ ಇರಬೇಕು. ಏಕೆಂದರೆ, ಇದಕ್ಕೊಂದು ಗಂಭೀರತೆ ಬರಬೇಕಾದರೆ ಎಲ್ಲರೂ ಕೇಳಬೇಕು. ಆದರೆ, ದುರ್ದೈವ ಎಂದರೆ, ಹೊಸದಾಗಿ ಚುನಾಯಿತರಾಗಿ ಬಂದ ಸದಸ್ಯರೂ ಕಡಿಮೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳಂತೂ ಇರುವುದೇ ಇಲ್ಲ. ಇದೇನೋ ನನಗರ್ಥವಾಗುತ್ತಿಲ್ಲ. ಏಕೆ ಹೀಗೆ? ಏನಾದರೂ ಬಹಳ urgent ಕೆಲಸ ಇದ್ದರೆ ಆಯಿತು ಎನ್ನಬಹುದು. Urgent ಕೆಲಸ ಏನಿದೆ? ಇದೇ important ಕೆಲಸವೆಂದೇ Session ಕರೆಸಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಪ್ರಕಾಶ್‌ರವರಿಗೆ GPA ಮಾಡಿ ಕೊಟ್ಟುಬಿಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: General Power of Attorney can be withdrawn at anytime. ತಮಗೆ General Power of Attorney ಕೊಟ್ಟಿದ್ದಾರೆಂದು ನೀವು ಹಾಗೆ ತಿಳಿದುಕೊಂಡಿದ್ದೀರಿ. ನಿಮಗೆ ಗೊತ್ತಿಲ್ಲ. ಯಾವಾಗ, ಯಾವ ಗಂಟೆಯಲ್ಲಿ, ಯಾವ minute ನಲ್ಲಿ, ಯಾವ ಕ್ಷಣದಲ್ಲಿ. . . .

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.: Irrevocable ಕೊಟ್ಟಿದ್ದರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇಲ್ಲ. Irrevocable ಇಲ್ಲವೇ ಇಲ್ಲ. ನಾನು ಎರಡೇ ವರ್ಷ practice ಮಾಡಿದ್ದು. ಗೊತ್ತಿದ್ದದ್ದು ಇಷ್ಟೇ. ಅದಕ್ಕಾಗಿ ಅದನ್ನು ಯಾವಾಗ ಬೇಕೋ ಆಗ ವಾಪಸ್ಸು ತೆಗೆದುಕೊಳ್ಳುತ್ತಾರೆ. ಅದಕ್ಕೆ ನೀವು ಪ್ರತಿ ಸಲ ಅದನ್ನೇ ನಮ್ಮಲ್ಲಿ Power of Attorney ಇದೆ ಎಂದು ತಿಳಿದುಕೊಂಡು ನಮಗೆ cool down ಮಾಡುವುದಕ್ಕೆ ಬರಬೇಡಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು): ನೀವೆಲ್ಲ 8–8 ಸಲ ಗೆದ್ದು ಬಂದಿದ್ದೀರಿ. ತಾವೇ ಬೆಳಗ್ಗೆ ಬಂದವರು ಸಾಯಂಕಾಲದವರೆಗೂ ಕುಳಿತಿರುತ್ತೀರಿ. ಆ ರೀತಿಯಾಗಿ ನಾವು ಕಲಿಯಬೇಕು. ನಿಮ್ಮನ್ನು ನೋಡಿ ನಾವು ಕಲಿತು ಸುಮ್ಮನೆ ಕುಳಿತಿದ್ದೇವೆಯೇ ವಿನ: Power of Attorney ನನಗಿಲ್ಲ. ಏಕೆಂದರೆ, ಕಲಿಯಬೇಕು ಎನ್ನುವ ಆಸಕ್ತಿ ಇರುವುದರಿಂದ ನಾವು ಕುಳಿತು ಕೇಳುತ್ತಿದ್ದೇವೆ. ನಮಗೆ ಬೇಸರವಿಲ್ಲ.

ಶ್ರೀ ಬಿ. ಶಿವರಾಂ: ಹಾಗಾದರೆ, ಬೇರೆಯವರಿಗೆ ಕಲಿಯುವ ಆಸಕ್ತಿ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಬಹಳ ಜನರಿಗೆ ಆಸಕ್ತಿ ಇಲ್ಲವೆಂದು ಹೇಳಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಿಮ್ಮಿಂದಲೇ ಅಲ್ಲಿರುವವರೆಲ್ಲ ಕಲಿಯ ಬೇಕು, ಅಷ್ಟು senior ನೀವು, ಅಷ್ಟು ಹೊತ್ತು ನೀವು ಇಲ್ಲಿ ಕುಳಿತುಕೊಳ್ಳುತ್ತೀರಿ. ಅವರಿಗೂ ಸಹ ಸ್ವಲ್ಪ ನಿಮ್ಮ ಪಾಠ ಹೇಳಿ ಸಾರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇವೆಲ್ಲ serious matter, ಇಡೀ ರಾಜ್ಯಕ್ಕೆ effect ಆಗುವಂಥದ್ದು ಇದೆ. ಇದೇನೋ routine ಇರುತ್ತದೆ, paper

ನಲ್ಲಿ ಬರುತ್ತದೆ, ಓದಿಕೊಳ್ಳೋಣ ಎಂದು ಈ ರೀತಿಯಾಗಿ ಹೋದರೆ ಅವರಿಗೂ ಒಳ್ಳೆಯದಲ್ಲ, ಸದನಕ್ಕೂ ಗೌರವ ಕೊಟ್ಟ ಹಾಗೂ ಆಗುವುದಿಲ್ಲ. ಏಕೆಂದರೆ, ನಾವು special session ಇದಕ್ಕಾಗಿ ಕರೆಸಿದ್ದೇವೆ. ನಾವೆಲ್ಲರೂ ಚರ್ಚೆ ಮಾಡಬೇಕು, ಭಾಗವಹಿಸಬೇಕು, ಒಬ್ಬರಿಗೊಬ್ಬರು ತಿಳಿದುಕೊಳ್ಳಬೇಕು, ಒಮ್ಮತದ ಪ್ರದರ್ಶನ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವು ಮಾಡಿದ್ದೇವೆ. ಅದಕ್ಕೆ ಎಲ್ಲರೂ ಇದ್ದರೆ ಒಳ್ಳೆಯದಾಗುತ್ತದೆ ಎನ್ನತಕ್ಕಂಥದ್ದು ನಮ್ಮ ವಾದವಿದೆ. ಇಲ್ಲ, ನಾನಿರಲಿಲ್ಲವೆಂದರೆ ಏನು, ಹಿಂದೆ ಇರಲಿಲ್ಲವೇನು, ಎಂಬಂತಹ ನಿಮ್ಮ ವಾದಗಳಿವೆಯಲ್ಲ, ಇಂಥ ಎಷ್ಟೋ ಉದಾಹರಣೆಗಳಿವೆ ಅನ್ನುವುದು, ನಿಮಗೆ ರೆಡಿ ಮಾಡಿರುತ್ತಾರೆ, ನೀವು ಓದಿಕೊಂಡು ಆ ಪುಸ್ತಕಗಳನ್ನೇ ತಂದೇ ಬಿಡುತ್ತೀರಿ. ಯಾವುದು precedents, ದೇವರಾಜ ಅರಸರ ಕಾಲದಲ್ಲಿ ಹೀಗಾಯಿತು, ಗುಂಡೂರಾವ್‌ರವರ ಕಾಲದಲ್ಲಿ ಹೀಗಾಯಿತು, ಪಟೇಲರ ಕಾಲದಲ್ಲಿ ಹೀಗಾಯಿತು ಎಂದು ಹೇಳಿ ready made reference ಸಿಕ್ಕುತ್ತದೆ, ತಂದು ನಮ್ಮ ಮುಂದಿಟ್ಟು ಹೇಳಿಬಿಡುತ್ತೀರಿ. ಇನ್ನು ನಾವೇನು ಹೇಳುವುದು? ಆದರೆ, ಅದಕ್ಕೆ compare ಮಾಡಿಕೊಳ್ಳತಕ್ಕಂಥದ್ದು ಆಗಬಾರದು. ನಾವು ಕಲಿಯಬೇಕು. Inevitable ಇದ್ದರೆ ಮಾಡಿ. ಇವತ್ತು ಯಾವುದೋ ಒಂದು ಕೆಲಸವಿದೆ, ಅದಕ್ಕೆ ಅವರು ಬರಲಿಕ್ಕೆ ಸಾಧ್ಯವೇ ಇಲ್ಲವೆಂದರೆ ಆಗಲಿ. ಆದರೆ, special ಆಗಿ ಸದನವನ್ನು ಕರೆಸಿದಾಗ ಇದ್ದು ನೋಡತಕ್ಕಂಥದ್ದು, ಬಹಳ ಮುಖ್ಯ. ಅದಕ್ಕೆ ಕೊನೆಯದಾಗಿ ನಾನು ಇಷ್ಟೇ insist ಮಾಡುವುದು, ನಾವೆಲ್ಲರೂ ಸೇರಿ National Water Policy ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಎಲ್ಲರೂ ಕೂಡ ಇದರ ಬಗ್ಗೆ ಒತ್ತಾಯವನ್ನು ಮಾಡತಕ್ಕಂಥದ್ದು ಅವಶ್ಯಕತೆ ಇದೆ. ಅದಕ್ಕೆ ಸುಮ್ಮನೆ ಒಬ್ಬರಿಗೊಬ್ಬರು ನಾನು ಕೇಂದ್ರ ಸರ್ಕಾರಕ್ಕೆ ಹೇಳಬೇಕು, ಕೇಂದ್ರ ಸರ್ಕಾರದ ಮೇಲೆ ನಾವು ಒತ್ತಾಯ ಮಾಡುತ್ತಿದ್ದೇವೆ ಎಂದು ಒಬ್ಬರು ಹೇಳುವುದು, ಅವರ್ಯಾಕೆ ಮಾಡಿಲ್ಲ ಎಂದು ಇನ್ನೊಬ್ಬರು ಕೇಳುವುದು, ಇದು ಅವರ ಕರ್ತವ್ಯ ಎಂದು ಹೇಳುವುದು, ಇದರಲ್ಲಿ ಯಾವ ಪ್ರಯೋಜನ ಕೂಡ ಆಗುವುದಿಲ್ಲ. ಇನ್ನು Supreme Court ಗಿಂತಲೂ, Prime Minister is not above the Supreme Court. ಆ Tribunal ಗಿಂತಲೂ he is not above the Supreme Court. ಎಲ್ಲ ಕಾನೂನುಗಳು, ನಾವೆಲ್ಲರೂ ಕೂಡ ಸಂವಿಧಾನದ ಚೌಕಟ್ಟಿನಲ್ಲಿ ನಡೆದುಕೊಳ್ಳತಕ್ಕಂಥದ್ದು ಇದೆ. ಏನೋ ವಾಟಾಳ್

ನಾಗರಾಜ್ ಸಾಹೇಬರಿಗೆ ಸ್ವಲ್ಪ ಬಿಟ್ಟಿದ್ದೇವೆ. ಅವರು ಒಂದೊಂದು ಸಾರಿ ತಮ್ಮ ವ್ಯಾಖ್ಯಾನದಲ್ಲಿ ಹೇಳುತ್ತಾರೆ. ಅದು ಅವರಿಗೆ ಬಿಟ್ಟಿದ್ದೇವೆ. ಏಕೆಂದರೆ, ಅವರು ಸ್ವತಂತ್ರವಾಗಿದ್ದಾರೆ. ಆದರೆ, ನಾವೆಲ್ಲ ಸಂವಿಧಾನದಡಿಯಲ್ಲಿದ್ದೇವೆ. ಈ ಒಂದು ಕೆಲಸವನ್ನು ನಾವು ಮಾಡಬೇಕು ಮತ್ತು National Water Policy ಚೌಕಟ್ಟಿನಲ್ಲಿ ಇದರಲ್ಲಿ ನಮಗೆ ನ್ಯಾಯ ಸಿಕ್ಕರೆ ಖಂಡಿತವಾಗಿ ಇದರ ಬಗ್ಗೆ review ಮಾಡತಕ್ಕಂಥದ್ದು ಒಳ್ಳೆಯದು ಅಥವಾ Article 131ರ ಪ್ರಕಾರ Original Suit ಹಾಕಬೇಕೆಂಬುದೇ ಆಗಲಿ ಅಥವಾ Article 132ರ ಪ್ರಕಾರವೇ Special Leave Petition ಹಾಕತಕ್ಕಂಥದ್ದಾಗಲಿ ಆಗಬೇಕು. ನಮ್ಮ ದಿನೇಶ್ ಗುಂಡೂರಾವ್‌ರವರು ಹೇಳಿದರು. ಅನೇಕ ಸಾರಿ capital punishment ಆದರೂ ಕೂಡ ಅವನಿಗೆ ಫಾಸಿ ಶಿಕ್ಷೆಯಾದರೂ ಕೂಡ ಅಂತಿಮವಾಗಿ President of India ಹತ್ತಿರ ಹೋಗಿ mercy petition ಕೇಳಿಕೊಳ್ಳುತ್ತಾರೆ. ಅನೇಕ ಸಾರಿ ಸಾವಿರಾರು ಕೇಸ್‌ಗಳಲ್ಲಿ ಒಂದಾದರೂ ಇದರ ಪ್ರಕಾರ consider ಮಾಡಿ ಎಂದು ಬರುತ್ತದೆ. ಹಾಗೆ ಏನಾದರೂ ಆದರೆ ನಾವೆಲ್ಲರೂ ಕೂಡ ಪ್ರಯತ್ನ ಮಾಡಲೇಬೇಕು. Mercy petition ಎಂದಾದರೂ ಅನ್ನಿ, mercy petition ಎಂದು ಬೇರೆಯವರು ತಿಳಿದುಕೊಂಡರೂ ಕೂಡ ಇದು ನಮ್ಮ ಹಕ್ಕಿನ ಪ್ರಶ್ನೆ, ಅವರು ಕೊಟ್ಟಂಥ judgment ನಲ್ಲಿ ಕೂಡ ಎಷ್ಟೋ lapses ಅವರ ಕಣ್ಣಿಗೆ ಬೀಳದೇ ಅಥವಾ practically ನೋಡದೇ ಬಂದಿದ್ದಾರೇನೋ ಎನ್ನುವ ಹಾಗೆ facts ನೋಡಿದಾಗ ನಮಗೆ ಕಾಣಿಸುತ್ತಿದೆ. ಅದಕ್ಕಾಗಿ, ದಯವಿಟ್ಟು ಇದರ ಬಗ್ಗೆ ಒಂದು ಒಮ್ಮತದ resolution ಅನ್ನು ತಂದು pass ಮಾಡಿ ಅದರ ಬಗ್ಗೆ ನಾವೆಲ್ಲರೂ ಕೂಡ pursue ಮಾಡೋಣವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಉಪಾಧ್ಯಕ್ಷರೆ, ಈ Cauvery final award ಫೆಬ್ರವರಿ 5ನೇ ತಾರೀಖು ಬಂದಿದ್ದು, ಇವತ್ತಿಗೆ 39 ದಿವಸಗಳಾಯಿತು. ಇಡೀ ರಾಜ್ಯದಲ್ಲಿ ಸುಮಾರು 39 ದಿವಸಗಳಿಂದಲೂ ಕೂಡ ಮುಖ್ಯವಾಗಿ ಮಾನ್ಯ ವಾಟಾಳ್ ನಾಗರಾಜ್‌ರವರ ನೇತೃತ್ವದಲ್ಲಿ ಎಲ್ಲ ಸಂಘಟನೆಗಳು strike ಅನ್ನು ಮಾಡುತ್ತಿವೆ. ಆದರೆ, ಸರ್ಕಾರ ಅದರ ಮೇಲೆ ಹೆಚ್ಚಿಗೆ ಆದ್ಯತೆಗಳನ್ನು ಕೊಡಲಿಲ್ಲವೆನ್ನುವ ಭಾವನೆ ಸಾಮಾನ್ಯ ಮನುಷ್ಯನ

ಮನಸ್ಸಿನಲ್ಲಿಯೂ ಮೂಡಿದೆ ಎನ್ನುವುದು ನನ್ನ ಅನಿಸಿಕೆಯಾಗಿದೆ. ಏಕೆಂದರೆ, Award ಬಂದಾಗ "ನಾವೆಲ್ಲರೂ ಸೇರಿ ವಿರೋಧ ಪಕ್ಷಗಳ ಜೊತೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆನ್ನುವ' ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು. ಅದಾದ ಮೇಲೆ ಇನ್ನೊಂದು ಸಲ ಮಾನ್ಯ ಕಾನೂನು ಮಂತ್ರಿಗಳು 'ನಾವು Supreme Court ಗೆ ಹೋಗುತ್ತೇವೆಂದು' ಹೇಳುತ್ತಿದ್ದರು. ಹೀಗೆ ಸ್ವಲ್ಪ ಗೊಂದಲಮಯ statementಗಳು ಬಂದಿದ್ದರಿಂದ, ಇದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಗಳನ್ನು ಕೊಡಲಿಲ್ಲವೇನೋ ಎನ್ನುವ ಅನಿಸಿಕೆ ನಮ್ಮ ರಾಜ್ಯದ ಜನತೆಗೆ ಬಂದಿದೆ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ನನಗೆ 1991ನೇ ಇಸವಿಯ ಸಂಗತಿ ಜ್ಞಾಪಕಕ್ಕೆ ಬರುತ್ತಿದೆ. ಆಗ ದಿವಂಗತ ಪುಟ್ಟಸ್ವಾಮಿಗೌಡರು ನೀರಾವರಿ ಮತ್ತು PWD Minister ಆಗಿದ್ದರು. ದೆಹಲಿಯಿಂದ ನನ್ನ ಯಾರೋ guests ಬಂದಿದ್ದು ಅವರು Ashok Hotel ನಲ್ಲಿ ತಂಗಿದ್ದರು. ಆವತ್ತು ಒಂಭತ್ತೂವರೆಗೆ ನಾನು ಅವರನ್ನು ನೋಡಲಿಕ್ಕೆ ಹೋದೆ. ಅವರನ್ನು ನೋಡಲಿಕ್ಕೆ ಹೋದಾಗ 'ತಮಿಳುನಾಡಿನವರು ಆ Tribunal ನ Members ಗೆ ಕಾಶ್ಮೀರದಿಂದ ಶಾಲುಗಳನ್ನು ಒಂದೊಂದಕ್ಕೆ ಒಂದರಿಂದ ಒಂದೂವರೆ ಲಕ್ಷ ರೂಪಾಯಿಗಳ ಬೆಲೆಯುಳ್ಳ ಶಾಲುಗಳನ್ನು ತಂದು ಹೊದಿಸಿದರೆಂದು ಆವತ್ತಿನ ಪತ್ರಿಕೆಗಳ ಮುಖಪುಟದಲ್ಲಿ ಬಂದಿತ್ತು. ಮಾನ್ಯ ಪುಟ್ಟಸ್ವಾಮಿಗೌಡರು ಇವತ್ತು ನಮ್ಮ ಜೊತೆಯಲ್ಲಿಲ್ಲ. ಮಾನ್ಯ ಪುಟ್ಟಸ್ವಾಮಿಗೌಡರು ಈ flower ಬೊಕ್ಕೆಗಳನ್ನು ಆ Tribunal Members ಗೆ ಕೊಡಲು ಅವರ PA ಹಿಡಿದುಕೊಂಡು ಅವರ ಹಿಂದೆ ಹೋದರು. ನಾನು ಮಾನ್ಯ ಪುಟ್ಟಸ್ವಾಮಿಗೌಡರಿಗೆ, 'ಏನು ಸ್ವಾಮಿ? ಈ ತರಹ ಪತ್ರಿಕೆಗಳಲ್ಲಿ ಬಂದಿದೆ, ನೀವೊಬ್ಬರೇ ಇಲ್ಲಿ ಓಡಾಡುತ್ತಿದ್ದೀರಿ, ತಮಿಳುನಾಡಿನವರು ಈ ರೀತಿ ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಬರುತ್ತಿದೆ, ನೀವು ಕೇವಲ ಈ ಬೊಕ್ಕೆಗಳನ್ನು ಎತ್ತಿಕೊಂಡು ಹೋಗಿ ಆ Tribunal Members ಗೆ ಕೊಡುತ್ತಿದ್ದೀರಿ, ಇದು ಸರಿಯಾಗುತ್ತದೆಯೇ, ಸ್ವಲ್ಪ ಯೋಚನೆ ಮಾಡಿ ಎನ್ನುವ ಮಾತನ್ನು ನಾನು ಅವರಿಗೆ ಹೇಳಿದ್ದೆ. ಇಲ್ಲ, ಇದು Tribunal Membersಗೆ, ಆ ತರಹ ಏನೂ ಆಗುವುದಿಲ್ಲ, ಎಲ್ಲ ಬಹಳ ಒಳ್ಳೆಯದು ಮಾಡುತ್ತಾರೆನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸಿದರು. ಆದರೆ, ಕಡೆಗೆ ಏನಾಯಿತು? ಇಷ್ಟು ವರ್ಷಗಳು ನಡೆದಂಥ Tribunal ನಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಅನ್ಯಾಯವಾಗಬೇಕೋ ಅಷ್ಟು ಅನ್ಯಾಯವಾಗಿಯೇ

ತೀರಿತು. ಈ ತೀರ್ಪು ಹೊರಬಿದ್ದಾಗ ನಮ್ಮ ಹಿರಿಯ ವಕೀಲರು ಇದು fare ಎನ್ನುವ ಉದ್ಗಾರ ಮಾಡಿದರು. ಅದರ ಜೊತೆಗೆ ರಾಜ್ಯದ ವಾರ್ತಾ ಇಲಾಖೆಯ ಅಧಿಕಾರಿಗಳು ಕಾವೇರಿ ತೀರ್ಪು ಕರ್ನಾಟಕ್ಕೆ ವರದಾನವೆಂದು ಹೇಳಿದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ರಾಜ್ಯದ ವಾರ್ತಾ ಇಲಾಖೆಯ ಅಧಿಕಾರಿಗಳು ಯಾವುದನ್ನು ಹೇಳಬೇಕಾಗಿತ್ತೋ ಅದನ್ನು ಬಿಟ್ಟು ಇದು ವರದಾನವೆಂದು ಹೇಳಿದರು. ಆ ಕಡೆ ತಮಿಳುನಾಡಿನವರು ಅವರಿಗೆ ಹೆಚ್ಚಿಗೆ ನೀರು ಬಂದಿದ್ದರೂ ಕೂಡ ಕರುಣಾನಿಧಿ, ಜಯಲಲಿತಾರವರು– ನಮಗೆ ನೀರು ಸಾಕಾಗಲಿಲ್ಲ, ಕರ್ನಾಟಕದಿಂದ ಇನ್ನೂ ಹೆಚ್ಚಿಗೆ ಬರಬೇಕೆಂದು ಅವರುಗಳಿಂದ statement ಗಳು ಬಂದರೆ ನಮ್ಮ ರಾಜ್ಯದ ವಾರ್ತಾ ಇಲಾಖೆಯ ಅಧಿಕಾರಿ ಆ ತೀರ್ಪು ಕರ್ನಾಟಕಕ್ಕೆ ವರದಾನವೆನ್ನುವ ಮಾತನ್ನು ಹೇಳಿದರೆ, ನಮ್ಮ ರಾಜ್ಯದ ಅಧಿಕಾರಿಗಳು ಇದರ ವಿಷಯದಲ್ಲಿ ಯಾವ ತರಹ ಗೊಂದಲಮಯ ಚಿಂತನೆಯನ್ನಿಟ್ಟುಕೊಂಡಿದ್ದರು, ಇವರು ಏಕೆ ಈ ತರಹ ಹೇಳಿದರು, ಎನ್ನುವುದನ್ನು ಕೂಡ ಮಾನ್ಯ ನೀರಾವರಿ ಮಂತ್ರಿಗಳು ಗಮನಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಸ್ವಲ್ಪ ತರಾಟೆಗೆ ತೆಗೆದುಕೊಳ್ಳಬೇಕು. ಏಕೆಂದರೆ ಇವರಿಗೆ ಯಾರು ಹೇಳಿದರು, ಸರ್ಕಾರ ಹೇಳಬೇಕು. ಇದು ವರದಾನ ಎಂದು ಹೇಳಲಿಕ್ಕೆ ವಾರ್ತಾ ಇಲಾಖೆಯವರಿಗೆ ಏನು ಅಧಿಕಾರ? Commission ನ ಆವತ್ತಿನ judgement paper ಗಳು ನಮ್ಮ ಕೈಯಿಗೆ ಸಿಕ್ಕಿಲ್ಲ. ಅಷ್ಟರೊಳಗಾಗಿ ಇವರು ಅದರ ಬಗ್ಗೆ statement ಮಾಡುವಂಥ ಅವಶ್ಯಕತೆ ಏನಿತ್ತು, ಎನ್ನುವುದನ್ನು ನಾನು ಈ ಸಮಯದಲ್ಲಿ ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಜವಾಬ್ದಾರಿಯುತವಾದ ಈ ಸರ್ಕಾರ 'ನಾವು Supreme Court ಗೆ ಹೋಗಿ ದಾವೆ ಹಾಕುತ್ತೇವೆಂದು' ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಬೇರೆ ರೀತಿಯಲ್ಲಿ ಪ್ರಸ್ತಾವವನ್ನು ಮಾಡುತ್ತಾರೆ. ತಮಿಳುನಾಡಿಗೆ ಅಷ್ಟು ನೀರು ಬಿಟ್ಟಿದ್ದರೂ ಕೂಡ ನಮ್ಮ ಕಡೆ ಒಂದು ಗಾದೆ ಇದೆ. ಅದೇನೆಂದರೆ, 'ಸಂತೆಯಲ್ಲಿ ಸಾಮಾನ್ಯವಾಗಿ ಯಾವತ್ತೂ ಮೇಲೆ ಕಟ್ಟಡ ಇರುವುದಿಲ್ಲ. ಅಲ್ಲಿ ಉಪ್ಪು ಮಾರುವವನು ಉಪ್ಪು ಇಟ್ಟಿರುತ್ತಾನೆ, ಈ ಕಡೆ ತೆಂಗಿನ ಕಾಯಿ ಮಾರುವವನು ತೆಂಗಿನ ಕಾಯಿ ಇಟ್ಟಿರುತ್ತಾನೆ. ಮಳೆ ಬಂದರೆ ಉಪ್ಪು ಮಾರುವವನು ಅಳುತ್ತಿದ್ದರೆ ತೆಂಗಿನ ಕಾಯಿಯವನು ಅಳಲಿಕ್ಕೆ ಪ್ರಾರಂಭ ಮಾಡುತ್ತಾನಂತೆ. ಆ ರೀತಿ ತಮಿಳುನಾಡು ರಾಜ್ಯದವರಿಗೆ ಇಷ್ಟೊಂದು ನೀರು ಕೊಟ್ಟಿದ್ದರೂ ಕೂಡ, ಅವರು ಈ ನೀರಿನ ಬಗ್ಗೆ

ಚಕಾರವನ್ನು ಎತ್ತಿದರು. ಇಲ್ಲಿ ಬಹಳ ಜನ ಮಾತನಾಡಿದ ಹಾಗೆ, ಕೇಂದ್ರ ಸರ್ಕಾರದ ಮೇಲೆ ತಮಿಳುನಾಡಿನವರಿಗೆ ಹಿಡಿತ ಇರುವುದರಿಂದ ಇದಕ್ಕೆ ಹೆಚ್ಚಿಗೆ ಆದ್ಯತೆಯನ್ನು ಕೊಡುವ ಕೆಲಸ ಆಗಿದೆ. ಯಾವುದೇ ಸಮ್ಮಿಶ್ರ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ತಮಿಳುನಾಡಿನ ಎರಡೂ ಪಕ್ಷಗಳು ಅದು ಡಿಎಂಕೆ ಇರಬಹುದು ಅಥವಾ ಎಡಿಎಂಕೆ ಇರಬಹುದು, ಇವೆರಡೂ ಪಕ್ಷಗಳು ಅವರದೇ ಆದಂಥ ಹಿಡಿತವನ್ನು ಕೇಂದ್ರ ಸರ್ಕಾರದ ಮೇಲೆ ಸುಮಾರು 9 ವರ್ಷಗಳಿಂದ ಇಟ್ಟುಕೊಂಡು ಸಾಧನೆ ಮಾಡಿರುವುದು ಕೂಡ ಈ tribunal ನಲ್ಲಿ ಈ ರೀತಿ order ಬರಲಿಕ್ಕೆ ಕಾರಣವೆಂದು ನನ್ನ ಅನಿಸಿಕೆಯಾಗಿದೆ. ಇದು ಬಹಳ ಮುಖ್ಯ. ಇದರಲ್ಲಿ ಅಲ್ಲಿ ಆ ಮುಖ್ಯ ಮಂತ್ರಿಗಳು ಇದ್ದಾಗ ಮಾಡಿದರು, ಈ ಮುಖ್ಯಮಂತ್ರಿಗಳು ಇದ್ದಾಗ ಮಾಡಿದರೆಂದು ನಾನು ಹೇಳಲಿಕ್ಕೆ ಇಚ್ಛೆಪಡುವುದಿಲ್ಲ. 1994–95ರಲ್ಲಿ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು. ಆವತ್ತು ನಮ್ಮ JLP meeting ಅನ್ನು ಕರೆದಿದ್ದರು. ಏಕೆಂದರೆ, ನಾನು ಆಗ ಜನತಾ ಪಾರ್ಟಿಯವನಾಗಿದ್ದೆ. ಆ JLP meeting ನಲ್ಲಿ ಮಾನ್ಯ ದೇವೇಗೌಡರು ಆವತ್ತು ನಮ್ಮನ್ನೆಲ್ಲ ಸೇರಿಸಿ ಚರ್ಚೆ ಮಾಡುವಾಗ, ಆ ಕಾವೇರಿ ಕಣಿವೆಯ ಶಾಸಕರೊಬ್ಬರು ಎದ್ದು ಮಾತನಾಡಲಿಕ್ಕೆ ಮುಂದಾದಾಗ ನಾನು ಸಹ ಎದ್ದು ನಿಂತು ಮಾತನಾಡುವುದಕ್ಕೆ ಮುಂದಾದೆ. ಅಷ್ಟರೊಳಗಾಗಿ ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ, ನನಗೆ ಮಾತನಾಡಲು ಹೇಳಿದರು. 'ಇಂಥ ಕ್ಲಿಷ್ಟ ಪರಿಸ್ಥಿತಿ ಇದೆ, ತಮಿಳುನಾಡಿಗೆ ನೀರು ಬಿಡಬೇಕೆಂದು ಮಾನ್ಯ ನರಸಿಂಹರಾಯರು ನಿಮ್ಮ ಮೇಲೆ ಒತ್ತಡ ಹೇರುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ನೀವು ಏನು ತೀರ್ಮಾನ ತೆಗೆದುಕೊಳ್ಳಬೇಕೆನ್ನುವಂಥದ್ದನ್ನು ಕೂಡ ನೀವು ಚಿಂತನೆ ಮಾಡಿದ್ದೀರಿ.' ಎಂದು ಹೇಳಿದೆ. ಅವರು ಆವತ್ತು ಯಾವ ಮಟ್ಟಕ್ಕೆ ಹೇಳಿದರೆಂದರೆ, ನಾಳೆ ಏನಾಗುತ್ತದೆಂದು ನನಗೆ ಗೊತ್ತಿಲ್ಲ. ರಾಜೀನಾಮೆ ಕೊಟ್ಟು ನಾನು ಮನೆಗೆ ಹೋದರೂ ಹೋಗಬಹುದು, ಸರ್ಕಾರವನ್ನು ಬಿಡಬಹುದೆನ್ನುವ ಮಾತನ್ನು ಸಹ ನಮ್ಮ JLP meeting ನಲ್ಲಿ ಹೇಳಿದ್ದರು. ಆವತ್ತು ಮಾನ್ಯ ಹೆಗಡೆಯವರು ನಮ್ಮ ಜೊತೆಯಲ್ಲಿದ್ದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಆ ತರಹದ ಪರಿಸ್ಥಿತಿ ಆವತ್ತು ಅಲ್ಲಿ ನಿರ್ಮಾಣವಾಗಿದ್ದಾಗಲೂ ಕೂಡ ಆವತ್ತು ನಾವೆಲ್ಲರು ಕೂಡ ಒಕ್ಕೊರಲಿನಿಂದ – ನೀವು ತೆಗೆದುಕೊಂಡ ತೀರ್ಮಾನವನ್ನು ನಾವು ಒಪ್ಪುತ್ತೇವೆಂದಾಗ, ಕಡೆಗೆ

ನೀರು ಬಿಡುವುದನ್ನು ಬಿಡುತ್ತಲೇ ಇದ್ದೆವು. ಇದು ನನ್ನ ಪ್ರಕಾರ Supreme Court ನ order ಪ್ರಕಾರ ಈ Commission ಅನ್ನು order ಮಾಡಿದರೋ ಅದರಿಂದ ನಿಜವಾಗಿಯೂ ಬಹಳ ದೊಡ್ಡ ಪೆಟ್ಟು ಬಿದ್ದಿದ್ದು ಕರ್ನಾಟಕಕ್ಕೆ. ಇದನ್ನು ರಾಜಕೀಯ ಇಚ್ಛಾಶಕ್ತಿಯಿಂದಲೇ ತೀರ್ಮಾನ ಮಾಡಿದ್ದರೆ ಇಷ್ಟೊಂದು ನಮ್ಮ ರಾಜ್ಯಕ್ಕೆ ತೊಂದರೆ ಆಗುತ್ತಿರಲಿಲ್ಲವೆನ್ನುವಂಥದ್ದು ನನ್ನ ವೈಯಕ್ತಿಕ ನಂಬಿಕೆಯಾಗಿದೆ. ಇವತ್ತು ಇಂಥ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕು? 192 TMC ನೀರನ್ನು ಬಿಡಬೇಕು ಮತ್ತು ಅದನ್ನು ಬಿಳಿಗೊಂಡ್ಲುವಿನಲ್ಲಿ ಲೆಕ್ಕ ಹಾಕಬೇಕೆಂದು ಹೇಳುವಂಥ ಈ Commission ನ order ಏನಿದೆ, ಇವತ್ತು 64 ಕಿ.ಮೀ. ನಲ್ಲಿ ಬೀಳುವ ಮಳೆ ನೀರು ಸುಮಾರು 25 TMC ಮೆಟ್ಟೂರಿಗೆ ಹೋಗುತ್ತದೆ. ಅದನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ. ನಾವು ಇದನ್ನು ಏಕೆ ಹೇಳುತ್ತಿದ್ದೇವೆಂದರೆ, ಎಲ್ಲೋ ಒಂದು ಕಡೆ ಆ Tribunal Members ಅವರ ಕಡೆ ವಾಲಿದ್ದಾರೆ ಎನ್ನುವಂಥದ್ದು ಸ್ಪಷ್ಟ ಚಿತ್ರಣ ಇಲ್ಲಿ ಕಾಣುತ್ತದೆ. ಅದರಲ್ಲಿ 30 ಟಿ.ಎಂ.ಸಿ. ನೀರನ್ನು ನಾವು ಕುಡಿಯುವ ನೀರಿಗಾಗಿ ಕೇಳಿದ್ದೆವು. ಅದಕ್ಕೆ ಕೂಡ ನೀರು ಕೊಡಲಿಲ್ಲ. ಕೇರಳಕ್ಕೆ ಕೊಟ್ಟಿದ್ದ ನೀರನ್ನು ಅವರು Dam ಕಟ್ಟುವವರೆಗೂ ಕೂಡ ಆ ನೀರು ತಮಿಳುನಾಡಿಗೇ ಉಪಯೋಗವಾಗುತ್ತದೆಂದು ಹೇಳುತ್ತಾರೆ. ಇವತ್ತು environment ಗೆ 10 TMC ನೀರು, ಮತ್ತು sea ಗಾಗಿ 4 TMC ನೀರು, ಹೀಗೆ ಈ ಎಲ್ಲಾ ನೀರು ಸಹ ತಮಿಳುನಾಡಿಗೇ ಹೋಗುವಂಥದ್ದು. ಆಮೇಲೆ 40 TMC underground ನೀರನ್ನು ಕೂಡ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಇಂಥ ಪರಿಸ್ಥಿತಿಯಲ್ಲಿ Tribunal ಈ ತರಹ ನಿಲುವು ಏನು ತೆಗೆದುಕೊಂಡಿದೆ, ನಮ್ಮ ಸರ್ಕಾರ ಬಹಳ ಹಿಂದೆಯೇ ಇದರ ಮೇಲೆ ಬೆಳಕು ಚೆಲ್ಲಬೇಕಾಗಿತ್ತು. ನಾವು Tribunal ನ Section 5(3) ರ ಪ್ರಕಾರ ನ್ಯಾಯಮಂಡಳಿ ಗಮನಕ್ಕೆ ಇಲ್ಲಿಯವರೆಗೆ ತರದಿರುವುದು ಏಕೆ, ಎಂದು ಕೇಳುತ್ತಿದ್ದೇನೆ. ನಮ್ಮ ಎಂ.ಪಿ.ಪ್ರಕಾಶ್‌ರವರು ಈಗ ಸದನದಲ್ಲಿ ಇಲ್ಲ. ಅದನ್ನು ಕೇಳಬಹುದಾಗಿತ್ತು. ಆದರೆ, ಅದನ್ನು ಕೇಳಲಿಲ್ಲ. ಈಗ Article 131 ರ ಪಕಾರ 'ನಾವು Supreme Court ಗೆ ದಾವೆ ಮಾಡುತ್ತೇವೆಂದು' ಒಂದು ಕಡೆ ಹೇಳುತ್ತಿದ್ದೀರಿ. ಈ ಗೊಂದಲಮಯ ವಿಷಯದಲ್ಲಿ ಕೂಡ ಸರ್ಕಾರ ಒಂದು ದೃಢವಾದ ನಿಲುವನ್ನು ತೆಗೆದುಕೊಳ್ಳಲಿಲ್ಲ, ಏಕೆ? ಅಥವಾ ನಮ್ಮ ವಕೀಲರುಗಳು ಸರ್ಕಾರಕ್ಕೆ ಸರಿಯಾದ ಮಾಹಿತಿ ಕೊಡಲಿಲ್ಲವೇ? ಇದು

ಬಹಳ ಮುಖ್ಯವಾದ ವಿಷಯ. ವಕೀಲರು ಸರಿಯಾದ ಮಾಹಿತಿ ಕೊಡದೆ ಸರ್ಕಾರವನ್ನು ತಪ್ಪು ದಾರಿಗೆ ಎಳೆದರೇ ಎನ್ನುವಂಥದ್ದನ್ನು ಕೂಡ ನಾವು ಇಲ್ಲಿ ಚಿಂತನೆ ಮಾಡಬೇಕು. ಮಾನ್ಯ ಅಂಬರೀಷ್‌ರವರು ರಾಜೀನಾಮೆ ಕೊಟ್ಟಿದ್ದಾರೆ. ಅದನ್ನು accept ಮಾಡುವುದು ಬಿಡುವುದು ಅವರಿಗೆ ಬಿಟ್ಟಿದ್ದು. ಕೇಂದ್ರ ಸರ್ಕಾರಕ್ಕೆ ಮತ್ತು Parliament ನಲ್ಲಿ Speakerರವರಿಗೆ ಕೊಟ್ಟಿದ್ದಾರೆ.. ಅದನ್ನು ನೀವು ಮಾತನಾಡುವಾಗ ಹೇಳಿ. ನಾನು ಹೇಳುವುದನ್ನು ನಾನು ಹೇಳುತ್ತೇನೆ. ನೀವು ಪುನ: ಹಾಗೆಯೇ ಮಾತನಾಡುತ್ತೀರಲ್ಲ? ಮಾನ್ಯ ಅಧ್ಯಕ್ಷರೆ, ಮುಂದೆ ಇರುವ ಈ ಮೂರು ಜನರಿಗೆ ಮಾತನಾಡದೆ ಸುಮ್ಮನೆ ಇರಲಿಕ್ಕೆ ಹೇಳಿ. ಈ ಮಾಧುಸ್ವಾಮಿ ಮತ್ತು ಶ್ರೀರಾಮರೆಡ್ಡಿಯವರು ಬಹಳ disturb ಮಾಡುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಹಾಗಾದರೆ ಇವತ್ತು ಅಂಬರೀಷ್‌ರವರು ರಾಜೀನಾಮೆ ಕೊಟ್ಟಿದ್ದಾರೆಯೇ? ಇವತ್ತು ಕೊಟ್ಟಿದ್ದಾರೆ, ಇವತ್ತು ಪೇಪರ್‌ನಲ್ಲಿ ಬಂದಿದೆ ಎಂದು ಹೇಳಿದರೆ ಹೇಗೆ?

ಶ್ರೀ ಕೆ. ಶ್ರೀನಿವಾಸ ಗೌಡ : ನಾನು ಈ ದಿನ ಮಾತನಾಡುತ್ತಿದ್ದೇನೆ. ನೀವು ಕುಳಿತುಕೊಳ್ಳಿ ಇದರ ಬಗ್ಗೆ ಇನ್ನು ಹೇಳುವುದು ಜಾಸ್ತಿ ಇದೆ. ಮಾನ್ಯ ಅಂಬರೀಷ್‌ರವರು ರಾಜೀನಾಮೆ ಕೊಟ್ಟಿರುವುದನ್ನು ನಾವು ಇವತ್ತು ಸ್ವಾಗತ ಮಾಡಲೇಬೇಕು. ಏಕೆಂದರೆ, ನಮ್ಮ ರಾಜ್ಯದಲ್ಲಿ at least ಒಬ್ಬ ಲೋಕಸಭಾ ಸದಸ್ಯರಾಗಿದ್ದವರು ಮಂತ್ರಿಯಾಗಿದ್ದವರು ರಾಜೀನಾಮೆ ಕೊಟ್ಟು ರೈತರ ಸಂಕಷ್ಟಕ್ಕೆ ಸ್ಪಂದಿಸಿದ್ದಾರೆಂದು ಹೇಳಿದರೆ ನಿಜವಾಗಲೂ ಕೂಡ ಸಂತೋಷಪಡುವಂಥ ವಿಷಯ. ಅವರ ರಾಜೀನಾಮೆ ಒಪ್ಪಿಗೆ ಆಗಿರಬಹುದು ಆಗಿಲ್ಲದಿರಬಹುದು. ಆದರೆ ಉಳಿದ 27 ಜನ ಸಂಸದರು ತಮ್ಮ ರಾಜೀನಾಮೆಯನ್ನು ಕೊಡಬಹುದಾಗಿತ್ತು. ಅದು ಒಪ್ಪಿಗೆ ಯಾಗುತ್ತದೆಯೋ ಬಿಡುತ್ತದೆಯೋ ಅದು ಬೇರೆ ವಿಷಯ. ನಾಳೆ ನಾವು 224 ಜನ ಸದಸ್ಯರು ಕೂಡ ರಾಜೀನಾಮೆ ಕೊಡಬೇಕು ಎನ್ನುವ ತೀರ್ಮಾನಕ್ಕೆ ಬರಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಏನು ಹೇಳುವುದು ಏನೆಂದರೆ, ಮಾನ್ಯ ಅಂಬರೀಷ್‌ರವರು ರಾಜೀನಾಮೆ ಕೊಡಬಾರದಾಗಿತ್ತು ಲೋಕಸಭೆಗೆ ಹೋಗಿ ಇದರ ಬಗ್ಗೆ ಹೋರಾಟ ಅಲ್ಲಿ ಮಾಡಬೇಕಾಗಿತ್ತು.

ಶ್ರೀ ಕೆ. ಶ್ರೀನಿವಾಸ ಗೌಡ : ನಾನು ಏನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆಂದರೆ, 28 ಲೋಕಸಭಾ ಸದಸ್ಯರಲ್ಲಿ ಒಬ್ಬ ಸದಸ್ಯರು ಒಂದು ಕೂಗನ್ನು ನಮ್ಮ ರಾಜ್ಯದ ಪರವಾಗಿ ಹಾಕಿದ್ದಾರೆ ಎನ್ನುವುದರ ಬಗ್ಗೆ ನಾವೆಲ್ಲರೂ ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾಗಿರುವುದು. ಬೇರೆ ಬೇರೆ ಹಂತದಲ್ಲಿ ನಾವು ಯೋಚನೆ ಮಾಡಬಹುದು. ಅವರ ರಾಜೀನಾಮೆ accept ಆಗಬಹುದು, ಆಗದಿರಬಹುದು. ಇವತ್ತು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಖಾಸಗಿ ಕಾರ್‌ನಲ್ಲಿ ಮನೆಗೆ ಹೋದರು. ಇವತ್ತಿನ ಪರಿಸ್ಥಿತಿಯಲ್ಲಿ ನಾವು ಯೋಚನೆ ಮಾಡಬೇಕು ಎನ್ನುವಂಥದ್ದನ್ನು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ Parliament ಸದಸ್ಯರು ಕೂಡ Parliament ನಲ್ಲಿ ಕಾವೇರಿ ತೀರ್ಪನ್ನು ವಿರೋಧಿಸಿದ್ದಾರೆ. ಅವತ್ತು ವಿರೋಧ ಮಾಡಿದಾಗ ಇಡೀ ತಮಿಳುನಾಡಿನ ಎಲ್ಲಾ ಸದಸ್ಯರು ಅದರ ಜೊತೆಗೆ ಆ ಮಂತ್ರಿಗಳು ಕೂಡ ಬಾವಿಗೆ ಹೋಗುತ್ತಾರೆ. ಇದು ಬಹಳ ವಿಚಿತ್ರ. ತಮಿಳುನಾಡಿನ ಎಲ್ಲಾ ಸಂಸದರಿಗೆ ಎಷ್ಟು ಒಗ್ಗಟ್ಟು ಇದೆ ಎಂದರೆ, ಡಿಎಂಕೆ, ಎಡಿಎಂಕೆ, ಹತ್ತಾರು ಪಾರ್ಟಿಯ ಸದಸ್ಯರು ಜೊತೆಗೆ ಮಂತ್ರಿಗಳು ಕೂಡ ಬಾವಿಗೆ ಹೋಗಿ ಅವರ ರಾಜ್ಯದ ಹಿತವನ್ನು ಕಾಪಾಡುತ್ತಾರೆಂದರೆ ಎಷ್ಟು ಒಗ್ಗಟ್ಟು ಇದೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ರಾಜ್ಯದ ಕೆಲವು ರಾಜ್ಯಸಭೆಯ ಸದಸ್ಯರು ಇದರ ಬಗ್ಗೆ ಚಿಂತನೆಯನ್ನು ಮಾಡಲಿಲ್ಲ.

ಶ್ರೀ ಹೆಚ್.ಸಿ. ಮಹಾದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು) : ಮಾನ್ಯ ಶ್ರೀನಿವಾಸಗೌಡರವರು, ತಮಿಳುನಾಡಿನ ರಾಜಕೀಯ ಪಕ್ಷಗಳ ಸದಸ್ಯರು, ರಾಜ್ಯದ issue ಬಂದಾಗ ಹೇಗೆ ಒಗ್ಗಟ್ಟಾಗಿರುತ್ತಾರೆಂದು ಹೇಳುತ್ತಿದ್ದಾರೆ. ಇದಕ್ಕೆ ಸ್ವಲ್ಪ ಹಿಂದೆಯೇ ಮಾನ್ಯ ಅಂಬರೀಷ್‌ರವರ ಬಗ್ಗೆ ಮಾತನಾಡುತ್ತಾ ಇಲ್ಲಿಯೇ distinguish ಮಾಡುವ ಪ್ರಯತ್ನ ಮಾಡಿದರು. ಇವರಲ್ಲಿಯೇ ಸ್ಪಷ್ಟವಾದ ಒಂದು ನಿಲುವು ಇಲ್ಲ. ರಾಜ್ಯದ ಬಗ್ಗೆ ಕಳಕಳಿಯ ಮಾತುಗಳನ್ನು ಅವರು ಇಲ್ಲಿ ಪ್ರತಿಬಿಂಬಿಸಬೇಕು. ಅದು ಬಿಟ್ಟು ನಮ್ಮ ರಾಜ್ಯದಲ್ಲಿ ಒಬ್ಬ M.P. ರಾಜೀನಾಮೆ ಕೊಟ್ಟರು. ಅದು ಒಪ್ಪಿಗೆಯಾಯಿತೋ ಇಲ್ಲವೋ ಇನ್ನೊಬ್ಬರು ಹಾಗೆ ಹೇಳಿದರು, ಹೀಗೆ ಹೇಳಿದರು ಎಂದು ನೀವೇ ಅದನ್ನು ಬಹಿರಂಗಪಡಿಸಿ ಇದನ್ನು weak ಮಾಡುವ ಪ್ರಯತ್ನಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ. ಶ್ರೀನಿವಾಸ ಗೌಡ: ಆ ಒಗ್ಗಟ್ಟನ್ನು ನಾವು ತೋರಿಸಬೇಕೆನ್ನುವುದೇ ನನ್ನ ಇಚ್ಛೆ ಈ ಒಗ್ಗಟ್ಟು ನಮ್ಮಲಿಲ್ಲ. ಇದನ್ನು ನಾವು ನೇರವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಒಪ್ಪಿಕೊಳ್ಳಲೇಬೇಕು. ತಮಿಳುನಾಡಿನವರು ಏನು ಒಂದು ಒಗ್ಗಟ್ಟನ್ನು ತೋರಿಸುತ್ತಿದ್ದಾರೆ ಆ ಒಗ್ಗಟ್ಟು ನಮ್ಮಲಿಲ್ಲ. ಈ ಒಗ್ಗಟ್ಟನ್ನು ತೋರಿಸುವಂಥ ಕೆಲಸ ನಮ್ಮ ರಾಜ್ಯ ಸರಕಾರದ ವತಿಯಿಂದ ನಮ್ಮ Parliament ಸದಸ್ಯರು ಹಾಗೂ ನಮ್ಮ ವಿಧಾನಸಭೆಯ ಸದಸ್ಯರೆಲ್ಲರೂ ಕೂಡ ಒಗ್ಗಟ್ಟಾಗಿ ಇಲ್ಲಿ ನಮ್ಮ ಒಂದು ಹಾಹಾಕಾರವನ್ನು ಎತ್ತಿದರೂ ಕೂಡ ಎಲ್ಲೋ ತೊಡಕು ಇದೆ ಎಂದು ನನ್ನ ಭಾವನೆಯನ್ನು ನಾನು ವ್ಯಕ್ತಪಡಿಸುತ್ತೇನೆ. ನಿನ್ನೆ ಪತ್ರಿಕೆಗಳಲ್ಲಿ ಜಯಲಲಿತಾರವರು ಉಪವಾಸ ಕುಳಿತುಕೊಳ್ಳಲಿದ್ದಾರೆನ್ನುವ ವಿಚಾರ ನೋಡಿದೆ. ನಾನು ನಮ್ಮ ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಅವರು ಉಪವಾಸ ಕುಳಿತುಕೊಳ್ಳುವ ದಿವಸ ನಾವು 224 ಜನ ಸದಸ್ಯರು ಕೂಡ ಉಪವಾಸ ಕುಳಿತುಕೊಳ್ಳೋಣ. ಇನ್ನು ವಿಧಾನ ಸಭೆ ನಡೆಯುತ್ತಿದೆ. ನಾವು ವಿಧಾನ ಸಭೆಯಲ್ಲಿ ಉಪವಾಸ ಕುಳಿತುಕೊಂಡು ನಮ್ಮ ಒಗ್ಗಟ್ಟನ್ನು ಪ್ರದರ್ಶನ ಮಾಡೋಣ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ಹೇಳಿ, ಇನ್ನು ಹೆಚ್ಚಿಗೆ ಹೇಳದೇ, ತಾವು ಏಕೋ ಆ ಕಡೆನೇ ಇನ್ನು ಹೆಚ್ಚಿಗೆ ಮಾಡಬೇಕೆಂದು ಹೇಳುವುದರಿಂದ, ನಮಗೆ ಇವತ್ತು ಬಹಳ ಮುಖ್ಯವಾಗಿ ಬೇಕಾಗಿರುವುದು, ರಾಷ್ಟ್ರೀಯ ಜಲನೀತಿ. ರಾಷ್ಟ್ರೀಯ ಜಲನೀತಿಯನ್ನು ತರದೇ ಇದ್ದರೆ ಪರಿಸ್ಥಿತಿ ಕಷ್ಟವಾಗುತ್ತದೆ. ಹಿಂದೆ ಇದ್ದಂಥ ವಾಜಪೇಯಿ ಸರ್ಕಾರದಲ್ಲಿ linking water ಬಗ್ಗೆ ಮಾಡಿದರು. ಆದರೆ ಅದು ಏಕೆ ಎಲ್ಲಿ ಬಿತ್ತೊ ಏನು ಎಂಬುದು ಗೊತ್ತಾಗಲಿಲ್ಲ. ಸುರೇಶ್ ಬಾಬುರವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿ, ಅವರು ಅದನ್ನು ಕೊಡುವಂಥ ಪರಿಸ್ಥಿತಿ ಬಂದಾಗಲೂ ಕೂಡ ಅದು final ಆಗಲಿಲ್ಲವೆನ್ನುವಂಥ ನೋವು ನಮಗಿದೆ. Linking water ಕೂಡ ನಾವು ಮಾಡಬೇಕಾಗುತ್ತದೆ. ಕುಡಿಯುವ ನೀರಿಗೆ ಅದರಲ್ಲೂ ಬೆಳೆಯುತ್ತಿರುವ ಬೆಂಗಳೂರು geometrically growth ಆಗುತ್ತಿದೆ. ಬೆಂಗಳೂರು ಗ್ರಾಮಾಂತರ ಇರಬಹುದು, ನಗರ ಇರಬಹುದು. ಇಂಥ ಪರಿಸ್ಥಿತಿಯಲ್ಲಿ ಕುಡಿಯುವ ನೀರು ಕೂಡ ಕೊಡಲಿಕ್ಕೆ ಆಗದಿರುವಂಥ ಪರಿಸ್ಥಿತಿ ನಮಗೆ ಬಂದು ಕಷ್ಟವಾಗುತ್ತದೆ. ಕಾವೇರಿ ಕಣಿವೆಯಿಂದ ನೀರು ಕೊಡದೇ ಬಹಳ ಕಷ್ಟವಾಗುತ್ತದೆ. ಇಲ್ಲಿಂದ ಕೋಲಾರಕ್ಕೆ ಕೇವಲ 70 ಕೀಲೋ ಮೀಟರ್ ದೂರ

ಇದೆ. ಇಷ್ಟಿದ್ದರೂ ಕೂಡ ಇವತ್ತಿಗೂ ಕೋಲಾರಕ್ಕೆ ಕುಡಿಯುವ ನೀರು ಕೊಡಲಿಕ್ಕೆ ಆಗಿಲ್ಲ. ಆದರೆ ಗುಜರಾತ್‌ನಲ್ಲಿ ನರ್ಮದಾ ನದಿಯಿಂದ ಸುಮಾರು 780 ಕೀಲೋಮೀಟರ್ ದೂರವಿರುವ ಗಾಂಧಿದಾಮಕ್ಕೆ ಕುಡಿಯುವುದಕ್ಕೆ ನೀರು ಹಾಗೂ industries ಗಳಿಗೆ ನೀರನ್ನು ಕೊಟ್ಟಿದ್ದಾರೆ. ಅಲ್ಲಿ eco ಸಂಸ್ಥೆಯ ಒಂದು industries ಇದೆ. ಇಂಥ ಪರಿಸ್ಥಿತಿ ಇದ್ದಾಗಲೂ ಕೂಡ ನಮ್ಮ ಹಿಂದಿನ ರಾಜ್ಯ ಸರಕಾರಗಳು ಇದರ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಲಿಲ್ಲ, ಆದ್ಯತೆಗಳನ್ನು ಕೊಡಲಿಲ್ಲ. ಕನಿಷ್ಠ ಕುಡಿಯುವ ನೀರಿಗಾದರೂ ಇಡೀ ರಾಜ್ಯಕ್ಕೆ ನೀರು ಕೊಡಬಹುದಾಗಿತ್ತು. ಇವತ್ತು ಒಂದೊಂದು ಭಾಗದಲ್ಲಿ ಹಳ್ಳಿಗಳಲ್ಲಿ tanker ಗಳ ಮುಖಾಂತರ ಏನು ಕುಡಿಯುವ ನೀರನ್ನು ಕೊಡುವಂಥ ಪರಿಸ್ಥಿತಿಗೆ ನಾವು ಏನು ತಲುಪಿದ್ದೇವೆ ಇದನ್ನು ನೀಗಿಸುವಂಥ ಅವಕಾಶ ಇದ್ದರೂ ಕೂಡ ಹಿಂದಿನ ಎಲ್ಲಾ ಸ್ವತಂತ್ರ ಬಂದಾಗಿನಿಂದ ಕೂಡ ಇದಕ್ಕೆ ಆದ್ಯತೆಗಳನ್ನು ಕೊಡಲಿಲ್ಲ ಎನ್ನುವಂಥ ನೋವನ್ನು ವ್ಯಕ್ತಪಡಿಸಿ, ಇವತ್ತು ನಾವೇನು ಕುಡಿಯುವ ನೀರಿಗೂ ಕೂಡ ಕಷ್ಟದಲ್ಲಿದ್ದೇವೆ ಹೀಗಿರುವಾಗ ಇಂಥದ್ದೆಕ್ಕೆಲ್ಲಾ ನಾವು ಹೆಚ್ಚಿನ ಆದ್ಯತೆಗಳನ್ನು ಕೊಡಬೇಕು. ಇವತ್ತು ಇದನ್ನು ನಾವು ಸಾರಾಸಗಟಾಗಿ ತಿರಸ್ಕರಿಸಬೇಕು. tribunal order ಅನ್ನು ಸಾರಾಸಗಟಾಗಿ ತಿರಸ್ಕರಿಸಿ ಅದನ್ನು resolution ಮೂಲಕ ಒಕ್ಕೋರಲಿನಿಂದ ಅಂಗೀಕರಿಸಬೇಕು ಎಂದು ಹೇಳುತ್ತಾ ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯವನ್ನು ಮಂಡಿಸುವುದು.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ನಾಳೆ ಬಜೆಟ್ ಮಂಡನೆ ಇದೆ. 14ನೇ ತಾರೀಖು ಸಭೆ ಏಕೆ ಕರೆಸಿದಿರೆಂದು ಪ್ರಸ್ತಾಪ ಮಾಡಿದ್ದಕ್ಕೆ, ನಾವೆಲ್ಲರೂ ಕೂಡ ರಾಜ್ಯದ ಮುಂದೆ ಇರತಕ್ಕಂಥ ಕಾವೇರಿಯ ಪ್ರಶ್ನೆ ಏನು ಎಂಬುದು ನಮ್ಮೆಲ್ಲರನ್ನು ಕಾಡುತ್ತಿದೆ. ಸದನದಲ್ಲಿ ಕಾವೇರಿಯ ಬಗ್ಗೆ ಇನ್ನೂ ಕೂಡ ತೀರ್ಮಾನವಾಗಿಲ್ಲ. ಕಾವೇರಿಯ ಬಗ್ಗೆ ಎಲ್ಲಾ ಸದನದ ಹಿರಿಯ ಸದಸ್ಯರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು ಇದರ ಪ್ರತಿ ಕೊಟ್ಟಿಲ್ಲವೆ? ಪ್ರತಿ ಕೊಡಿ. ಇದರ ಬಗ್ಗೆ ಚರ್ಚೆಯಾಗಬೇಕೆಂದು ನಾವು ಪಟ್ಟು ಹಿಡಿದಾಗ ಸರ್ಕಾರವೂ ಕೂಡ ಇದನ್ನು prestige ಆಗಿ ತೆಗೆದುಕೊಳ್ಳದೇ,

ಮಾನ್ಯ ಸಭಾಧ್ಯಕ್ಷರ ಕೋಣೆಯಲ್ಲಿ ಒಂದು ಸಭೆಯಾಯಿತು. ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕು ಎಂಬ ಬಗ್ಗೆ ಅನುಮತಿ ಪಡೆದು ಎರಡು ದಿನಗಳ ಕಾಲ ಇಲ್ಲಿ ಚರ್ಚೆಯಾಯಿತು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಇದು ಸರಿಯಾಗುವುದಿಲ್ಲ. ಕೊನೆಯಲ್ಲಿ "ತಿರಸ್ಕರಿಸಿದ್ದೇವೆ" ಎನ್ನುವುದನ್ನು ನೀವು ಸ್ಪಷ್ಟವಾಗಿ ಹೇಳಬೇಕು. ಇಲ್ಲದಿದ್ದರೆ ಅದಕ್ಕೆ ಶಕ್ತಿ ಬರುವುದಿಲ್ಲ. ಈ ಶಾಸನ ಸಭೆಯಲ್ಲಿ ಸುಮ್ಮನೆ ನಾವು ಸತ್ತ ಕುದುರೆ ಹಿಡಿದುಕೊಂಡು ಹೊಡೆದ ಹಾಗೆ ಆಗುತ್ತದೆ. ಅದಕ್ಕೆ ಶಕ್ತಿ ಬರುವುದಿಲ್ಲ. ಆದುದರಿಂದ ದಯವಿಟ್ಟು ತಾವು ಅದನ್ನು ಸೇರಿಸಿದರೆ ನನ್ನ ಸಂಪೂರ್ಣ ಬೆಂಬಲವೂ ಅದಕ್ಕೆ ಇರುತ್ತದೆ. ಇಲ್ಲದಿದ್ದರೆ ಅದು ಸರಿಯಾದ ನಿರ್ಣಯ ಆಗುವುದಿಲ್ಲ. ಆದುದರಿಂದ ನೀವು "ತಿರಸ್ಕರಿಸಿದ್ದೇವೆ" ಎಂದು ಹೇಳಿದರೆ ಅದಕ್ಕೆ ಶಕ್ತಿ ಬರುತ್ತದೆ. ಸುಮ್ಮನೆ ಅದು ಬಿಟ್ಟು ಸುತ್ತಿ ಬಳಸಿ ಏನೋ ಹೇಳಿಕೊಂಡು ಹೋದರೆ ಆ ನಿರ್ಣಯಕ್ಕೆ ಬೆಲೆ ಬರುವುದಿಲ್ಲ. ಚರ್ಚೆಗೂ ಬೆಲೆ ಬರುವುದಿಲ್ಲ, ನಿರ್ಣಯಕ್ಕೂ ಬೆಲೆ ಬರುವುದಿಲ್ಲ. ಹೀಗಾಗಿ ತಾವು ತಿರಸ್ಕರಿಸಿದ್ದೇವೆ ಎಂದು ಹೇಳಬೇಕು.

ಶ್ರೀ ಎನ್. ಧರ್ಮಸಿಂಗ್ : ಎಲ್ಲಾ ದೃಷ್ಟಿಯಲ್ಲೇ ಇಟ್ಟುಕೊಂಡೇ ಇದನ್ನು ಮಾಡಿರುವುದು.

ಶ್ರೀ ಹೆಚ್. ನಿಂಗಪ್ಪ : "ತಿರಸ್ಕರಿಸಿದ್ದೇವೆ" ಎಂದ ಮೇಲೆ ನಾವು appeal ಹೋಗುವ ಅವಶ್ಯಕತೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರಿನ್ನು ಮಂಡಿಸಿಲ್ಲ. ಅವರೇನು ಮಂಡಿಸಿದ್ದಾರೆಂದು ನಿಮಗೆ ಏನು ಗೊತ್ತು?

ಶ್ರೀ ಎನ್. ಧರ್ಮಸಿಂಗ್ : ಎರಡು ದಿನಗಳ ಕಾಲ ವಿವರವಾದ ಚರ್ಚೆಯಾಗಿದೆ. ಕರ್ನಾಟಕ ವಿಧಾನ ಸಭೆಯನ್ನು ಇವತ್ತು ರಾಜ್ಯದ ಜನರೆಲ್ಲರೂ ನೋಡುತ್ತಿದ್ದಾರೆ. ನನಗೆ ಅನ್ನಿಸುತ್ತಿದೆ 13 ತಿಂಗಳ ಹಿಂದೆ ಈ ಸರ್ಕಾರ ಏನು ಅಸ್ತಿತ್ವಕ್ಕೆ ಬಂದಿದೆ, ಅದರ ಹಿನ್ನೆಲೆಯಲ್ಲಿ ಈ ಒಂದು ನಿರ್ಣಯ ಬಹಳ ಪ್ರಮುಖವಾಗಿ ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಕೂಡಿ ತೆಗೆದುಕೊಂಡಿದ್ದೇವೆ. ಇವತ್ತು ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಕೂಡ ಇಂಥ ಐತಿಹಾಸಿಕವಾದಂಥ ನಿರ್ಣಯವನ್ನು ಸದನದಲ್ಲಿ ಮಂಡಿಸತಕ್ಕಂಥ ರೀತಿಯಲ್ಲಿ ಇದಕ್ಕೆ ಗೌರವ ಕೊಡತಕ್ಕಂಥ ರೀತಿಯಲ್ಲಿ ಈ ಸಂದರ್ಭದಲ್ಲಿ ಸದನದಲ್ಲಿ ಇರಬೇಕಾಗಿತ್ತು ಅವರು ಏಕೋ

ಇಲ್ಲ. ಅದು ಅವರಿಗೆ ಬಿಟ್ಟಿದ್ದು. ಈಗ ಇದರ ಬಗ್ಗೆ ಸುದೀರ್ಘವಾದಂಥ ಚರ್ಚೆಯಾಗಿದೆ. ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ನಿಂತಿಲ್ಲ. ನಮ್ಮ ಎಲ್ಲಾ ಹಿರಿಯ ಸದಸ್ಯರು ಕೂಡ ಬಹಳಷ್ಟು ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಅದರ ಹಿನ್ನೆಲೆಯಲ್ಲಿ ಇವತ್ತು ನಾನು ನಿನ್ನೆ ನಾವು ಏನು resolutionನ್ನು move ಮಾಡಿದ್ದೇವೆ. ಇವತ್ತು ಅದೇ ರೀತಿಯಾಗಿ ಅಂತಿಮವಾಗಿ ಎಲ್ಲರನ್ನೂ ಕೂಡ ಸಂಪರ್ಕ ಮಾಡಿದ್ದೇವೆ. ಇವತ್ತು ನಮ್ಮ ಪ್ರಕಾಶ್‌ರವರು, ಖರ್ಗೆಯವರ ಜೊತೆಯಲ್ಲಿ ಶ್ರೀ ಸಿದ್ದರಾಮಯ್ಯ, ಶ್ರೀ ಮಾಧುಸ್ವಾಮಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರ ಜೊತೆಯಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಕೊನೆಯದಾಗಿ ಸದ್ಯದಲ್ಲಿ ಹೆಚ್ಚು ಕಡಿಮೆ ಅದೇ ಅರ್ಥ ಬರುವಂತಹ ರೀತಿಯಲ್ಲಿ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ತಾವು ದಯವಿಟ್ಟು ನಿರ್ಣಯವನ್ನು ಮಂಡಿಸಿ. ಈ ನಿರ್ಣಯಕ್ಕೆ ನಮ್ಮ ಒಪ್ಪಿಗೆ ಇಲ್ಲ. ತಿರಸ್ಕರಿಸಿದ್ದೇವೆಂದು ಸ್ಪಷ್ಟವಾಗಿ ಹೇಳಬೇಕು. ಇಲ್ಲದೇ ಇದ್ದರೆ ರಾಜ್ಯದ ಜನರು ಅದನ್ನು ಬಯಸುತ್ತಿದ್ದಾರೆ. ಶಾಸನಸಭೆಯಲ್ಲಿ ಈ ನ್ಯಾಯಮಂಡಳಿಯ ತೀರ್ಪು ರಾಜ್ಯದ ಜನತೆಗೆ "ಮರಣ ಶಾಸನ"ವಾಗಿದೆ ಅದಕ್ಕಾಗಿ ತಿರಸ್ಕರಿಸಿದ್ದೇವೆಂದು ದಯವಿಟ್ಟು ಹೇಳಬೇಕು.

ಶ್ರೀ ಧರ್ಮಸಿಂಗ್: ಈ ಬಗ್ಗೆ ಸಭಾಧ್ಯಕ್ಷರ ಕೊಠಡಿಯಲ್ಲಿ ತೀರ್ಮಾನ ಮಾಡಿದ್ದೇವೆ. ಯಾರಿಗೂ ಕೂಡ ನೋವಾಗುವಂತಹ ರೀತಿಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತ ಮಾಡತಕ್ಕಂತಹ ರೀತಿಯಲ್ಲಿ, ಇದನ್ನು ಅಂಗೀಕರಿಸಬೇಕು.

2. ನಿರ್ಣಯ

ವಿಷಯ:- ಕಾವೇರಿ ನ್ಯಾಯಮಂಡಳಿ ತೀರ್ಪಿನ ಬಗ್ಗೆ - ನಿರ್ಣಯ

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ಕಾವೇರಿ ನ್ಯಾಯಾಧೀಕರಣದ ದಿನಾಂಕ: 5.2.2007ರಂದು ತನ್ನ ಅಂತಿಮ ತೀರ್ಪನ್ನು ನೀಡಿದೆ. ಈ ಐತೀರ್ಪಿನಿಂದ ರಾಜ್ಯದ ಹಾಗೂ ರೈತರ ಹಿತಾಸಕ್ತಿಗೆ ಬಾಧಕವಾಗಿದೆ. ಕಾವೇರಿ ಕಣಿವೆಯ ಜಲಾನಯನದ ನೈಜ ಸ್ಥಿತಿಯ ಹಿನ್ನೆಲೆಯಲ್ಲಿ ಐತೀರ್ಪನ್ನು ಕಾರ್ಯಗತಗೊಳಿಸುವುದು, ಸಾಧ್ಯವಾಗದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ರಾಷ್ಟ್ರೀಯ